
# ಸಹಜಮಾರ್ಗದ
# ಹತ್ತು ನಿಯಮಗಳ
# ವ್ಯಾಖ್ಯಾನ



ಶ್ರೀ ರಾಮಚಂದ್ರ

ಓಂ ತತ್‌ಸತ್

## ಸಹಜಮಾರ್ಗದ

# ಹತ್ತು ನಿಯಮಗಳ ವ್ಯಾಖ್ಯಾನ

ಲೇಖಕರು : **ಶ್ರೀ ರಾಮಚಂದ್ರ**

ಅನುವಾದಕರು : **ಶ್ರೀ ಶ್ರೀ. ಆ. ಸರ್ನಾಡ,**
ಎಂ.ಎ., ಎಂ.ಎಡ್.

ಬೆಲೆ : **ರೂ. ೧೫/-**

ಪ್ರಕಾಶಕರು :

**ಶ್ರೀ ರಾಮಚಂದ್ರ ಮಿಷನ್**
( ಪ್ರಕಾಶನ ವಿಭಾಗ )
ಷಾಹಜಹಾನ್‌ಪೂರ್ (ಉ. ಪ್ರ.)

**ಪ್ರತಿಗಳಿಗಾಗಿ ಸಂಪರ್ಕ ವಿಳಾಸ :**
ಯೋಗಾಶ್ರಮ ಕಮಿಟಿ
೫೩, ಬನಶಂಕರಿ ನಗರ
ಧಾರವಾಡ – ೫೮೦ ೦೦೮

ಮೊದಲನೆಯ ಆವೃತ್ತಿ : ೧೯೭೦
( ೧೦೦೦ ಪ್ರತಿಗಳು )

ಎರಡನೆಯ ಆವೃತ್ತಿ : ೧೯೯೩
( ೧೦೦೦ ಪ್ರತಿಗಳು )


ಹಕ್ಕುಗಳನ್ನು ಕಾಯ್ದಿಡಲಾಗಿದೆ.

ಮುದ್ರಕರು :
ಸೋಮಶೇಖರ ಆಕಳವಾಡಿ
ಮನೋಹರ ಮುದ್ರಣಾಲಯ
ಮಾರ್ಕೆಟ್, ಧಾರವಾಡ – ೧

ಓಂ ತತ್‌ಸತ್

ಸಾಧನಮಾರ್ಗವು ಅದ್ಭುತವಾದುದು
ಹೇಳಲೇನು ಅದನು !
ಶುದ್ಧಸತ್ಯವನು ಎಂತು ಬಣ್ಣಿಪುದು
ವರ್ಣವಿಲ್ಲದುದನು ?

ತಮದ ತೆರೆಯೊಳಗೆ ಗುಪ್ತವಾಗಿದ್ದ
ಸತ್ಯ ತಾನು ಅಲ್ಲೆ
ಪ್ರಕಟವಾಗಿ ರಾಜಿಸಿತು ಮತ್ತೆ
ಆ ತಮದ ತೆರೆಯೊಳಲ್ಲೆ.



*Mahatma Shri Ram Chandraji Maharaj, Founder - President*
*Shri Ram Chandra Mission, Shahjahanpur (U.P.)*

# ಪ್ರಸ್ತಾವನೆ

ಜಗತ್ತಿನಲ್ಲಿ ಪ್ರತಿಯೊಂದು ಸಂಸ್ಥೆಗೂ ತನ್ನದೇ ಆದ ಒಂದು ವೈಶಿಷ್ಟ್ಯವಿದ್ದು ಅದೇ ವಿಚಾರಗಳ ಕೇಂದ್ರವಾಗಿರುತ್ತದೆ. ಒಬ್ಬ ಮಹಾಪುರುಷನೇ ಇಂಥ ಸಂಸ್ಥೆಯ ಸ್ಥಾಪಕನಾಗುತ್ತಾನೆ. ಆತನು ಇದೇ ಕಾರ್ಯಕ್ಕಾಗಿ ಪ್ರಪಂಚದಲ್ಲಿ ಅವತರಿಸಿ ಭಗವದಾದೇಶದಂತೆ ಕೆಲಸ ಮಾಡು ವನು. ಪ್ರಪಂಚವನ್ನು ಬೇರೆ ಬೇರೆ ರೀತಿಗಳಲ್ಲಿ ಸುವ್ಯವಸ್ಥಿತಗೊಳಿಸುವುದ-ಕ್ಕಾಗಿ ಮಹಾತ್ಮರ ಜನ್ಮವಾಗುವುದು. ಜಗತ್ತಿನಲ್ಲಿ ಅಂಧಕಾರ ಹೆಚ್ಚಿದಾಗೆಲ್ಲ ಅಂಥ ಮಹಾಪುರುಷನೊಬ್ಬನು ಅವಶ್ಯವಾಗಿ ಹುಟ್ಟಿ ಅಂಧಕಾರದ ಆವರಣ ವನ್ನು ದೂರಮಾಡುತ್ತಾನೆ.

ಆಧ್ಯಾತ್ಮಿಕ ಕ್ಷೇತ್ರದಲ್ಲಿ ಹಿಂದುಗಳು ತಮ್ಮ ಕರ್ತವ್ಯವನ್ನು ಮರೆತು ಅದರಿಂದ ದೂರವಾದರು. ಅದು ಇವರ ಕೈಬಿಟ್ಟು ಅನ್ಯರ ವಶಕ್ಕೆ ಹೋಯಿತು. ಇದರ ಪರಿಣಾಮವಾಗಿ ಅವರು ಸತ್ಯವನ್ನು ಸಂಪೂರ್ಣವಾಗಿ ದುರ್ಲಕ್ಷಿಸಿದರು. ಆದುದರಿಂದ ನಿಸರ್ಗವು ಫತೆಹ್‌ಗಡದ ಮಹಾತ್ಮಾ ರಾಮಚಂದ್ರಜಿಯವರಂಥ ಸಮರ್ಥ ಗುರುಗಳನ್ನು ಜಗತ್ತಿನ ಸುಧಾರಣೆಗಾಗಿ ಕಳಿಸಬೇಕಾಯಿತು. ೧೮೭೩ ನೆಯ ಇಸ್ವಿಯ ೨ ನೆಯ ಫೆಬ್ರುವರಿ, ವಸಂತ ಪಂಚಮಿಯ ದಿನ ಇವರ ಜನ್ಮವಾಯಿತು. ಅವರು ಆಧ್ಯಾತ್ಮಿಕ ಕ್ಷೇತ್ರದಲ್ಲಿ ತಮ್ಮ ಕರ್ತವ್ಯವನ್ನು ಪೂರಯಿಸಿ ಭೌತಿಕಪ್ರಪಂಚವನ್ನು ಬಿಟ್ಟು ಹೋದರು. ಅವರ ತರುವಾಯ ಈ ಕಾರ್ಯವು ಅವರ ಸರ್ವಶ್ರೇಷ್ಠ ಶಿಷ್ಯರಾದ ಷಾಹಜಹಾನ್‌ಪುರದ ಮಹಾತ್ಮಾ ರಾಮಚಂದ್ರಜಿಯವರ ಪಾಲಿಗೆ ಬಂದಿತು. ಅವರ ಜೀವಿತಕಾಲದಲ್ಲಿಯೆ ಇವರಿಗೆ ಆಧ್ಯಾತ್ಮಿಕ ಪ್ರಗತಿಗೆ ಅವಶ್ಯವಾದ ಅತ್ಯುಚ್ಚಸಿದ್ಧಿಗಳು ಪ್ರಾಪ್ತವಾಗತೊಡಗಿದ್ದವು. ಕಟ್ಟ ಕಡೆಗೆ ಅವರು ದೈವಾಧೀನರಾದ ಹನ್ನೆರಡು ವರ್ಷಗಳ ತರುವಾಯ ಅವರ ಸಂಕಲ್ಪವು ಕಾರ್ಯರೂಪಕ್ಕೆ ಬಂದಿತು. ಪೂರ್ವಕಾಲದ ಮಹಾನುಭಾವರ ಬಗೆಗೂ ಹೀಗೆಯೆ ಆದದ್ದುಂಟು. ಮತ್ತು ಇಂಥ ಅನೇಕ ಉದಾಹರಣೆಗಳೂ ನಮಗೆ

# ಪ್ರಸ್ತಾವನೆ

ಜಗತ್ತಿನಲ್ಲಿ ಪ್ರತಿಯೊಂದು ಸಂಸ್ಥೆಗೂ ತನ್ನದೇ ಆದ ಒಂದು ವೈಶಿಷ್ಟ್ಯವಿದ್ದು ಅದೇ ವಿಚಾರಗಳ ಕೇಂದ್ರವಾಗಿರುತ್ತದೆ. ಒಬ್ಬ ಮಹಾಪುರುಷನೇ ಇಂಥ ಸಂಸ್ಥೆಯ ಸ್ಥಾಪಕನಾಗುತ್ತಾನೆ. ಆತನು ಇದೇ ಕಾರ್ಯಕ್ಕಾಗಿ ಪ್ರಪಂಚದಲ್ಲಿ ಅವತರಿಸಿ ಭಗವದಾದೇಶದಂತೆ ಕೆಲಸ ಮಾಡು ವನು. ಪ್ರಪಂಚವನ್ನು ಬೇರೆ ಬೇರೆ ರೀತಿಗಳಲ್ಲಿ ಸುವ್ಯವಸ್ಥಿತಗೊಳಿಸುವುದ-ಕ್ಕಾಗಿ ಮಹಾತ್ಮರ ಜನ್ಮವಾಗುವುದು. ಜಗತ್ತಿನಲ್ಲಿ ಅಂಧಕಾರ ಹೆಚ್ಚಿದಾಗೆಲ್ಲ ಅಂಥ ಮಹಾಪುರುಷನೊಬ್ಬನು ಅವಶ್ಯವಾಗಿ ಹುಟ್ಟಿ ಅಂಧಕಾರದ ಆವರಣ ವನ್ನು ದೂರಮಾಡುತ್ತಾನೆ.

ಆಧ್ಯಾತ್ಮಿಕ ಕ್ಷೇತ್ರದಲ್ಲಿ ಹಿಂದುಗಳು ತಮ್ಮ ಕರ್ತವ್ಯವನ್ನು ಮರೆತು ಅದರಿಂದ ದೂರವಾದರು. ಅದು ಇವರ ಕೈಬಿಟ್ಟು ಅನ್ಯರ ವಶಕ್ಕೆ ಹೋಯಿತು. ಇದರ ಪರಿಣಾಮವಾಗಿ ಅವರು ಸತ್ಯವನ್ನು ಸಂಪೂರ್ಣವಾಗಿ ದುರ್ಲಕ್ಷಿಸಿದರು. ಆದುದರಿಂದ ನಿಸರ್ಗವು ಫತೆಹ್‌ಗಡದ ಮಹಾತ್ಮಾ ರಾಮಚಂದ್ರಜಿಯವರಂಥ ಸಮರ್ಥ ಗುರುಗಳನ್ನು ಜಗತ್ತಿನ ಸುಧಾರಣೆಗಾಗಿ ಕಳಿಸಬೇಕಾಯಿತು. ೧೮೭೩ ನೆಯ ಇಸ್ವಿಯ ೨ ನೆಯ ಫೆಬ್ರುವರಿ, ವಸಂತ ಪಂಚಮಿಯ ದಿನ ಇವರ ಜನ್ಮವಾಯಿತು. ಅವರು ಆಧ್ಯಾತ್ಮಿಕ ಕ್ಷೇತ್ರದಲ್ಲಿ ತಮ್ಮ ಕರ್ತವ್ಯವನ್ನು ಪೂರಯಿಸಿ ಭೌತಿಕಪ್ರಪಂಚವನ್ನು ಬಿಟ್ಟು ಹೋದರು. ಅವರ ತರುವಾಯ ಈ ಕಾರ್ಯವು ಅವರ ಸರ್ವಶ್ರೇಷ್ಠ ಶಿಷ್ಯರಾದ ಷಾಹಜಹಾನ್‌ಪುರದ ಮಹಾತ್ಮಾ ರಾಮಚಂದ್ರಜಿಯವರ ಪಾಲಿಗೆ ಬಂದಿತು. ಅವರ ಜೀವಿತಕಾಲದಲ್ಲಿಯೆ ಇವರಿಗೆ ಆಧ್ಯಾತ್ಮಿಕ ಪ್ರಗತಿಗೆ ಅವಶ್ಯವಾದ ಅತ್ಯುಚ್ಚ ಸಿದ್ಧಿಗಳು ಪ್ರಾಪ್ತವಾಗತೊಡಗಿದ್ದವು. ಕಟ್ಟ ಕಡೆಗೆ ಅವರು ದೈವಾಧೀನರಾದ ಹನ್ನೆರಡು ವರ್ಷಗಳ ತರುವಾಯ ಅವರ ಸಂಕಲ್ಪವು ಕಾರ್ಯರೂಪಕ್ಕೆ ಬಂದಿತು. ಪೂರ್ವಕಾಲದ ಮಹಾನುಭಾವರ ಬಗೆಗೂ ಹೀಗೆಯೆ ಆದದ್ದುಂಟು. ಮತ್ತು ಇಂಥ ಅನೇಕ ಉದಾಹರಣೆಗಳೂ ನಮಗೆ

ದೊರೆಯುತ್ತವೆ. ಭಗವದಾದೇಶದಂತೆ ಬೇಕಾದ ಬದಲಾವಣೆಯನ್ನುಂಟು ಮಾಡುವುದು ಇಂಥ ಮಹಾಪುರುಷನನ್ನೇ ಸಂಪೂರ್ಣವಾಗಿ ಅವಲಂಬಿಸಿರುತ್ತದೆ. ಸಮರ್ಥಗುರು ತನ್ನ ಶಿಷ್ಯರಲ್ಲಿ ಅತ್ಯುತ್ತಮನಾದ ಹಾಗು ತನ್ನ ಪ್ರತಿನಿಧಿಯಂತೆ ಕೆಲಸಮಾಡಲು ಯೋಗ್ಯನಾದವನಲ್ಲಿ ತಾದಾತ್ಮ್ಯ ಹೊಂದಬಹುದು. ಅಂತೆಯೆ, ಕ್ರಿ. ಶ. ೧೯೨೮ ರಲ್ಲಿ ಪರಮಪೂಜ್ಯ ಗುರುಗಳು ತಮ್ಮ ಒಬ್ಬ ಉತ್ತಮ ಶಿಷ್ಯರೂ ಷಾ ಹ ಜ ಹಾ ನ್ ಪೂ ರ್ ಸತ್ಸಂಗದ ಸಂಚಾಲಕರೂ ಆದ ಮುನ್ಷಿ ಮದನಮೋಹನಲಾಲರ ಮುಂದೆ, "ರಾಮಚಂದ್ರನು ಕುಲದೀಪಕನಾಗುವನೆ"ಂದು ಹೇಳಿದ್ದರು. ಈ ಮಾತನ್ನು ಆ ಕಾಲದ ಇತರ ಅಂತರಂಗದ ಸತ್ಸಂಗಿ ಬಾಂಧವರಿಗೂ ತಿಳಿಸಲಾಗಿದ್ದಿತು.

ಯಾವನೊಬ್ಬ ಮನುಷ್ಯನನ್ನು ತಮ್ಮಂತೆ ಮಾಡುವುದು ಪೂಜ್ಯ ಲಾಲಾಜಿಯಂಥ ಮಹಾತ್ಮರಿಗೆ ಹೊಸ ಸಂಗತಿಯೇನೂ ಆಗಿರಲಿಲ್ಲ. ಕೇವಲ ದೃಷ್ಟಿಮಾತ್ರದಿಂದ ಕಾಲಕ್ಕೆ ತಕ್ಕಂತೆ ಮನುಷ್ಯನನ್ನು ಪರಿವರ್ತಿಸುವ ಅದ್ಭುತ ಶಕ್ತಿಯು ಅವರಲ್ಲಿದ್ದಿತೆಂಬ ಮಾತು ಅವರ ಅನುಯಾಯಿಗಳಲ್ಲಿ ಪ್ರತಿಯೊಬ್ಬನಿಗೂ ಗೊತ್ತಿದೆ. ಅವರ ಮಹಾಸಾಮರ್ಥ್ಯದ ಕಲ್ಪನೆಮಾಡಲು ವಿಧಾತನನ್ನುಳಿದು ಬೇರೆಯವರಿಗೆ ಶಕ್ಯವಿಲ್ಲ. ಈ ನಿಯಮಗಳೂ ಇವುಗಳ ವ್ಯಾಖ್ಯಾನರೂಪದ ತಾತ್ತ್ವಿಕ ಸಮಾಲೋಚನೆಯೂ ಅವರ ಅಪರಿಮಿತ ಶಕ್ತಿ-ಸಾಮರ್ಥ್ಯಗಳ ದ್ಯೋತಕವಾಗಿವೆ. ಈ ಆಧ್ಯಾತ್ಮಿಕ ತತ್ತ್ವಜ್ಞಾನವು, ಇದನ್ನು ಲಕ್ಷ್ಯಗೊಟ್ಟು ಓದಿ ತಿಳಿದುಕೊಳ್ಳಬಲ್ಲ ಜನರಿಗೆ ಆಶ್ಚರ್ಯವನ್ನುಂಟು ಮಾಡದಿರದು.

ಜನರು ಷಾಹಜಹಾನ್‌ಪುರದ ಮಹಾತ್ಮಾ ರಾಮಚಂದ್ರಜಿಯವರ ಯೌಗಿಕ ಸಾಮರ್ಥ್ಯವನ್ನು ಅವರ ಹೃದಯದಿಂದ ಹೊರಹೊರಡುವ ತರಂಗಗಳಿಂದ ಅಳೆಯಬಹುದು. ಮಾನವಜೀವನದ ಸಮಸ್ಯೆಯನ್ನು ಬಿಡಿಸಲು ಅವರು 'ಸಹಜಮಾರ್ಗ'ವನ್ನು ಪ್ರಚುರಗೊಳಿಸಿದರು. ಈ ಹೆಸರು ಅವರಿಗೆ ನೇರವಾಗಿ ಮೇಲಿನಿಂದ ಸ್ಫುರಿಸಿದೆ. ಜನರು ನಂಬಲಿ ಅಥವಾ ಬಿಡಲಿ. ನಿಸರ್ಗವು ಆ ಕಡೆಗೇ ಸಾಗಿದೆ. ಈ ಬಗ್ಗೆ ಭಿನ್ನಾಭಿಪ್ರಾಯಗಳಿರಬಹುದು. ಪ್ರಾಯಃ ಹಿಂದಿನಿಂದಲೂ ಹೀಗಾಗುತ್ತಲೇ ಬಂದಿದೆ.

ಮಹಾಪುರುಷರ ಜೀವನದಲ್ಲಿ, ಜನತೆಯು ಅವರನ್ನು ಎಲ್ಲ ರೀತಿಯಿಂದಲೂ ಅವಹೇಳನ ಮಾಡಿದ ಘಟನೆಗಳು ಸಂಭವಿಸಿದ್ದುಂಟು. ಶ್ರೀಕೃಷ್ಣನೂ ಇತರ ಸಂತರೂ ಇದಕ್ಕೆ ಉದಾಹರಣೆಯಾಗಿದ್ದಾರೆ. ಒಂದು ದೊಡ್ಡ ತೊಂದರೆ-ಯೆಂದರೆ, ಜನರು ಪ್ರತ್ಯಕ್ಷಾನುಭವ ಪಡೆಯದೆಯೆ ಯಾವನಾದರೊಬ್ಬ ಮಹಾಪುರುಷನ ಯೋಗ್ಯತೆಯನ್ನು ನಿರ್ಣಯಿಸಿ ಬಿಡುತ್ತಾರೆ. ನಿಸರ್ಗದತ್ತ-ವಾದ ಸ್ವತಂತ್ರ ಮನೋಭಾವವು ಇಂಥ ಮಹಾಪುರುಷನನ್ನು ಲೋಕಹಿತದ ಉಪಾಯಗಳಲ್ಲಿ ತೊಡಗಿಸುತ್ತದೆ. ಇದಕ್ಕಾಗಿ ಆವಶ್ಯಕವಾದ ಶಕ್ತಿಯು ನಿಸರ್ಗದಿಂದಲೇ ಅವನಿಗೆ ದೊರೆಯುವುದು. ನಿಸರ್ಗವು ಅವನಿಂದ ಏನನ್ನೂ ಬಚ್ಚಿಟ್ಟುಕೊಳ್ಳುವುದಿಲ್ಲ. ದೈವೀ ಸಂಕಲ್ಪದ ಮೇರೆಗೆ ಕಾಲಕ್ಕೆ ತಕ್ಕಂತೆ ಮಾನವತೆಯ ಆಧ್ಯಾತ್ಮಿಕ ಉನ್ನತಿಗಾಗಿ ಅವಶ್ಯವಾದ ಸಾಧನಗಳನ್ನು ಅವನು ಬಳಸುವನು. ಜಗತ್ತಿನ ಪರಿವರ್ತನೆಗೆ ಸಹಾಯಕವಾಗುವಂತೆ, ಇತರ ಸಂಗತಿಗಳ ಹಾಗು ಅವುಗಳ ಪರಿಣಾಮಗಳ ಕಡೆಗೆ ಗಮನಕೊಡದೆ, ಬೇಕಾದ ರೀತಿಯಲ್ಲಿ ಕಾರ್ಯಮಾಡುವ ಸ್ವಾತಂತ್ರ್ಯ ಅವನಿಗಿರುತ್ತದೆ. ಒಟ್ಟಾರೆ-ಮಾನವತೆಯ ಹಿತಕ್ಕಾಗಿ ಆತನು ಕೈಕೊಂಡ ಕಾರ್ಯಗಳಲ್ಲೆಲ್ಲ ನಿಸರ್ಗವು ಅವನಿಗೆ ಸಹಾಯಕವಾಗುತ್ತದೆ. ಇದು ನಿಸರ್ಗದ ಅಪರಿಹಾರ್ಯ ನಿಯಮ. ಆತನಿಗೆ ಯಾವಾಗಲೂ ಮೂಲ ಭಂಡಾರದಿಂದಲೇ ಆದೇಶಗಳು ಬರುವುವು. ಅವುಗಳಿಗನುಸಾರವಾಗಿ ತನ್ನ ಇಷ್ಟದಂತೆ ಕಾರ್ಯಮಾಡಲು ಆತನು ಸ್ವತಂತ್ರನಾಗಿರುವನು. ಅದರಂತೆ 'ಸಹಜ ಮಾರ್ಗ'ದ ಸಂಸ್ಥಾಪಕನಾದರೂ ಈ ದಿಶೆಯಲ್ಲಿ ಸ್ವತಂತ್ರನಿದ್ದು ಮಾನವತೆಯ ಆಧ್ಯಾತ್ಮಿಕ ಪ್ರಗತಿಗಾಗಿ ಕಾರ್ಯಪರನಾಗಿದ್ದಾನೆ. ಪ್ರಾಚೀನ ಪದ್ಧತಿಯನ್ನೇ ದೈವೀನಿರ್ದೇಶಗಳ ಮೇರೆಗೆ ಸಂಸ್ಕಾರಗೊಳಿಸಲಾಗಿದೆ. ನಿಯಮಗಳನ್ನು ರಚಿಸಿ ಅವುಗಳ ತಳದಲ್ಲಿರುವ ತತ್ತ್ವಜ್ಞಾನದ ಮೇಲೆ ಬೆಳಕುಬೀರಲಾಗಿದೆ. ಇದನ್ನೋದುವುದ-ರಿಂದ ಇದರ ಪ್ರವರ್ತಕನ ಯೋಗ್ಯತೆಯ ಕಲ್ಪನೆ ತಕ್ಕಮಟ್ಟಿಗಾದರೂ ಆಗಬಹುದು. ಇದರಡಿಯಲ್ಲಡಗಿದ ವಿಜ್ಞಾನದ ಕಡೆಗೆ ಇದುವರೆಗೆ ಯಾರ ದೃಷ್ಟಿಯೂ ಬಿದ್ದಿಲ್ಲ. ಮನುಷ್ಯ ಹಾಗು ಪರಮಾತ್ಮರ ನಡುವಿರುವ ಸಂಬಂಧಗಳ ಇಲ್ಲಿಯ ವಿವರಣೆಯು ಜಗತ್ತಿನ ದೊಡ್ಡದೊಡ್ಡ ತತ್ತ್ವಜ್ಞಾನಿ-ಗಳಿಗೆ ಗಂಭೀರವಾಗಿ ವಿಚಾರ ಮಾಡಲು ಅವಕಾಶವನ್ನೊದಗಿಸಿದೆ. ಇದರಿಂದ

ಎರಡು ಉದ್ದೇಶಗಳು ಫಲಿಸುವುವು : ಮೊದಲನೆಯದಾಗಿ. ಅವುಗಳನ್ನು ದೈನಂದಿನ ಜೀವನದಲ್ಲಿ ಆಚರಣೆಗೆ ತರುವುದರಿಂದ ಮನುಷ್ಯನು ನಿಜವಾಗಿಯೂ ಮನುಷ್ಯನಾಗುವನು. ಎರಡನೆಯದಾಗಿ, ಆಧ್ಯಾತ್ಮದ ತತ್ತ್ವಜ್ಞಾನವನ್ನು ತಿಳಿಯಲಪೇಕ್ಷಿಸುವವರು ಇದನ್ನೋದಿ ಬೌದ್ಧಿಕ ಆನಂದವನ್ನು ಪಡೆಯಬಲ್ಲರು. ಆದರೆ ಕೇವಲ ಇದರ ಪ್ರಾಯೋಗಿಕ ಭಾಗವೇ ಮನುಷ್ಯನ ಭವಿಷ್ಯವನ್ನು ರೂಪಿಸಬಲ್ಲುದು; ಮತ್ತು ಜಿಜ್ಞಾಸು ಸ್ವತಃ ಆ ಆಧ್ಯಾತ್ಮಿಕ ತತ್ತ್ವಶೋಧಕನ ಸಂಪರ್ಕದಲ್ಲಿ ಬಂದಾಗಲೇ ಇದು ಸಾಧ್ಯವಾಗುವುದು. ಈ ಪುಸ್ತಕದ ಆಳವಾದ ಅಧ್ಯಯನವು ಓದುಗರನ್ನು ನಿಜವಾಗಿಯೂ ಬೆರಗುಗೊಳಿಸುವುದು.

ಇದರಲ್ಲಿ ಬರುವ ಸಂಗತಿಗಳನ್ನು ಅಂತರ್ದೃಷ್ಟಿಯಿಂದ ನೋಡಬೇಕೆಂದು ಓದುಗರನ್ನು ಪ್ರಾರ್ಥಿಸುವೆನು. ಈ ರೀತಿ ಸತ್ಯದೃಷ್ಟಿಯು ವಿಕಾಸಹೊಂದುವುದು. ನಿಸರ್ಗದ ರಹಸ್ಯಗಳು ಯೋಗಿಗಳ ಹೃದಯಗಳಲ್ಲಿ ಅಡಗಿವೆ. ಅವರ ಹೃದಯಗಳನ್ನು ಲಕ್ಷಿಸಿ ಅಧ್ಯಾತ್ಮಶಾಸ್ತ್ರವನ್ನು ಪ್ರವೇಶಿಸಬಹುದು. ಯೋಗಿಯ ಉಪದೇಶಗಳ ಮೇರೆಗೆ ಆಚರಣೆಮಾಡಿದಾಗ ಮಾತ್ರ ಇದು ಶಕ್ಯವಾಗುವುದು. ಸಾಮಾನ್ಯವಾಗಿ. ಇದು ಬಹಳ ತೊಡಕಿನದೆಂದು ಜನರು ಭಾವಿಸುವರು. ಆದರೆ ಅದು ನಡುವಿರುವ ಒಂದು ತೆರೆ ಮಾತ್ರ. ಸರಳವಾದ ವಸ್ತುವನ್ನು ಪಡೆಯಲು ಸರಳವಾದ ಉಪಾಯವೇ ಬೇಕು. ಈ ಪುಸ್ತಕದ ಪ್ರತಿಯೊಂದು ವಾಕ್ಯವೂ ಅರ್ಥಪೂರ್ಣವಾಗಿದೆ. ಇದರ ಅಧ್ಯಯನವು ಬೌದ್ಧಿಕ ಆನಂದವನ್ನು ನೀಡುವುದು; ಪ್ರಯೋಗವು ಅನುಭವವನ್ನು ಒದಗಿಸುವುದು.

**ಕರುಣಾಶಂಕರ ಪೂರಣಪೂರ್**
ಪಿಲಿಭಿತ್ ಜಿಲ್ಲೆ

# ಮುನ್ನುಡಿ*

ಪ್ರಪಂಚವು ಈಗ ಹೊಸ ಜನನದ ವೇದನಾನುಭವದಲ್ಲಿದೆ. ಒಂದು ಹೊಸ ಮಾದರಿಯ ಸಂಸ್ಕೃತಿ ರೂಪುಗೊಳ್ಳುತ್ತಿದೆ. ವಿಜ್ಞಾನದ ಮಾರ್ಗಗಳು ಮಾನವನ ಗೊತ್ತು-ಗುರಿಗಳಿಗೆ ಒಂದು ಹೊಸ ಮೌಲ್ಯವನ್ನು ನಿರ್ಧರಿಸಲು ದಾರಿಮಾಡಿಕೊಟ್ಟಿವೆ. ಜನರು, ಸದ್ಯ ಎಲ್ಲರಿಗಾಗಿ ಜೀವನದ ಒಳ್ಳೆಯ ಉಪಾಯಗಳನ್ನು ಕುರಿತು ಯೋಚಿಸುತ್ತಿದ್ದಾರೆ; ಜೀವನವು ತಮಗಾಗಿ ಅಥವಾ ಕೆಲವರಿಗಾಗಿ ಮಾತ್ರ ಅಲ್ಲ, ಅದು ಎಲ್ಲರಿಗಾಗಿ ಎಂಬುದನ್ನು ಮನಗಾಣಲು ವಿವಶರಾಗಿದ್ದಾರೆ. ಆದರೂ ಆ ಗುರಿಯನ್ನು ತಲುಪಲು ಅಥವಾ ಕಲ್ಯಾಣ ರಾಜ್ಯವನ್ನು ಸ್ಥಾಪಿಸಲು ಅವರು ಅನುಸರಿಸಿರುವ ಸಾಧನಗಳು ತೃಪ್ತಿಕರವಾಗಿಲ್ಲ. ತನ್ನ ವಿಕಾಸಕ್ಕಾಗಿ ಕೊಡಲಾಗಿದ್ದ ವಿವೇಕವನ್ನು ಮಾನವನು ಮಲಿನಗೊಳಿಸುತ್ತಾನೆ. ಇಷ್ಟಾದರೂ, ಮನುಷ್ಯನು ಸುಖವನ್ನು ರಸುತ್ತಿರುವನೆಂಬ ಮಾತು ಸತ್ಯವಾದುದು. ಈ ಸುಖಕ್ಕೂ ಮನಃಶಾಂತಿಗೂ ತೀರ ಹತ್ತಿರದ ಸಂಬಂಧವಿರುವಂತೆ ತೋರುತ್ತದೆ. ಮಾನವನು ತಾನು ಕೇವಲ ಮಾನವಕೋಟಿಯ ಈ ಬೃಹತ್ ಪ್ರಪಂಚಕ್ಕಷ್ಟೇ ಅಲ್ಲದೆ ಬೇರೆ ವಿಧವಾದ ಜೀವನ ಹಾಗು ಪ್ರಪಂಚಗಳಿಗೂ ಸಂಬಂಧಿಸಿರುವನೆಂಬುದನ್ನು ಮನಗಾಣಬೇಕು. ವಿಜ್ಞಾನವು ಅತ್ಯಂತ ವಿಶಾಲದಿಶೆಗಳತ್ತ ನಮ್ಮ ಜ್ಞಾನದ ಮೇರೆಗಳನ್ನು ವಿಸ್ತರಿಸುತ್ತಿದೆ. ನಾವು ಬಹುಮಟ್ಟಿಗೆ ವಿಶಾಲತರವಾದ ಪ್ರಪಂಚವನ್ನು ಪ್ರವೇಶಿಸಲಾರಂಭಿಸಿದ್ದೇವೆ. ಆದರೆ ನಮ್ಮ ಮನಸ್ಸು ಅದಕ್ಕೆ ತಕ್ಕ ಪ್ರಮಾಣದಲ್ಲಿ ಆಲೋಚಿಸಲು ಅಸಮರ್ಥವಾಗಿದೆ. ಈ ಮರ್ತ್ಯಜಗತ್ತಿನೊಂದಿಗೂ ಅದು ನಮಗೆ ನೀಡುತ್ತಿರುವ ಆಶ್ವಾಸನಗಳೊಂದಿಗೂ ನಾವು ಹೊಂದಿಕೊಳ್ಳಲು ಅಶಕ್ತರಾಗಿದ್ದೇವೆ.

---

* ಇದೇ ಪುಸ್ತಕದ ಇಂಗ್ಲಿಷ್ ಭಾಷಾಂತರಕ್ಕೆ ಬರೆದುದು.

ಮನುಷ್ಯನು ತಾನು ನಿಜವಾಗಿಯೂ ಜೀವಿಗಳಲ್ಲಿ ಶ್ರೇಷ್ಠನೆಂದು ಭಾವಿಸಿದ್ದಾನೆ. ಕನಿಷ್ಠಪಕ್ಷ, ಈ ಜಗತ್ತಿನಲ್ಲಿ ತನ್ನನ್ನು ತಾನು ಕಂಡುಕೊಂಡು ತನ್ನ ಶರೀರ–ಪ್ರಾಣ–ಮನಸ್ಸುಗಳ ಬೇಡಿಕೆಗಳನ್ನು ಪೂರ್ಣಗೊಳಿಸುವುದರಲ್ಲಾದರೂ ಸಮರ್ಥನೆಂದು ತಿಳಿದಿದ್ದಾನೆ. ಈ ದಿಶೆಯಲ್ಲಿ ಆತನ ಪ್ರಯತ್ನಗಳು ಸತತವಾಗಿ ನಡೆದೇ ಇದ್ದು ಅಭಿವೃದ್ಧಿಯ ಹೋರಾಟ, ಜೀವನದ ಸಂಘರ್ಷ ಹಾಗು ಶಾರೀರಿಕ ಬೇಡಿಕೆಗಳ ರೂಪದಲ್ಲಿ ಸುಖಪಡೆಯುವುದು – ಇವುಗಳಿಗಾಗಿ ಮಿತಿಮೀರಿ ಶ್ರಮಿಸುತ್ತಿದ್ದಾನೆ. ಜಗತ್ತನ್ನು ತನ್ನ ಆವಶ್ಯಕತೆಗಳಿಗನುಸಾರವಾಗಿ ಪರಿವರ್ತಿಸಿಕೊಳ್ಳುತ್ತ ನಡೆದಿರುವ ಈಯೆಲ್ಲ ಸುಖಾನ್ವೇಷಣವು ಅಪ್ರಯೋಜಕವೆಂದೂ, ಈ ಸುಖಸಾಧನೆಯ ಅಸ್ಥಿರತೆಯನ್ನು ಇನ್ನೂ ಅರಿತುಕೊಳ್ಳಬೇಕಾಗಿದೆಯೆಂದೂ ಕೆಲ ಮಹಾಪುರುಷರು ಅಭಿಪ್ರಾಯಪಟ್ಟಿರುವುದು ನಿಜವಿದೆ. ಅಲ್ಲದೆ, ಕ್ಷಣಿಕಸುಖವು ನಿಜವಾದ ಸುಖವಲ್ಲವೆಂದು ಉಪದೇಶಿಸಿರುವುದೂ ಸತ್ಯವೇ. ಎಲ್ಲ ಸುಖದ ಕ್ಷಣಿಕತ್ವವೇ ಮಾಯೆಯೆಂದು ಅವರು ವ್ಯಾಖ್ಯಾನಮಾಡಿರುವುದೂ ನಿಜ. ಅನಂತವಾದ ಶಾಶ್ವತಸುಖದ ಶೋಧವೇ ನಿಜವಾದ ಶೋಧ. ಇದಕ್ಕಾಗಿ ಕ್ಷಣಿಕಸುಖದ ಅಥವಾ ಕ್ಷಣಿಕ ಯಶಸ್ಸಿನ ಶೋಧವನ್ನು ಬಿಟ್ಟುಕೊಡಬೇಕಾಗುವುದು. ಆದರೆ ಮನುಷ್ಯನು, ತಾನು ತಿಳಿದುಕೊಂಡಂತೆ ಅತಿ ದೂರದ ಶಾಶ್ವತಸುಖಕ್ಕಾಗಿ ಕೈಯಲ್ಲಿದ್ದ ಕ್ಷಣಿಕ ಸುಖದ ಶೋಧವನ್ನು ತ್ಯಜಿಸಲು ಸಿದ್ಧನಿಲ್ಲ. ಶಾಶ್ವತ ಸ್ವಾತಂತ್ರ್ಯಕ್ಕಾಗಿ ಸದ್ಯದ ಬಂಧನವನ್ನು ತ್ಯಜಿಸುವುದಕ್ಕಿಂತ, ಸಂತೋಷಕರವಾಗಿದ್ದ ಈ ಬಂಧನವೇ ಲೇಸು. ಅದರಂತೆ, ಅನಂತದ ಪ್ರಾಪ್ತಿಯ ಆಶೆಗಾಗಿ ವೈಯಕ್ತಿಕ ಪರಿಮಿತಿಯನ್ನು ಬಿಟ್ಟುಕೊಡುವುದು ಅಶಕ್ಯವೇ ಆಗಿದೆ.

ಜನರು ಖಂಡಿತವಾಗಿ ಇಷ್ಟಪ್ರಾಪ್ತಿಯ ಬೇರೆ ಉಪಾಯವನ್ನು ಕಂಡುಕೊಂಡಿದ್ದಾರೆ. ಉಭಯಲೋಕಗಳಿಗೂ ಅಗತ್ಯವಿರುವ ಮಾನವ ಸ್ವಭಾವದ ಇಬ್ಬಗೆಯ ಬೇಡಿಕೆಯಿಂದಾಗಿ ಲೌಕಿಕದಲ್ಲಿ ಶಾಶ್ವತತೆಯನ್ನು, ಸಾಂತದಲ್ಲಿ ಅನಂತವನ್ನು, ಸಸೀಮದಲ್ಲಿ ಅಸೀಮವನ್ನು, ಜಡತ್ವದ ಗರ್ಭದಲ್ಲಿ ಚೈತನ್ಯವನ್ನು–ಸಾಕ್ಷಾತ್ಕರಿಸಿಕೊಳ್ಳಲು ಹವಣಿಸುತ್ತಾರೆ. ಮನುಷ್ಯನ ಐಹಿಕ ಹಾಗು ಆಮುಷ್ಮಿಕ ಅಭಿಲಾಷೆ ಅಥವಾ ಇಚ್ಛೆಗಳಿಗೆ ನ್ಯಾಯದಾನಮಾಡುವ ಹಲವಾರು ದರ್ಶನಗಳು ಬೆಳೆದುಬಂದಿವೆ. ಇಂಥ ಇಚ್ಛೆ ಅಥವಾ ಅಭಿಲಾಷೆ

ಗಳಿಗಧೀನವಾಗಿಯೆ ದರ್ಶನಗಳು ರೂಪಗೊಂಡಿವೆಯೆಂಬ ಸಂಗತಿ ಅವುಗಳ ವಿಚಾರಸರಣಿಯ ಮನೋವೈಜ್ಞಾನಿಕ ಮೂಲಗಳನ್ನು ಪ್ರಕಟಗೊಳಿಸುತ್ತದೆ. ಲೌಕಿಕವೇ ಆಗಲಿ ಶಾಶ್ವತವೇ ಆಗಲಿ, ಎಲ್ಲ ಸುಖಾಧಿಕಾರವನ್ನು ಬಿಟ್ಟ ಹೊರತು ಸತ್ಯವು (Reality) ಧ್ಯೇಯವಾಗಲಾರದೆಂಬುದನ್ನು ಒಪ್ಪಿ ಕೊಂಡರೂ, ಇಂಥ ವಿಚಾರಪ್ರಣಾಲಿಯು ಧ್ಯೇಯಾಭಿಮುಖವಾದ ಪ್ರೇರಣೆಯಿಂದ ಸ್ವತಃ ಮುಕ್ತವಾಗಿಲ್ಲವೆಂಬುದು ನಿಜವಾಗಿದೆ. ಸುಖ, ಸಂತೋಷ, ಅಥವಾ ಶಕ್ತಿ – ಈ ಯಾವ ಉದ್ದೇಶಗಳಿಗಾಗಿಯೂ ಪರಿಮಿತ ವಾದ ಹಾಗು ದೂಷಿತಗೊಂಡ ಆಕಾಂಕ್ಷೆಗಳಿಲ್ಲದೆ ಸತ್ಯವನ್ನು ತಿಳಿಯಬೇಕು. ಅದನ್ನು ಅದಕ್ಕೋಸ್ಕರವಾಗಿಯೆ ಅದು ಇದ್ದ ಸ್ಥಿತಿಯಲ್ಲಿಯೆ ಅರಿತುಕೊಳ್ಳ ಬೇಕು. ಅದೇ ತನ್ನ ನಿಜವಾದ ಇರವಿನ ಹಾಗು ಸತ್-ತತ್ತ್ವದ ನಿಯಮ. ಮನುಷ್ಯನು ತನ್ನ ಸತ್ಯವೇ ಅತ್ಯಂತ ಮಹತ್ತ್ವದ್ದೆಂದು ಬಗೆಯುವನು; ಮತ್ತು ಆ ಸತ್ಯದ ಸಾಕ್ಷಾತ್ಕಾರವೇ ಆತನ ಅಸ್ತಿತ್ವದ ಮೂಲ ಪ್ರೇರಣೆ-ಯಾಗಿದೆ. ಸುಖ, ಸಂತೋಷ, ಶಕ್ತಿ ಮುಂತಾದುವೆಲ್ಲ ತನ್ನ ಸತ್ಯಸಾಕ್ಷಾತ್ಕಾರದ ಮುನ್ನಡೆಯಲ್ಲಿ ಸಾಧನಗಳೆಂದು ಪರಿಗಣಿತವಾಗಿ ಸಮರ್ಪಣ ಹೊಂದುವುವು.

ಈ ಸತ್ಯಪ್ರಜ್ಞೆಯನ್ನು ಪಡೆಯುವ ವಿಧಾನಗಳು ತೀರ ಪ್ರಾಚೀನ-ವಾಗಿದ್ದು ಮನುಷ್ಯನ ಇಬ್ಬಗೆಯ ಗುರಿಗಳಿಂದಾಗಿ ಅವುಗಳ ಫಲಗಳೂ ಬೇರೆ ಬೇರೆಯಾಗಿದ್ದುವು. ತನ್ನನ್ನು ತಾನು ಅರಸಿದಾಗಲೇ ತನ್ನ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯ. ಏತದ್ವಿರುದ್ಧವಾಗಿ, ತನ್ನನ್ನು ಪ್ರಪಂಚ-ದಲ್ಲಿಯೂ ಪ್ರಪಂಚವನ್ನು ತನ್ನಲ್ಲಿಯೂ ಸಾಕ್ಷಾತ್ಕರಿಸಿಕೊಳ್ಳಲು ಪ್ರಪಂಚದ ಕಡೆಗೆ ತಿರುಗಿದಾಗ ಇದು ಸಾಧ್ಯವಾಗಲಾರದು. ಹಲವಾರು ದರ್ಶನಗಳು ತಮ್ಮ ತಮ್ಮ ಪದ್ಧತಿಗಳನ್ನು ರೂಪಿಸಿಕೊಂಡಿದ್ದರೂ ಅವು ಸತ್ಯಪ್ರಜ್ಞೆಯ ಕಡೆಗೆ ದಾರಿತೋರುವುದರಲ್ಲಿ ವಿಫಲವಾಗಿವೆ. ಅವುಗಳ ಸಹಾಯದಿಂದ ಮುಕ್ತಿಪಡೆಯುವುದೂ ಸಾಧ್ಯವಾಗಲಿಲ್ಲ.

ಅನಂತದ ವೈಯಕ್ತಿಕ ಅನುಭವವನ್ನೇ ಮತ್ತೆ ಅರಸಿಬರುವುದು ತುಂಬ ಅಗತ್ಯವಾಗಿದೆ. ಸಿದ್ಧಾಂತ, ತರ್ಕ, ಪ್ರಮಾಣಾದಿಗಳಿಂದ ಬೇಸತ್ತ

ಬಹುಜನರು, ಅಸ್ತಿತ್ವದ ಜೀವಾಳವನ್ನು ಸಾಕ್ಷಾತ್ಕರಿಸಿಕೊಟ್ಟು ಅನುಭವ ಮತ್ತು ಅಂತರ್ಜ್ಞಾನವನ್ನು ತಂದುಕೊಡುವ ಪದ್ಧತಿಯ ಕಡೆಗೆ ತಿರುಗಹತ್ತಿ-ದ್ದಾರೆ. ಅನುಭವವು ಯಾವ ಸಮಸ್ಯೆಯನ್ನೂ ಬಿಡಿಸಲಾರದೆಂದೂ, ಸಿದ್ಧಾಂತಗಳ ಸಾಧನ ಅಥವಾ ಪದ್ಧತಿಗಳಲ್ಲಿ ಬರಿಯ ನಂಬುಗೆಯೆ ಸಾಕಾಗುವು ದೆಂದೂ, ವೈಯಕ್ತಿಕ ಅನುಭವವು ಕೇವಲ ಮೃಗಜಲವೆಂದೂ ತಿಳಿಯುವವರು ಕೆಲವರಿದ್ದಾರೆ. ಹೀಗೆ ಭಾವಿಸುವವರೊಂದಿಗೆ ನಾವು ಸಮ್ಮತಿಸುವುದಿಲ್ಲ; ಮತ್ತು ಮನುಷ್ಯನು ಎಂದಿನಿಂದಲೂ ಸಮ್ಮತಿಸಿಲ್ಲ. ಈ ವೈಯಕ್ತಿಕ ಅನುಭವವು ಅತ್ಯುನ್ನತ ಮಟ್ಟದ್ದಿದ್ದು ಸತ್ಯವಾಗಿರಬೇಕು; ಚಿತ್ತಭ್ರಮಣೆಯ ಪರಿಣಾಮವಾಗಲಿ ಮನಸ್ಸಿನ ಪ್ರಕ್ಷೇಪಗಳಾಗಲಿ ಆಗಿರಕೂಡದೆಂಬುದು ಮಾತ್ರ ನಿಜ. ಚಿತ್ತಭ್ರಮವು ಯಥಾರ್ಥಾನುಭವವನ್ನಾಕ್ರಮಿಸುವ ಒಂದು ಬಗೆಯ ಮಾಯಾನುಭೂತಿಯೇ ಸರಿ.

ಉನ್ನತಸ್ತರದ ಪ್ರಜ್ಞೆ ಅಥವಾ ಸತ್ಯದಲ್ಲಿ ಮನುಷ್ಯನ ವಿಕಾಸವಾಗ-ಬೇಕೆಂಬುದೇ ನಮ್ಮ ಪ್ರಯತ್ನವಾಗಿದೆ. ಈ ವಿಕಾಸವು ಮನುಷ್ಯನನ್ನೊಳಗೊಂಡ ಕೆಳಮಟ್ಟದ ಜೀವಜಾತಿಗಳಿಗೆ ಯೋಗ್ಯವಾದ ಹಳೆಯ ವಿಧಾನಗಳಿಂದ ಪ್ರಾಪ್ತವಾಗಲಾರದೆಂಬುದು ಸ್ಪಷ್ಟವಾಗಿದೆ. ಖಂಡಶಃ ಗ್ರಹಿಸುವುದಕ್ಕಿಂತ ಎಲ್ಲವನ್ನೂ ಪ್ರಜ್ಞೆಯ ಒಂದೇ ವ್ಯೂಹದಲ್ಲಿ ಅಖಂಡವಾಗಿ ಗ್ರಹಿಸಬಲ್ಲ ವಿಶ್ವ-ಪ್ರಜ್ಞೆಯ ಅಥವಾ ಅಂತರ್ಜ್ಞಾನದ ವಿಕಾಸವಾಗಲಿ, ಎಲ್ಲ ಜ್ಞಾನವನ್ನು ಸಮನ್ವಯಗೊಳಿಸಿ ಸತ್ಯವನ್ನು ಇಡಿಯಾಗಿ ಕಾಣುವ ದೃಷ್ಟಿಯ ವಿಕಾಸವಾಗಲಿ ದೈವೀ ವರವಾಗಿದ್ದು ಅದನ್ನು ಕೇವಲ ಅಭೀಪ್ಸೆಯ ಸಹಜೋಪಾಯಗಳಿಂದ ಪಡೆಯಲಾಗುವುದಿಲ್ಲ. ತನ್ನ ಆವಶ್ಯಕತೆಗಳಿಗನುಸಾರವಾಗಿ ಪರಿಸರವನ್ನು ಹೊಂದಿಸಿಕೊಳ್ಳಬಲ್ಲ ಮನುಷ್ಯನ ಅಪರಿಮಿತ ಸಾಮರ್ಥ್ಯದ ಮೂಲಕ-ವಾಗಿಯೂ, ಒಂದು ವಿಧದಿಂದ ಸುಪ್ತವಾಗಿದ್ದ ತನ್ನ ಶಕ್ತಿ-ಸಾಮರ್ಥ್ಯಗಳನ್ನು ವಿಚಾರಪರತೆ, ಬುದ್ಧಿಶಕ್ತಿ, ಪ್ರವೃತ್ತಿ, ಸಮೀಹೆ, ಚೇತನತೆ, ಸೃಜನಾತ್ಮಕ ಕಲ್ಪನೆ, ಸಹಕಾರವೃತ್ತಿ ಹಾಗು ಸಾಮಾಜಿಕ ಐಕ್ಯ ಮುಂತಾದವುಗಳನ್ನು – ಈಗಾಗಲೇ ಮಾಡಿದಂತೆ ಜಾಗೃತಗೊಳಿಸುವುದರ ಮೂಲಕವಾಗಿಯೂ ನೈಸರ್ಗಿಕ ವಿಕಾಸದಿಂದಲೇ ಸಾಧಿಸಬೇಕೆಂದು ವಿಜ್ಞಾನವು ಅಪೇಕ್ಷಿಸುತ್ತದೆ. ಆದರೆ ಜೀವನದ ಉತ್ಕ್ರಮಣವಾದರೋ ವಿರಾಮಗಳಿಂದ ಕೂಡಿದೆ. ಈ

ವಿರಾಮ ಅಥವಾ ಜಿಗಿತಗಳು ಜೀವನವನ್ನು ಮೇಲಕ್ಕೆತ್ತಲು ಅದರ ಕಡೆಗೆ ವಾಲಿದ ಊರ್ಧ್ವಶಕ್ತಿಯ ಅಥವಾ ಸ್ವಪ್ರೇರಕಶಕ್ತಿಯ ಮೂಲಕ ಉಂಟಾಗಿ-ವೆಯೋ ಹೇಗೆಂದು ಆಶ್ಚರ್ಯಪಡಬಹುದಾಗಿದೆ. ಮನುಷ್ಯನ ಧಾರ್ಮಿಕ ಅನುಭವವು ಆದರೆಡೆಗಿನ ವಿಶ್ವಪ್ರಜ್ಞೆಯ ಅಥವಾ ಅಚಿಂತ್ಯ ದೈವೀಕೃಪಾ ಪ್ರಜ್ಞೆಯ ಈ ಒಲವನ್ನು ತೋರಿಸಿಕೊಡುತ್ತದೆ. ಈ ಪ್ರಕಾರ, ವಿಕಾಸಕ್ರಮ ದಲ್ಲಿ ಈ ದೈವಿಕತೆ ಮತ್ತು ಮಾನವೀಯತೆಯ ಸಂಮಿಲನವನ್ನು ಮೊಟ್ಟ-ಮೊದಲಬಾರಿಗೆ ಮಾನವನಲ್ಲಿ ಶಕ್ಯಗೊಳಿಸಬೇಕಾಗಿದೆ. ಆದರೆ ಅಂತಿಮಪ್ರಜ್ಞೆ ಅಥವಾ ಅಂತಿಮ ಅಸ್ತಿತ್ವದೆಡೆಗೆ ಜಿಗಿಯಬೇಕಾದರೆ ತುಂಬ ದಾರಿಯನ್ನು ಕ್ರಮಿಸಬೇಕು. ಮನುಷ್ಯನ ನೈಸರ್ಗಿಕ ವಿಕಾಸವು ಆತನ ಜೀವನದಲ್ಲಿ ತನಗಿಂತ ಬಹಳ ಶ್ರೇಷ್ಠವಾದ ಹಾಗು ವಿಶಾಲವಾದ ಶಕ್ತಿಯೊಂದು ತನ್ನ ಕೈಹಿಡಿಯು ವುದೆಂಬುದನ್ನು ಸ್ಪಷ್ಟಗೊಳಿಸುತ್ತದೆ. ಇದೇ ಆಧ್ಯಾತ್ಮದ ಆರಂಭ. ಅಂತಿಮ ಸತ್ಯದೆಡೆಗಿನ ತನ್ನ ಈ ಪ್ರೇರೇಪಣೆಯನ್ನು ಆತ್ಮವು ಬಲವಾದ ಪ್ರೇರಣೆ-ಯೆಂದು ಅದಕ್ಕೆ ಸಂಮುಖವಾಗಿ ನಿಂತಿದೆ. ಇದರ ಹೊರತು ಆತ್ಮಕ್ಕೆ ಯಾವ ಭವಿಷ್ಯವೂ ಇಲ್ಲ; ರಕ್ಷಣೆಯೂ ಇಲ್ಲ.

ಇದು ಆತ್ಮಜ್ಞಾನಕ್ಕೆ, ಪರಿಪೂರ್ಣತೆಗೆ, ಸಿದ್ಧಿಗೆ ಮತ್ತು ಅಂತಿಮಸುಖ ಹಾಗು ಆನಂದಕ್ಕೆ ಆಹ್ವಾನವಾಗಿದೆ. ಎಲ್ಲಕ್ಕೂ ಮಿಗಿಲಾಗಿ ತನ್ನ ಮೂಲ ಸ್ವಭಾವದಲ್ಲಿ ಜಾರುವಂತೆ ತೋರುತ್ತಿರುವ ಆತ್ಮದ ಅಥವಾ ಸತ್ಯದ ಸಾಕ್ಷಾತ್ಕಾರ ಮತ್ತು ಅನುಭವಗಳಿಗೆ ಕರೆಯಾಗಿದೆ.

ಪ್ರಜ್ಞೆಯ ಉನ್ನತ ಸ್ತರಗಳಾದ ಪ್ರಜ್ಞಾನ ಹಾಗು ಕೇವಲ ಚೈತನ್ಯದ ಅನುಭವಘಟ್ಟಕ್ಕೆ ಮನುಷ್ಯನನ್ನು ಎತ್ತುವುದರಲ್ಲಿ ಪರಮಾತ್ಮನ ಸಹಾಯ ಅಗತ್ಯವೆಂಬುದನ್ನು ಭಾರತದ ದ್ರಷ್ಟಾರರು ಬಹುಕಾಲದ ಹಿಂದೆಯೆ ಮನಗಂಡಿದ್ದರು. ಪರಾಮನಸ್ಸು ಮಾನವೀಯ ಮನ ಹಾಗು ಊರ್ಧ್ವ-ಮನಕ್ಕಿಂತಲೂ ತುಂಬ ಮೇಲಿನ ಘಟ್ಟಗಳಿಗೆ ಸೇರಿದ್ದು. ಪಿಂಡ, ಬ್ರಹ್ಮಾಂಡ ಮತ್ತು ಪರಬ್ರಹ್ಮಾಂಡಗಳೆಂಬ ಅಸ್ತಿತ್ವದ ಸ್ತರಗಳಿವೆ. ಇವುಗಳನ್ನೆಲ್ಲ ಮೀರಿ ಆಚೆಗಿರುವುದನ್ನು ಷಾಹಜಹಾನ್‌ಪೂರದ ಶ್ರೀ ರಾಮಚಂದ್ರಜಿ ಮಹಾರಾಜರು ಕೇಂದ್ರ ಹಾಗು ಕೇಂದ್ರಮಂಡಲವೆಂದು ಕರೆದಿದ್ದಾರೆ. ಇದಕ್ಕೂ ಭೂಃ, ಭವಃ,

ಸ್ವಃ, ಮಹಃ, ಜನಃ, ತಪಃ ಮತ್ತು ಸತ್ಯಂ ಎಂದು ವರ್ಣಿತವಾದ ಲೋಕ-ಗಳಿಗೂ ನಾವು ಸಾಮ್ಯವನ್ನು ಕಲ್ಪಿಸಬಹುದು. ಪ್ರತಿಯೊಂದು ಸ್ತರದಲ್ಲಿಯೂ ಆಯಾ ಸ್ತರಕ್ಕೆ ತಕ್ಕಂತೆ ಪ್ರಜ್ಞೆಯು ಉನ್ನತಮಟ್ಟದ್ದಿರುತ್ತದೆ; ಮತ್ತು ಕೆಳಗಿಳಿದಂತೆಲ್ಲ ಅದು ರೂಪಾಂತರ ಅಥವಾ ತಿರುಪುಗಳನ್ನು ಹೊಂದಿ ಪರಿಮಿತಿಯನ್ನು ಪಡೆಯುತ್ತದೆ. ಈ ಪ್ರಕಾರ, ಅದು ಹಲವಾರು ಗ್ರಂಥಿ ಅಥವಾ ಚಕ್ರಗಳನ್ನು ನಿರ್ಮಿಸುತ್ತದೆ. ಕೇಂದ್ರವು ರಚನೆಯಾದಂತೆಲ್ಲ ಆಯಾ ಕೇಂದ್ರ-ಗಳ ನಿಯಮಗಳಿಗನುಸಾರವಾಗಿ ಚೈತನ್ಯಶಕ್ತಿಯ ಹಂಚಿಕೆಯಾಗುತ್ತದೆ.

ಹಾಗಾದರೆ, ಆತ್ಮಸಾಕ್ಷಾತ್ಕಾರದ ಯೋಗವು ಅಸ್ತಿತ್ವದ ಮತ್ತು ಚೈತನ್ಯದ ಎಲ್ಲ ಸ್ತರಗಳ ಆಚೆಗಿರುವ ಅತ್ಯುನ್ನತಸ್ಥಿತಿಯನ್ನು ಪಡೆಯಬೇಕೆಂದು ಅಪೇಕ್ಷಿಸುತ್ತದೆ ಎಂದಂತಾಯಿತು. ಇದು ಸಾಧ್ಯವೋ ಹೇಗೆಂಬ ಪ್ರಶ್ನೆ ಬರುವುದು. ಮನುಷ್ಯನು ಮುಂದುವರಿಯುತ್ತ ಮಾನವನ ಸ್ತರದಿಂದ ಪರಾಮನಸ್ಸಿನ ಅತಿಮಾನವಸ್ತರಕ್ಕೇರಿ ಅತ್ಯುನ್ನತ ಘಟ್ಟವನ್ನು ಮುಟ್ಟುವ ಆರೋಹಣಕ್ರಮದ ಪದ್ಧತಿ ಇದಲ್ಲವೆ – ಎಂಬುದು ಎರಡನೆಯ ಪ್ರಶ್ನೆ. ಕ್ರಮವಿಕಾಸತತ್ತ್ವದ ಪರವಾಗಿ ಬೇಕಾದಷ್ಟು ಹೇಳಬಹುದು. ಅತ್ಯುನ್ನತ ಘಟ್ಟದ ಅಸ್ತಿತ್ವ ಹಾಗು ಅದನ್ನು ತಲುಪುವ ಅವಶ್ಯಕತೆ – ಇವನ್ನು ಮನಗಂಡದ್ದಾದರೆ ಮನುಷ್ಯನ ಆತ್ಮವು ತತ್ಕಾಲವೇ ಅಲ್ಲಿ ಪ್ರವೇಶ ಪಡೆಯಲು ಸಾಧ್ಯವೆಂದು ಶ್ರೀ ರಾಮಚಂದ್ರಜಿ ಮಹಾರಾಜರು ಭರವಸೆ ನೀಡುತ್ತಾರೆ. ಅಂತಿಮವಾದ ಕೇಂದ್ರಸತ್ಯವನ್ನು ಸಾಕ್ಷಾತ್ಕರಿಸಿಕೊಂಡವರ ಮಾರ್ಗದರ್ಶನದಲ್ಲಿ ಕೈಕೊಳ್ಳುವ ಯೋಗಾಭ್ಯಾಸದಿಂದ ಇದು ಮತ್ತಷ್ಟು ಸುಲಭವಾಗುವುದು. ವ್ಯಕ್ತಿಯ ವಿಕಾಸವು ತ್ವರಿತಗತಿಯಿಂದಾಗುವುದಲ್ಲದೆ ಆ ಉನ್ನತಮಟ್ಟದ ಪ್ರಜ್ಞೆಯಿಂದ ಶುದ್ಧಿ ಹೊಂದಿ ಪ್ರತಿಯೊಂದು ಕಣವೂ ರೂಪಾಂತರಗೊಂಡ ಇದೇ ಮನುಷ್ಯದೇಹದಲ್ಲಿಯೆ ಅದು ಸಾಧ್ಯವಾಗುವುದು.

ಹೀಗೆ, ಪರಾಶಕ್ತಿಯು ಮಾನವಹೃದಯದಲ್ಲಿ ಅವತರಿಸಿ ಅದನ್ನು ಶುದ್ಧಗೊಳಿಸಿ ಆತ್ಯುನ್ನತಸ್ಥಿತಿಯಲ್ಲಿ ಅದನ್ನು ನೆಲೆಗೊಳಿಸಬಲ್ಲುದು. ಮಾನವ ದೇಹದಲ್ಲಿಯ ಕೆಲ ಕೇಂದ್ರಗಳು ಬ್ರಹ್ಮಾಂಡ ಹಾಗು ಪರಬ್ರಹ್ಮಾಂಡ ಮಂಡ-ಲಕ್ಕೆ ಸರಿಸಮಾನವಾಗಿದ್ದು ಅವು ದೈವೀಶಕ್ತಿಯ ಪ್ರಾಣಾಹುತಿಯನ್ನು

ಗ್ರಹಿಸುವಂತೆ ರಚಿತವಾಗಿವೆ. ಮಾನವದೇಹವು ನರಮಂಡಲ, ರಕ್ತಪರಿಚಲನ ಹಾಗು ಇತರ ವ್ಯೂಹಗಳಲ್ಲಿ ಶುದ್ಧತೆಗೊಂಡು ಇದೇ ದೇಹದಲ್ಲಿಯೇ ಶಾಂತಿಯನ್ನೂ ಶಕ್ತಿಯನ್ನೂ ಇವೆಲ್ಲಕ್ಕೂ ಅತೀತವಾದುದನ್ನೂ ಅನುಭವಿಸಬಲ್ಲುದು. ಆದರೆ ಈ ರಾಜಯೋಗಮಾರ್ಗದಲ್ಲಿ ಪ್ರವೀಣನಾದವನಿಂದ ತರಬೇತಿ ಮಾತ್ರ ಅಗತ್ಯ ಬೇಕು.

ಶ್ರೀ ರಾಮಚಂದ್ರಜಿಯವರು 'ಸಹಜಮಾರ್ಗದ ಹತ್ತು ನಿಯಮಗಳ ವ್ಯಾಖ್ಯಾನ'ವೆಂಬ ಈ ಪುಸ್ತಕದಲ್ಲಿ ಅಂತಿಮ ಸಾಕ್ಷಾತ್ಕಾರಕ್ಕೆ ಬೇಕಾಗುವ ನಿಯಮ-ನಿಬಂಧನೆಗಳನ್ನು ವಿವರಿಸಿದ್ದಾರೆ. ಈ ನಿಯಮಗಳನ್ನು ಪ್ರತಿಯೊಬ್ಬನೂ ಹಾರ್ದಿಕವಾಗಿ ಆಚರಿಸಬೇಕು. ಅವು ಕೇವಲ ಸ್ವೇಚ್ಛೆಯಿಂದ ಕೊಟ್ಟ ಆಜ್ಞೆಗಳಲ್ಲ; ಮುಟ್ಟಬೇಕಾದ ಗುರಿಯನ್ನು ಕುರಿತು ಸ್ಪಷ್ಟವಾದ ಹಾಗು ಸಯುಕ್ತಿಕವಾದ ವಿವರಣೆಯೂ ಅವುಗಳಲ್ಲಿದೆ. ಅಂತಿಮ ಧ್ಯೇಯವನ್ನು ತಲುಪುವ ಕಳಕಳಿಯಿದ್ದರೆ ಮಾತ್ರ ಅವನ್ನು ಆಚರಣೆಯಲ್ಲಿ ತರುವುದು ಸುಲಭ.

ಪ್ರಾರ್ಥನೆಯ ಸರಳ ಸೂತ್ರವು ನಮ್ಮ ಈ ಶೋಧದಲ್ಲಿಯ ಉದ್ದೇಶವನ್ನು ತಿಳಿಸಿಕೊಡುತ್ತದೆ. ಏಕಮಾತ್ರ ಸ್ವಾಮಿಯಾದ ದೇವರೇ ನಮ್ಮ ಗುರಿ. ಆತನೇ ನಮ್ಮನ್ನು ಧ್ಯೇಯದತ್ತ ನಡೆಸಬಲ್ಲನು. ನಮ್ಮ ಇಚ್ಛೆಗಳು ಉದ್ದೇಶ ಪ್ರಾಪ್ತಿಯಲ್ಲಿ ಆತಂಕವನ್ನು ಒಡ್ಡಿ ವಿರೋಧಿಗಳಾಗಿ ನಿಲ್ಲುತ್ತವೆ. ಸರ್ವಶಕ್ತನಾದ ಭಗವಂತನಿಗೆ ಅನನ್ಯವಾಗಿ ಶರಣುಹೋಗುವುದು ತೀರ ಅಗತ್ಯವಾಗಿದೆ. ಏಕೆಂದರೆ ಆತನು ಉಪಾಯ ಹಾಗೂ ಉಪೇಯ ಎರಡೂ ಆಗಿರುವನು. ನಮ್ಮನ್ನು ಮುನ್ನಡೆಸುವ ಗುರು ಪರಮಾತ್ಮನಲ್ಲಿ ಎಷ್ಟು ಮಟ್ಟಿಗೆ ಲೀನನಾಗಿರುವನೆಂದರೆ, ಸಹಾಯಕ್ಕಾಗಿ ಕೈನೀಡಿ ಒದ್ದಾಡುತ್ತಿರುವ ಜೀವಕ್ಕೆ ಆತನು ಪರಮಾತ್ಮನ ಅವತಾರವೇ ಹೊರತು ಬೇರೆ ಅಲ್ಲ.

ಸಾಧನದ ಪ್ರಾಚೀನಪದ್ಧತಿಗಳನ್ನು ಸುಂದರವಾಗಿ ತಿಳಿಸಿಕೊಟ್ಟು ಪ್ರಾತಃಕಾಲ, ಹಾಗು ಮಧ್ಯಾಹ್ನ ಹಾಗು ಸಾಯಂ ಸಂಧ್ಯೆಗಳಲ್ಲಿ ಪೂಜೆ ಹಾಗು ಧ್ಯಾನದ ಅಗತ್ಯವನ್ನು ತರ್ಕಬದ್ಧವಾಗಿ ತೋರಿಸಿಕೊಡಲಾಗಿದೆ. ಯೋಗದ ಅಂಗಗಳನ್ನು ತಿಳಿಯಾಗಿ ನಿರೂಪಿಸಲಾಗಿದ್ದು ಸಹಜವಾದ ಆಧ್ಯಾತ್ಮಿಕ ಸಾಧನಗಳನ್ನು ಗುರಿಯೊಂದಿಗೆ ಹೇಗೆ ಹೊಂದಿಸಿಕೊಳ್ಳಬೇಕೆಂಬುದನ್ನು ಸರಳವಾಗಿ

ಹಾಗು ನೇರವಾಗಿ ಹೇಳಲಾಗಿದೆ. ಗುರುವಿನ ಪ್ರಾಣಾಹುತಿಯಿಂದುಂಟಾಗುವ ಅಂತಃಕರಣ ಶುದ್ಧಿಯು ಇತ್ತೀಚಿನ ಕಾಲದ ಆಧ್ಯಾತ್ಮಿಕ ಇತಿಹಾಸದಲ್ಲಿಯೆ ಕಾಣಸಿಗದ ಸಿದ್ಧಿಯಾಗಿದೆ. ದೇವರಿಗಾಗಿ, ದೇವರಿಂದ, ದೇವರಲ್ಲಿ ಜೀವಿಸುವುದು ಸಹಜಮಾರ್ಗಸಾಧನೆಯು ಪಲ್ಲವಿಯಾಗಿದೆ. ಇದು ಸಹಜವಾಗಿಯೆ ದೇವರಿಗಾಗಿ ದೇವರಲ್ಲಿ ತನ್ನ ಸತ್ಯದ ಸಾಕ್ಷಾತ್ಕಾರಕ್ಕೆ ದಾರಿಮಾಡಿಕೊಡುವುದು. ಅದರಂತೆ ಸಾಧಕನು ಯಾವ ಭೇದಭಾವವೂ ಇಲ್ಲದೆ ಎಲ್ಲರೊಂದಿಗೂ ಸಮರಸವಾಗುವನು. ದೇವರಿಗಾಗಿಯೇ ದೇವರಲ್ಲಿ ಜೀವಿಸುವವನಿಗೆ ಊರ್ಧ್ವಲೋಕಗಳು ಮುಕ್ತದ್ವಾರವಾಗಿವೆ. ಆಧ್ಯಾತ್ಮವು ಮತಧರ್ಮದಂತೆ ಕೇವಲ ಒಂದು ಪೂಜಾವಿಧಾನವಾಗಲಿ ಆಚಾರಗಳ ತಂತ್ರವಾಗಲಿ ಅಲ್ಲ. ದೇವರ ಅರಿವಿನಲ್ಲಿ ಹಾಗು ಆತನ ಸತ್ತ್ವದಲ್ಲಿ ಜೀವಿಸುವುದೇ ಆಧ್ಯಾತ್ಮ.

ಸಹಜಮಾರ್ಗದ ನಿಯಮಗಳನ್ನು ಪಾಲಿಸುವುದರಿಂದ ವ್ಯಕ್ತಿಯ ಆತ್ಮವು ಪ್ರಥಮಸಂಪರ್ಕದಲ್ಲಿಯೆ ತಿಳಿವನ್ನು ಮೀರಿದ ಶಾಂತಿಯನ್ನು ಅನುಭವಿಸಿ ಈ ಶಾಂತಿಯಲ್ಲಿ ಬೆಳೆಯುತ್ತ ಪರಾಕಾಷ್ಠೆಯನ್ನು ತಲುಪಲು ಹೇಗೆ ಸಾಧ್ಯವೆಂಬುದನ್ನು ಶ್ರೀ ರಾಮಚಂದ್ರಜಿಯವರು ತೋರಿಸಿಕೊಟ್ಟಿದ್ದಾರೆ. ಮೋಕ್ಷವೆಂಬುದು ಈ ಅಭ್ಯಾಸದ ಸಹಜ ಪರಿಣಾಮ. ದೈವೀಸಂಕೇತವಿದ್ದವರಿಗೆ ಪರಿಪೂರ್ಣತೆಯೂ ಲಭಿಸಬಲ್ಲುದು.

ಈ ವಿವರಣೆಯಲ್ಲಿ ಸ್ವಲ್ಪ ಭೌತ ವಿಜ್ಞಾನವೂ ಅಧ್ಯಾತ್ಮವೂ ಬಂದಿವೆ. ಅದನ್ನು ಕುರಿತು ಚರ್ಚಿಸುವುದು ಅಷ್ಟು ಮಹತ್ತ್ವದ್ದಲ್ಲ. ಅಭ್ಯಾಸದಲ್ಲಿ ಮುಂದುವರಿದಂತೆ ಅದು ತಾನಾಗಿಯೆ ಸ್ಪಷ್ಟವಾಗುವುದು.

ಮನುಷ್ಯನ ಸ್ವಭಾವವು ಸಂಪೂರ್ಣ ಪರಿವರ್ತನವಾಗಬೇಕೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆತನ ಸಿದ್ಧಿಯು ಹೆಚ್ಚು ಹೆಚ್ಚು ಸತ್ಯವೆಂದು ಅನುಭವಕ್ಕೆ ಬರಬೇಕಾದರೆ ಆತನು ವಿಶ್ವ ಹಾಗು ವಿಶ್ವಾತೀತ ಸತ್ತ್ವದ ಮಾರ್ಗದರ್ಶನಕ್ಕೊಳಗಾಗಬೇಕು. ಕೇಂದ್ರ ಅಥವಾ ಅಂತಿಮ ಗುರಿಯನ್ನು ಸಮೀಪಿಸಿದಂತೆಲ್ಲ ಆತ್ಮ ಸತ್ಯವೂ ಹೆಚ್ಚುತ್ತ ಹೋಗಿ ಹಿಂದೆ ಗತಿಸಿಹೋದುದೆಲ್ಲ

ಅಸತ್ಯವೆಂದು ತೋರುವುದು. ಆದರೂ ಕೇಂದ್ರವನ್ನು ಸಮೀಪಿಸಿದಂತೆಲ್ಲ ಕಾಣತೊಡಗುವ ಅತಿಶಯ ಸತ್ಯವನ್ನು ಅನುಭವಿಸುವುದೇ ಸಾಧಕನ ಉದ್ದೇಶ.

ಈ ಕ್ಷೇತ್ರದಲ್ಲಿ ಶ್ರೀ ರಾಮಚಂದ್ರಜಿಯವರ ಸಂಶೋಧನಗಳು ವಿಲಕ್ಷಣ ವಾಗಿ ಗತಿಶೀಲ ಹಾಗು ಅನುಷ್ಠಾನಯೋಗ್ಯವಾಗಿವೆ. ದೇವರು ನಮ್ಮಿಂದ ಎಲ್ಲೋ ದೂರದಲ್ಲಿಲ್ಲ. ಆತನು ತೀರ ಸಮೀಪದಲ್ಲಿಯೆ ಸಿದ್ಧೋಪಾಯ ನಾಗಿದ್ದಾನೆ. ಆತನ ಸಾನ್ನಿಧ್ಯವನ್ನೂ, ಪರಿವರ್ತನಗೊಳಿಸುವ ಆತನ ಶಕ್ತಿ ಯನ್ನೂ ಅನುಭವಿಸಲು ಮನುಷ್ಯನು ಆತನ ಕಡೆಗೆ ತಿರುಗಿದರೂ ಸಾಕು. ಈ ಅನುಭವವು ಎಲ್ಲರಿಗೂ ಸಾಧ್ಯವಾಗುವಂತೆ ಮಾಡಿದ ಫತೆಹ್‌ಗಡದ ಮಹಾತ್ಮಾ ಶ್ರೀ ರಾಮಚಂದ್ರಜಿಯವರಿಗೂ ವಿಮೋಚನೆಯು ಹಾಗು ಪರಿವರ್ತನೆಯ ಈ ಸುವಾರ್ತೆಯನ್ನು ಹರಡುತ್ತ ತಮ್ಮ ಕಡೆಗೆ ಬಂದವರಿಗೆಲ್ಲ ಪ್ರತ್ಯಕ್ಷ ಪ್ರಯೋಗದ ಮೂಲಕ ತೋರಿಸಿಕೊಡುತ್ತಿರುವ ಷಾಹಜಹಾನ್- ಪೂರದ ಶ್ರೀ ರಾಮಚಂದ್ರಜಿಯವರಿಗೂ ನಾವು ಋಣಿಯಾಗಿದ್ದೇವೆ.

ಈ ಪುಸ್ತಕವು ಒಂದು ದೃಷ್ಟಿಯಿಂದ ಮುಂದುವರಿದ ಅಭ್ಯಾಸಿಗಳಿಗಾಗಿ ಇದ್ದರೂ ತುಂಬ ಉದ್ಬೋಧಕವಾಗಿದೆ. ಇದನ್ನು ಗುರುಗಳ 'ಸತ್ಯೋದಯ' ಹಾಗು 'ರಾಜಯೋಗದ ಪ್ರಭಾವ'ಗಳ ಅಭ್ಯಾಸದ ಅನಂತರ ಓದಬೇಕು.

**ತಿರುಪತಿ** **ಕೆ. ಸಿ. ವರದಾಚಾರಿ**

# ಬಿನ್ನಹ

ಇದುವರೆಗೂ ಹೃದಯದಿಂದ ಹೃದಯಕ್ಕೆ ವೇದ್ಯವಾಗುತ್ತ ಬಂದಿದ್ದ ಆಧ್ಯಾತ್ಮಿಕ ರಹಸ್ಯಗಳನ್ನು ಶಬ್ದಗಳಲ್ಲಿ ಹಿಡಿದಿಟ್ಟು ಪುಸ್ತಕ ರೂಪದಲ್ಲಿ ತರಲು ಯತ್ನಿಸಿದ್ದೇನೆ. ಆದರೆ ಈ ವಿಷಯಗಳು ನಿಸರ್ಗದ ಅವಲೋಕನವನ್ನು ಅವಲಂಬಿಸಿರುವ ಅನುಭವಕ್ಕೆ ಸಂಬಂಧಪಟ್ಟಿವೆ. ಅಂಥ ಅನುಭವವಾದರೋ ಸ್ಪಂದನಗಳ ಮೂಲಕ ಗೋಚರಿಸುವುದು. ಆದುದರಿಂದ ಶಬ್ದಗಳ ಮೂಲಕ ಇವುಗಳ ಅಭಿವ್ಯಕ್ತಿ ಕೇವಲ ಕಠಿಣವಷ್ಟೇ ಅಲ್ಲ, ಹಲವು ಸಲ ಅಶಕ್ಯವಾಗುವುದು.

ಶಬ್ದ – ಅರ್ಥಗಳಲ್ಲಿ ಪ್ರೇಮುವ<br>
ಬಣ್ಣಿಸಲು ಅದು ನಿಲುಕದು;<br>
ಇಂಥ ಸತ್ಯವಿದೊಂದು, ಬಗೆವೊಡೆ<br>
ಹೇಳಲೇನೂ ಬಾರದು.

ಈ ದೃಷ್ಟಿಯಿಂದ ಅಭಿಮಾನಿಗಳು ಇದರಲ್ಲಿಯ ಶಬ್ದವಿನ್ಯಾಸ ಹಾಗು ವಾಕ್ಯರಚನೆಯ ದೋಷಗಳನ್ನು ಕಡೆಗಣಿಸಿ ಮೂಲಾರ್ಥವನ್ನು ತಿಳಿಯಲು ಪ್ರಯತ್ನಿಸುವುದೊಳಿತು. ಅದರಿಂದ ಸ್ವತಃ ಲಾಭ ಹೊಂದಿ ಅನ್ಯರಿಗೂ ಲಾಭ ಮಾಡಿಕೊಡಬೇಕು.

೮–೧೨–೧೯೪೬ **ರಾಮಚಂದ್ರ**

# ಬಿನ್ನಹ

ಇದುವರೆಗೂ ಹೃದಯದಿಂದ ಹೃದಯಕ್ಕೆ ವೇದ್ಯವಾಗುತ್ತ ಬಂದಿದ್ದ ಆಧ್ಯಾತ್ಮಿಕ ರಹಸ್ಯಗಳನ್ನು ಶಬ್ದಗಳಲ್ಲಿ ಹಿಡಿದಿಟ್ಟು ಪುಸ್ತಕ ರೂಪದಲ್ಲಿ ತೆರಲು ಯತ್ನಿಸಿದ್ದೇನೆ. ಆದರೆ ಈ ವಿಷಯಗಳು ನಿಸರ್ಗದ ಅವಲೋಕನವನ್ನು ಅವಲಂಬಿಸಿರುವ ಅನುಭವಕ್ಕೆ ಸಂಬಂಧಪಟ್ಟಿವೆ. ಅಂಥ ಅನುಭವವಾದರೋ ಸ್ಪಂದನಗಳ ಮೂಲಕ ಗೋಚರಿಸುವುದು. ಆದುದರಿಂದ ಶಬ್ದಗಳ ಮೂಲಕ ಇವುಗಳ ಅಭಿವ್ಯಕ್ತಿ ಕೇವಲ ಕಠಿಣವಷ್ಟೇ ಅಲ್ಲ, ಹಲವು ಸಲ ಅಶಕ್ಯವಾಗುವುದು.

ಶಬ್ದ – ಅರ್ಥಗಳಲ್ಲಿ ಪ್ರೇಮವ
ಬಣ್ಣಿಸಲು ಅದು ನಿಲುಕದು;
ಇಂಥ ಸತ್ಯವಿದೊಂದು, ಬಗೆವೊಡೆ
ಹೇಳಲೇನೂ ಬಾರದು.

ಈ ದೃಷ್ಟಿಯಿಂದ ಅಭಿಮಾನಿಗಳು ಇದರಲ್ಲಿಯ ಶಬ್ದವಿನ್ಯಾಸ ಹಾಗು ವಾಕ್ಯರಚನೆಯ ದೋಷಗಳನ್ನು ಕಡೆಗಣಿಸಿ ಮೂಲಾರ್ಥವನ್ನು ತಿಳಿಯಲು ಪ್ರಯತ್ನಿಸುವುದೊಳಿತು. ಅದರಿಂದ ಸ್ವತಃ ಲಾಭ ಹೊಂದಿ ಅನ್ಯರಿಗೂ ಲಾಭ ಮಾಡಿಕೊಡಬೇಕು.

೮–೧೨–೧೯೪೬ ರಾಮಚಂದ್ರ

# ಅನುವಾದಕನ ಅರಿಕೆ

ಈ ಪುಸ್ತಕವು ಸಹಜಮಾರ್ಗಸಾಧನೆಯ ಅಡಿಗಲ್ಲಿನಂತಿರುವ ಹತ್ತು ನಿಯಮಂಗಳ ಮೇಲಿನ ವ್ಯಾಖ್ಯಾನ. ಶ್ರೀ ಗುರು ಮಹಾರಾಜರು ಇದನ್ನು ಮೂಲತಃ ಉರ್ದು ಭಾಷೆಯಲ್ಲಿ ಬರೆದಿದ್ದಾರೆ. ಅವರ ಉರ್ದು ಭಾಷೆ ಲಲಿತವೂ ರಸಾರ್ದ್ರವೂ ಅತ್ಯಂತ ಪರಿಣಾಮಕಾರಿಯೂ ಆಗಿದೆ. ಉರ್ದುವಿನಲ್ಲಿ ನನ್ನ ಯೋಗ್ಯತೆ ಅತ್ಯಲ್ಪ. ಅನುವಾದ ಮಾಡುವಾಗ ಮೂಲದ ಬಹಳಷ್ಟು ಸ್ವಾರಸ್ಯ ಲೋಪವಾಗಿದೆಯೆಂದೇ ನನ್ನ ಭಾವನೆ. ಉರ್ದು ಬಲ್ಲವರು ಮೂಲವನ್ನು ಓದಿಯೇ ತಣಿಯಬೇಕು.

ಇದನ್ನು ಬಹಳಷ್ಟು ಪರಿಷ್ಕರಿಸಿ ಇದಕ್ಕೊಂದು ರೂಪ ತಂದುಕೊಟ್ಟವರು ನನ್ನ ಗುರುಬಂಧುಗಳಾದ ಶ್ರೀ ರಾಘವೇಂದ್ರರಾಯರು ಹಾಗು ರಾಯಚೂರಿನ ಇತರ ಬಂಧುಗಳು. ಅವರೆಲ್ಲರಿಗೂ ನನ್ನ ಹಾರ್ದಿಕ ವಂದನೆಗಳು. ಇದರ ಪ್ರಕಟನೆಯಲ್ಲಿ ಒಂದಿಲ್ಲೊಂದು ರೀತಿಯಿಂದ ನೆರವಾಗಿರುವ ಎಲ್ಲ ಬಂಧುಗಳಿಗೂ ನನ್ನ ನೆನಕೆಗಳು.

ಕಲಬುರ್ಗಿ
ಸಾಧಾರಣ ಸಂವತ್ಸರ,
ಚೈತ್ರಶುದ್ಧ ಪಾಡ್ಯಮಿ.

**ಶ್ರೀ. ಆ. ಸರ್ನಾಡ**

ಓಂ

## ಸಮರ್ಥಗುರು ಶ್ರೀ ಮಹಾತ್ಮಾ ರಾಮಚಂದ್ರಜಿ ಮಹಾರಾಜ, ಫತೇಹ್‌ಗಡ, ಇವರ ಸ್ಮರಣಾರ್ಥ ಶ್ರದ್ಧಾಂಜಲಿ.

ಅಧ್ಯಾತ್ಮಲೋಕವನು ಬೆಳಗಿಸಿದ ಭಾನು !
ಪರಮಾತ್ಮನರಿವನ್ನು ಪಡೆದುಕೊಂಡವನು.
ಜಿಜ್ಞಾಸುಗಳಿಗೆ ನೀ ಮಾರ್ಗದರ್ಶನ ಗೈದೆ
ಪಾರಮಾರ್ಥಕೆ ದೇಹ - ಪ್ರಾಣ ನೀನು.

ನಿನ್ನ ಜೀವಿತದ ಪ್ರತಿಯೊಂದು ರೀತಿಯಲಿ
ಪರಮಾರ್ಥವೈಭವವು ಕಾಣುತಿತ್ತು;
ಪ್ರತಿ ಹಾವಭಾವದಲಿ ವ್ಯಕ್ತವಾಗುತಲಿತ್ತು
ಲೋಕವನು ಬೆಳಗಿಸುವ ದಿವ್ಯ ತೇಜಸ್ಸು.

ಪರಮಾತ್ಮನಲಿ ನೀನು ಐಕ್ಯನಾದರು, ಇನ್ನೂ
ಗದ್ದಿಗೆಯ ಮೇಲಿಹುದು ಎಂಥ ಬೆಳಕು !
ಪ್ರತಿಯೊಂದು ಕಣದಲ್ಲು ಎದ್ದು ಕಾಣುತಲಿಹುದು
ಪರಮಾರ್ಥಜೀವನದ ಸೊಂಪು – ಥಳಕು !

ಸುತ್ತಲೂ ಕವಿದಿದ್ದ ಅಂಧಕಾರವ ನೋಡಿ
ಅಧ್ಯಾತ್ಮಕ್ಷೇತ್ರದಲಿ ಕ್ರಾಂತಿಗೊಳಿಸಿ;
ಸಹಜಮಾರ್ಗವ ರಚಿಸಿ, ಹೊಸ ತಳಹದಿಯಲೊಂದು
ಪರಮಾರ್ಥಸೌಧವನು ನಿರ್ಮಿಸಿರುವಿ.

ನಿನ್ನೊಂದು ಭ್ರೂಚಲನದೊಳಗೇನು ಭವ್ಯತೆಯೊ !
ಹೇಳಬಲ್ಲವರಾರು ಗಂಟ್ಟನರಿದು ?
ಅದರ ತೇಜದಿ ಬೆಳಗಿ ತೊಳಗಿತ್ತು ಸುತ್ತಲಿನ
ಪರಮಾರ್ಥದಾಕಾಶ, ತಮವು ಹರಿದು ;

ನೀನಂ ಊದಿದ ಪ್ರಾಣಬಲದಿ ಪ್ರವಹಿಸುತಿಹುದು
ಇಂದಿಗೂ ಅದರನುಗ್ರಹದ ಧಾರೆ;
ಹಸನಾಗಿ ಎಲ್ಲೆಡೆಗು ಅರಳಿನಿಂತಿದೆ ಈಗ
ಪರಮಾರ್ಥ–ಹೂದೋಟ ಮುದವ ಬೀರೆ.

ನಿನ್ನ ಆ ಒಂದೊಂದು ಮಾತಿನಲ್ಲಿಯು ಪ್ರೇಮ–
ಪೀಯೂಷ ತುಂಬಿ ಹರಿಯುತ್ತಲಿತ್ತು;
ನಿನ್ನ ಆ ಒಂದೊಂದು ನೋಟವೂ ಪರಮಾರ್ಥ–
ದೊಂದೊಂದು ಕಥೆಯನ್ನು ಸಾರುತ್ತಿತ್ತು.

ಸಹನೆ – ಅವಿಚಲನಿಷ್ಠೆಗಳ ದಿವ್ಯ ಸಂಸಿದ್ಧಿ
ದರ್ಶನೀಯವು; ನಿನಗಾಗಿ ಪ್ರಾಣಕೊಡಲುಂ
ಸಿದ್ಧರಿದ್ದರುಂ ತಮ್ಮ ನೂರು ಪ್ರಾಣಗಳಿಂದ
ಅಧ್ಯಾತ್ಮದಭಿಲಾಷೆಯುಳ್ಳ ಜನರು.

"ತೆರೆಯುವುದು ಸಾಧಕರ ಸುಪ್ತಸೌಭಾಗ್ಯವದು;
ಬೆಳಗುವುದು ತಾನೆ ಪರಮಾರ್ಥ ತೇಜಸ್ಸು.
ಸೆಳೆಯುವುದುಂ ಭಕ್ತರ, ಪತಂಗವಂ ದೀಪದೊಲು"
ಎಂದ ನಿನ್ನಯ ಮಾತು ಸತ್ಯವಾಯ್ತು.

ನಿನ್ನ ಕೃಪೆ, ನಿನ್ನನುಗ್ರಹದಿಂದ ಇಂದು
ಬೀರುತಿದೆ ಆ ಜ್ಯೋತಿ ದಿವ್ಯಪ್ರಭೆಯು.
ಪರಮಾತ್ಮ ಪ್ರೇಮಿಗಳು ಪಡೆದುಂಕೊಳ್ಳುತಲಿಹರು
ಪರಮಾರ್ಥದಾಲೋಕ ಮೋದದಿಂದ.

ಸತ್ಯದೃಷ್ಟಿಯನುಳ್ಳ 'ಬಿಸ್ಮಿಲ್'*
ನೋಡಿಕೋ ಸಂತೋಷದಿ !
ಪಾರಮಾರ್ಥದ ಪುಷ್ಪವನವದು
ಹೇಗೆ ವಿಕಸಿತವಾಗಿದೆ.

**ಮದನ ಮೋಹನಲಾಲ್ ಶ್ರೀವಾಸ್ತವ**
ವಕೀಲ, ಬದಾಯೂನ್

---

* ಇದು ಕವಿಯ ಅಂಕಿತ.

# ನಿಯಮ – ೧

**ಬೆಳಗು ಮುಂಜಾನೆ ಏಳಿರಿ. ಸಂಧ್ಯೋಪಾಸನೆಯನ್ನು ನಿಯಮಿತ ಸಮಯಕ್ಕೆ ಮುಗಿಸಿರಿ. ಸೂರ್ಯೋದಯಕ್ಕಿಂತ ಮುಂಚಿತವಾದರೆ ಬಹಳ ಒಳಿತು. ಪೂಜೆಗಾಗಿ ಪ್ರತ್ಯೇಕವಾಗಿ ಸ್ಥಳವನ್ನೂ ಆಸನವನ್ನೂ ಇರಿಸಿಕೊಳ್ಳಿರಿ. ಆದಷ್ಟು ಮಟ್ಟಿಗೆ ಒಂದೇ ಆಸನದಲ್ಲಿ ಕುಳಿತುಕೊಳ್ಳುವ ರೂಢಿಯನ್ನು ಹಾಕಿಕೊಳ್ಳಿರಿ. ಶಾರೀರಿಕ ಹಾಗು ಮಾನಸಿಕ ಪವಿತ್ರತೆಯ ಕಡೆಗೆ ವಿಶೇಷ ಲಕ್ಷ್ಯವಿರಲಿ.**

ಸೃಷ್ಟಿಯು ಪ್ರಾರಂಭವಾದ ದಿನದಿಂದ ಪ್ರಜ್ವಲಿಸುತ್ತಿರುವ ಉರಿ ಇನ್ನೂ ಆರಿಲ್ಲ. ಸೃಷ್ಟಿಯು ಪ್ರಕಟವಾಗುವ ಸಮಯ ಬರಲು, ಕ್ಷೋಭೆ ಉಂಟಾಯಿತು. ಪರಮಾಣುಗಳಲ್ಲಿ ಕಾವು ಮೂಡಿತು. ಹೀಗೆ ಆದಿಯಿಂದಲೇ ಮೊದಲನೆಯ ಆವರಣ ಉಂಟಾಯಿತೆನ್ನಬಹುದು. ಈ ಬೆಂಕಿಯು ಪರಮಾಣುಗಳನ್ನು ಸತತವಾಗಿ ಕಾಯಿಸಿ ಅವುಗಳಿಗೆ ಚಾಲನ ಕೊಡಲಾರಂಭಿಸಿತು. ಅದರ ಪ್ರಖರತೆ ಹೆಚ್ಚುತ್ತ ಹೋದಂತೆಲ್ಲ ಆವರಣಗಳ ಮೇಲೆ ಆವರಣಗಳು ಬೆಳೆಯುತ್ತ ಹೋದುವು. ಸ್ಥೂಲತೆಯು ಹೆಚ್ಚತೊಡಗಿ ಚಟುವಟಿಕೆಯುಂಟಾಗುತ್ತಲೇ ನಡೆಯಿತು. ಎಲ್ಲವೂ ತಮ್ಮ ತಮ್ಮ ಕ್ರಿಯೆಗಳನ್ನಾರಂಭಿಸಿದುವು. ಅದರ ಪರಿಣಾಮವಾಗಿ ಸತ್ಯವು ರೇಶ್ಮೆಹುಳದಂತೆ ಗೂಡಿನಲ್ಲಿ ಮರೆಯಾಯಿತು. ತತ್ತಿಯ ಬಿಳಿಯ ಭಾಗವಷ್ಟೆ ಗೋಚರವಾಗತೊಡಗಿತು. ಭಾವಸಂಬಂಧವು ಅಸ್ತಿತ್ವದಲ್ಲಿ ಬರತೊಡಗಿತು. ಯಾರು ಅದರೊಂದಿಗೆ ಹೆಚ್ಚು ನಿಕಟವರ್ತಿಗಳಾಗಿ ಸ್ನೇಹವಶರಾದರೋ ಅವರ ಪಾಲಿಗೆ ಈ ವಸ್ತು ಹೆಚ್ಚು ದೊರೆಯಿತು; ಮತ್ತು ಮೊದಲನೆಯ ದಿನವಿದ್ದ ಉಷ್ಣತೆಯು ಮನುಷ್ಯನಲ್ಲಿ ಪ್ರಕಟವಾಗಿ ಮೆಲ್ಲಮೆಲ್ಲನೆ ವೃದ್ಧಿಹೊಂದಿ ಸುಸ್ಪಷ್ಟ ಆಕಾರವನ್ನು ತಳೆಯಿತು. ಪ್ರತಿಯೊಂದು ಕಣದ ಮೇಲೂ ಅದರ ಪರಿಣಾಮವಾಗಿ ಅದು ಅದರಲ್ಲಿ ಪಾಲುಗೊಂಡಿತು. ಹೀಗೆ ಕೂಡಿದ ವಸ್ತುವು ಪಾರ್ಥಿವವಾಗಿದ್ದಿತು. ಯಾವುದರಲ್ಲಿ ಇದರ ಪಾಲು ಇದೆಯೋ ಅದರ ಅಧೀನವಾಗಿಯೆ ಇದು

ಉಳಿಯಿತು. ಅರ್ಥಾತ್ ಉಷ್ಣತೆಯಿಂದುಂಟಾದ ಆ ದೊಡ್ಡ ಕವಚವು ಇದರೊಂದಿಗೆ ಹೆಚ್ಚು ಸಂಬಂಧವನ್ನಿಟ್ಟುಕೊಂಡಿತು. ಈಗ ಆ ದೊಡ್ಡ ವಸ್ತುವಿನ ಮೇಲೆ ಉಂಟಾದ ಪರಿಣಾಮವು ಸಣ್ಣ ವಸ್ತುಗಳಲ್ಲಿಯೂ ಅವುಗಳ ಗಾತ್ರಕ್ಕೆ ತಕ್ಕಂತೆ ಪ್ರಕಟವಾಗುವುದು ಸ್ವಾಭಾವಿಕವಾಗಿದೆ. ಈ ವಸ್ತುಗಳ ಮೇಲೆ ಬಾಹ್ಯಪರಿಣಾಮಗಳೂ ಉಂಟಾಗುವುವು. ಕಿರಣಗಳ ಪರಿಣಾಮವು ಎಲ್ಲ ವಸ್ತುಗಳ ಮೇಲೂ ಆಗುತ್ತದೆ. ಎರಡರ ಕಾರ್ಯಗಳೂ ಅವುಗಳ ಗಾತ್ರವನ್ನನುಸರಿಸಿ ಬಹುಶಃ ಒಂದೇ ಆಗುವುವು. ಬಾಹ್ಯ ಪರಿಣಾಮಗಳಿಂದುಂಟಾದ ಉಷ್ಣತೆಯು ಶಾಂತವಾಗಲಾರಂಭಿಸುವುದು. ಅದು ಶಾಂತವಾದಾಗಲೆ ನಿಜವಾದ ಸುಖ ದೊರೆಯುವುದು. ಉದಾಹರಣೆಗಾಗಿ, ಬೇಸಗೆಯ ಕಾಲವನ್ನೇ ತೆಗೆದುಕೊಳ್ಳಿರಿ. ಹೊರಗಿನ ಉಷ್ಣತೆಯ ಪರಿಣಾಮವು ಸಂಪೂರ್ಣವಾಗಿ ಕಡಮೆಯಾದಾಗಲೇ ಸ್ವಲ್ಪ ಸುಖ-ಶಾಂತಿಗಳು ಲಭಿಸುತ್ತವೆ. ಈ ಹೊರಗಿನ ಉಷ್ಣತೆಯು ಕಡಿಮೆಯಾಗುವ ಸಮಯವನ್ನು ಮಹಾತ್ಮರು ಗಣನೆಗೆ ತೆಗೆದುಕೊಂಡರು. ಈ ಉಷ್ಣತೆಯು ನಾಶವಾಗತೊಡಗಿದಾಗ ತಂಪಿನ ಪರಿಣಾಮ ತಲೆದೋರಲಾರಂಭಿಸುವುದು. ಇವೆರಡೂ ಕೂಡುವ ವೇಳೆಗೆ ಸಂಧಿಗತಿಯೆನ್ನುವರು. ಈ ಸಂಧಿಗತಿಯಲ್ಲಿ ಪೂಜೆ-ಉಪಾಸನೆಗಳನ್ನು ಮಾಡುವುದು ಕರ್ತವ್ಯವೆಂದು ಮಹಾತ್ಮರು ವಿಧಿಸಿದ್ದಾರೆ. ಈ ಸಮಯದಲ್ಲಿ ಉಷ್ಣತೆಗೆ ವಿರುದ್ಧವಾದ ವಸ್ತುವು ಪ್ರಕಟವಾಗುವುದು. ಅರ್ಥಾತ್ ಉಷ್ಣತೆಯು ಹುಟ್ಟುವದಕ್ಕಿಂತ ಮುಂಚೆ ಅನಾದಿಕಾಲದಿಂದ ಯಾವುದು ಇದ್ದಿತೋ ಅದು. ಇದೆಂಥ ಉತ್ತಮ ಸಮಯವೆಂಬುದನ್ನು ಸ್ವಲ್ಪ ಯೋಚಿಸಿರಿ. ಇದು ನಿಸರ್ಗದೊಂದಿಗೆ ತೀರ ಸರಿಹೊಂದುತ್ತದೆ. ಇದನ್ನು ತಿಳಿದೇ ಹೀಗೆ ವಿಧಿಸಲಾಗಿದೆ. ನಾವು ಮುಟ್ಟಬೇಕಾದ ಅವಸ್ಥೆಯು ಸ್ಥೂಲ ಸ್ವರೂಪವೇ ಇದೆಂದು ಹೇಳಲು ಅಡ್ಡಿಯಿಲ್ಲ. ಇದು ಮೂಲದ ಪ್ರತಿಕೃತಿಯೆ ಆದುದರಿಂದ ನಮಗೆ ಮುಂದುವರಿಯಲು ಪ್ರೇರಣೆ ದೊರೆಯುವುದು. ಹೀಗೆ ನಾವು ಹೊರಡುವ ಬಿಂದುವು ಎಲ್ಲ ವಿಧದಲ್ಲಿಯೂ ನಮ್ಮ ಗುರಿಯೊಂದಿಗೆ ಹೋಲುವುದು.

'ತಮ'ದ ಸಂಧ್ಯೆಯನ್ನು ಕುರಿತಾದರೂ ಒತ್ತಿ ಹೇಳಲಾಗಿದೆ. ಆದರೆ ಆ ಶಕ್ತಿಯ ಉಪಯೋಗವನ್ನು ಬೇರೆ ವಿಧವಲ್ಲಿ ಮಾಡಲಾಗಿದೆ. ಸೂರ್ಯನ

ಕಿರಣಗಳು ಆ ಕಾಲದಲ್ಲಿ ನೇರವಾಗಿ ಬೀಳುವುದರಿಂದ ಹೆಚ್ಚು ಉಷ್ಣತೆಯನ್ನು ಹುಟ್ಟಿಸುವುವು. ಈ ಉಷ್ಣತೆಯಾದರೂ ಪ್ರತಿಯೊಂದು ಪದಾರ್ಥದ ಮೂಲವಾದ ನಿಸರ್ಗದಿಂದಲೇ ಬಂದುದು. ಈಗ ನಾವು ಬಾಹ್ಯ ಉಷ್ಣತೆಯ ದ್ವಾರಾ ಮೂಲಶಕ್ತಿಯ ಸಮೀಪಕ್ಕೆ ಹೋಗುತ್ತೇವೆ. ಈ ಕ್ರಿಯೆಯು ಉಷ್ಣತೆ ಶಾಂತವಾಗುವವರೆಗೂ ನಡೆಯುವುದು. ಈ ಪ್ರಕಾರ ನಾವು ಇದರಿಂದ ತುಂಬ ಲಾಭ ಪಡೆದು ಅದರ ಅತ್ಯಂತ ಸಾಮೀಪ್ಯವನ್ನು ಹೊಂದಿದೆವು. ಈಗ ನಾವು ಕ್ರಮೇಣ ಅದರ ಸಮೀಪದಲ್ಲಿರುವ – ಆದರೂ ಅದನ್ನು ಸ್ವಲ್ಪ ಬಿಟ್ಟು ಇರುವ – ಸ್ಥಿತಿಯ ಅನುಭವ ಪಡೆಯುವ ಕಾಲ ಬಂದಂತಾಯಿತು. ಇನ್ನು ನಾವು ಅದರ ತೀರ ಹತ್ತಿರ ಹೋಗುವ ಕಾಲ ಬಂದಿತು. ಈ ಕ್ರಿಯೆಯು ನಾವು ಅದರಲ್ಲಿ ಪ್ರವೇಶಿಸಲು ಸಹಾಯ ಮಾಡಿತು. ಆದುದರಿಂದಲೇ ಮಹಾತ್ಮರು ಮಧ್ಯಾಹ್ನಸಂಧ್ಯೆಯನ್ನು ಕುರಿತು ಹೇಳಿದ್ದಾರೆ. ಕಾರಣವಿಷ್ಟೆ : ಸೂರ್ಯನ ಕಿರಣಗಳು, ಪರಿಣಾಮ ಮಾಡುತ್ತ ಮಾಡುತ್ತ ಯಾವ ಸ್ಥಳದಿಂದ ಬಂದುವೋ, ಹಾಗು ಯಾವುದು ಅನಂತರದ ಸ್ಥಿತಿಯಿದೆಯೋ, ಆ ಭಾಗದೊಂದಿಗೆ ತಮ್ಮ ಸಂಬಂಧವನ್ನು ಸ್ಥಾಪಿಸುವುವು. ಈ ಕಿರಣಗಳು ಮಧ್ಯಾಹ್ನದಲ್ಲಿ ನೇರವಾಗಿ ಬೀಳುವುವು. ಆದುದರಿಂದ ಅವು ನಮಗೆ ಸಮೀಪತರವಾಗಿ ಅವುಗಳ ಪರಿಣಾಮವು ನೇರವಾಗಿ ನಮ್ಮ ಮೇಲೆ ಉಂಟಾಗುವುದು. ಸೂರ್ಯನಿಂದ ಬಂದ ಉಷ್ಣತೆಯು ನಿಜವಾಗಿ ಕಣಗಳ ಉಷ್ಣತೆ. ಈಗ ನಾವು ಮಧ್ಯಾಹ್ನ ಕುಳಿತುಕೊಂಡು ಧ್ಯಾನ ಮಾಡಹತ್ತಿದರೆ ಅದು ನಮಗೆ ತಿಳಿಯದಂತೆ ಮೂಲ ಗುರಿಯಕಡೆಗೆ ಎಳೆಯುವುದು. ನಾವು ಕೆಲವೊಂದು ಸಲ ಪ್ರಮೇಯ ಬಿಡಿಸಲು ಉತ್ತರವನ್ನು ಮೊದಲೇ ಕಲ್ಪಿಸಿಕೊಳ್ಳುವೆವು. ಅದರಂತೆಯೆ, ಮಾನವ ಜೀವನದ ಸಮಸ್ಯೆ-ಯನ್ನು ಬಿಡಿಸಲು ನಾವು ಆ ಮೂಲವಸ್ತುವನ್ನು ಮೊದಲೇ ಕಲ್ಪಿಸಿಕೊಳ್ಳ-ಬೇಕಾಗುವುದು. ಅದರ ಚಿತ್ರವು ನಮ್ಮ ಕಲ್ಪನೆಯಲ್ಲಿ ಎಷ್ಟೇ ಅಸ್ಪಷ್ಟವಾಗಿದ್ದರೂ ಚಿಂತೆಯಿಲ್ಲ. ಏಕೆಂದರೆ, ಯಾವುದಾದರೊಂದು ಅವಸ್ಥೆಯ ಶಿಖರವನ್ನು ಮುಟ್ಟಿದಾಗ ನಮಗೆ ಅದರ ಹಿಂದಿನ ಸ್ಥಿತಿಯ ಬೋಧವಿರುವು-ದಿಲ್ಲ. ಆದುದರಿಂದ ಆ ಅಂತಿಮ ಪ್ರಖರತೆಯಿಂದ ನಾವು ಕೆಲಸ ತೆಗೆದುಕೊಂಡೆವು. ಕಣಗಳ ಭೌತಿಕ ಉಷ್ಣತೆಯಾದರೂ ಆಗ ಹೆಚ್ಚಾಗಿರುವುದರಿಂದ

ಮಧ್ಯಾಹ್ನದ ಸಂಧ್ಯೋಪಾಸನೆಯನ್ನು ನಮ್ಮಲ್ಲಿ ಅನಿವಾರ್ಯವೆಂದು ಎಣಿಸಿಲ್ಲ.

ಮಧ್ಯಾಹ್ನದ ಸಂಧ್ಯೆ ಮುಗಿಯುತ್ತ ಮುಗಿಯುತ್ತ ಮತ್ತೆ ಸಾಯಂಕಾಲ ಬರುವುದು. ಆಗ ಉಷ್ಣತೆ ತಕ್ಕಮಟ್ಟಿಗೆ ಶಾಂತವಾಗಿರುವುದು. ಆಗ ನೀವು ಶೈತ್ಯದ ಸಮೀಪವಿರುವಿರಿ. ಕಾಲ ಕಳೆದಂತೆಲ್ಲ ಅದಕ್ಕೆ ತೀರ ಸಮೀಪವಾಗುವಿರಿ. ಕಟ್ಟಕಡೆಗೆ ನಾವು ಅದರ ಸಮೀಪತಮ ಬಿಂದುವನ್ನು ತಲುಪುವೆವು. ಇದು ಪ್ರಾತಃಕಾಲವಿದ್ದಿತು. ಆಗ ಸೂರ್ಯನ ಉಷ್ಣತೆ ಇನ್ನೂ ಕಾಲಟ್ಟಿರಲಿಲ್ಲ. ಇದು ವೈಜ್ಞಾನಿಕ ವಿಷಯವಾಗಿದ್ದು ಅದೇ ರೀತಿ ಯಲ್ಲಿ ಉಷ್ಣತೆ-ಶೈತ್ಯಗಳಿಗನುಸಾರವಾಗಿ ಕಾಲವಿಭಾಗ ಮಾಡಲಾಗಿದೆ.

ಇಲ್ಲಿ ಒಂದು ಪ್ರಶ್ನೆಯೇಳುವುದು. 'ಸತ್' ಮತ್ತು 'ತಮ'ಗಳ ವೇಳೆಯಲ್ಲಿಯೆ ಸಂಧ್ಯೆಯನ್ನು ವಿಧಿಸಲಾಗಿದ್ದು 'ರಜ'ದ ಕಾಲದಲ್ಲಿ ಏಕೆ ವಿಧಿಸಲಾಗಿಲ್ಲ? ಬಹುಶಃ ನಿಮಗೆ ಅನುಪಾತಗಳ ವಿಲೋಮ (***Invertendo***)ದ ಪರಿಚಯವಿದೆ. ಎರಡು ತುದಿಗಳನ್ನು– ಅರ್ಥಾತ್ ಮೊದಲು ಮತ್ತು ಕೊನೆಗಳನ್ನು– ತೆಗೆದುಕೊಳ್ಳಲಾಗಿದೆ. ಆರಂಭವು 'ಸತ್'; ಕೊನೆಯು 'ತಮ'. ಇದನ್ನು ವಿಲೋಮಗೊಳಿಸಿರಿ. ಆರಂಭವು ಕೊನೆಯಾಗುವುದು; ಕೊನೆಯು ಆರಂಭ. ಮಧ್ಯದಲ್ಲಿರುವುದು ಏನೂ ಅಲ್ಲ– ಇವೆರಡನ್ನೂ ಕೂಡಿಸಿರುವ ಒಂದು ಕಾಲ್ಪನಿಕ ರೇಖೆ ಮಾತ್ರ.

ಇಂದು ನಾನು ದೊಡ್ಡ ತತ್ತ್ವಜ್ಞಾನವನ್ನು ನಿಮ್ಮೆದುರಿಗೆ ಇಡುತ್ತಿರು ವೆನು. ಜನರು ಅದನ್ನು ಬಹಳ ಕಡಿಮೆ ತಿಳಿದುಕೊಂಡಿದ್ದಾರೆ. ಸಾಮಾನ್ಯ ವಾಗಿ ಜನರು ಸತ್ತನ್ನೇ ಮೂಲವೆಂದು ಭಾವಿಸುವರು. ಭಗವಂತನನ್ನು ತಿಳಿಯಲು ಅದನ್ನೇ ಅಳತೆಗೋಲಾಗಿ ಮಾಡಿರುವರು. ಆದರೆ ಅದರ ಹಿಂದಿರುವ ರಹಸ್ಯ ಅವರಿಗೆ ತಿಳಿಯದು. ಇದರ ತಳದಲ್ಲಿರುವ ಆ ವಿಶಿಷ್ಟ ವಸ್ತು ಇದುವರೆಗೂ ಅವರ ದೃಷ್ಟಿಗೆ ಬಿದ್ದಿಲ್ಲ. ಈ ಸಂಗತಿಗಳೆಲ್ಲ ಕೇವಲ 'ತಮ'ಕ್ಕೆ ಸಂಬಂಧಪಟ್ಟುವು. ಯೋಗಿಗಳು ಪಡೆಯಬೇಕಾದ ವಿಶಿಷ್ಟ ವಸ್ತು ಇದೇ. ಈ ಬಿಂದುವಿನವರೆಗೆ ಬಂದು ಮುಟ್ಟುವುದು ಬಹಳ ಕಠಿಣ.

ಸತ್ತನ್ನು ಪಡೆಯುವುದು ತೀರ ಸುಲಭ. ಆದರೆ ನಾನು 'ತಮ'ವೆಂದು ಕರೆದಿರುವುದು ಅಷ್ಟು ಸುಲಭಪ್ರಾಪ್ಯವಲ್ಲ. ಅದರಾಚೆಗೆ ಏನೂ ಇಲ್ಲ. ಸಾಮಾನ್ಯವಾಗಿ ಜನರು ಮಾತುಗಳನ್ನೇನೋ ಬಹಳಷ್ಟು ಆಡುತ್ತಾರೆ. ಆದರೆ ವಸ್ತುಗಳ ತಳಕ್ಕೆ ಯಾರೂ ಹೋಗುವುದಿಲ್ಲ. ಸ್ವಚ್ಛತೆ, ಸರಳತೆ ಮತ್ತು ಶಾಂತಿಗಳೂ ಇದರ ಮುಂದೆ ಏನೂ ಅಲ್ಲ. ಅದು ಇವೆಲ್ಲವುಗಳಿಂದ ಬೇರೆಯಾಗಿದೆ. ನೀವು ವರ್ಷಗಟ್ಟಲೆಯ ಪರಿಶ್ರಮದಿಂದಲೂ ಅಗಣಿತ ಜನ್ಮಾಂತರಗಳ ಅನಂತರವೂ ಪಡೆಯುವ ವಸ್ತು ಇದೇ. ಜಗತ್ತಿನ ದೊಡ್ಡ ದೊಡ್ಡ ಸಂತರು ಸಹ ಈ ದೃಶ್ಯದಿಂದ ವಂಚಿತರಾಗಿದ್ದಾರೆ. ನೀವು ಶೋಧಿಸುತ್ತಿರುವ, ಮತ್ತು ನಿಜವಾದ ಜೀವನವಾಗಿರುವ ಆತ್ಮನಿರಸನದ ಸ್ಥಿತಿ ಇದರಲ್ಲಿಯೆ ಇದೆ. ಎಲ್ಲ ಚಟುವಟಿಕೆಗಳೂ ಈ ಬಿಂದುವಿಗೆ ಬರುವ ಮೊದಲೇ ಮುಗಿದು ಹೋಗುವುವು. ನಿಸರ್ಗದ ರಹಸ್ಯವನ್ನು ನಾನಿಂದು ಬಯಲಿಗಿಡುತ್ತಿದ್ದೇನೆ. ಈಶ್ವರ ಅಥವಾ ಮೂಲ ಅವಸ್ಥೆಯ ಕೀಲು ಇದೇ. ಜನರು ಎಷ್ಟೋ ಕಾಲದಿಂದ ಜಿಜ್ಞಾಸೆ ನಡೆಸಿದರು; ಶೋಧ ಮಾಡಿದರು. ಆದರೆ ಯಾವಾಗಲೂ ಮೂಲವಸ್ತುವಿನ ಹಿಂದೆಯೆ ಉಳಿದರು. ಇಲ್ಲಿ ಬೋಧೆಯ ಪ್ರವೇಶವಿಲ್ಲ. ಜನರು 'ತಮ'ದ ಈ ಅವಸ್ಥೆಯನ್ನು ತಮ್ಮ ಕಡುವೈರಿಯೆಂದು ತಿಳಿಯುವರು. ಆದರೆ ಇಂಥ ಪೂರ್ಣ ಅಜ್ಞಾನದ ಸ್ಥಿತಿಯಲ್ಲಿರುವ ಯಾವನಾದರೂ ಸರಳ ಮನುಷ್ಯನನ್ನು ನೀವು ನೋಡಿರುವಿರಾ ? ಆತನ ಸ್ಥಿತಿ ಹೇಗಿರುತ್ತದೆ? ಆತನು ಪ್ರಗತಿ ಹೊಂದುತ್ತ ಪೂರ್ಣತ್ವವೆನಿಸುವ ಅವಸ್ಥೆಯನ್ನು ಮುಟ್ಟಿದಾಗ ಒಬ್ಬ ತಿಳಿಗೇಡಿ ಬಾಲಕನು ಹೇಗೋ ಹಾಗೆ ತನ್ನ ಸ್ಥಿತಿಯನ್ನು ಅಭಿವ್ಯಕ್ತಗೊಳಿಸಲಾರ. ಆದರೆ, ಅದೇ ಸತ್ಯದ ಒಂದು ಸಣ್ಣ ಹನಿ ಆತನನ್ನು ಸೋಂಕಿದುದೇ ಆದರೆ ಆತನಿಗೆ ತನ್ನ 'ತಮ'ದ ಅವಸ್ಥೆಯ ಅಂದಾಜು ಹೊಳೆಯತೊಡಗುವುದು. ಹೀಗೇಕೆ ? ಏಕೆಂದರೆ, ಅವೆರಡರ ಸಂಗಮಬಿಂದುವು ಒಂದು ಹೊಸ ವಸ್ತುವನ್ನೇ ನಿರ್ಮಿಸುವುದು. ಸೃಷ್ಟಿಯ ಆರಂಭದಲ್ಲಿ ಇದ್ದುದಾದರೂ ಅದೇ. ಈಗ ಮತ್ತೆ ಅದೇ ಮೇಲೆ ವಿವರಿಸಲಾದ ವಿಲೋಮದ ಸಮಸ್ಯೆ ಬರುವುದು.

ಮೂಲತತ್ತ್ವದ ಮೂರನೆಯ ಅವಸ್ಥೆಯೆ ನಿಸರ್ಗದ ಸುಂದರ ದೃಶ್ಯ. ಜನರು ವಾಸ್ತವವಾಗಿ ಇದರಲ್ಲಿಯೆ ಮಗ್ನರಾಗಿರುವರು. ಮತ್ತು ಚಿತ್ತವನ್ನು

ಅತ್ತಿತ್ತ ಹರಿಬಿಟ್ಟು ಇಚ್ಛೆಗಳ ರಾಶಿಯನ್ನೇ ಕೂಡಿಹಾಕುವರು. ಸತ್ ಎಂದು ನೀವು ಕರೆಯುವ ಹೊಳಪುಳ್ಳ ವಸ್ತುವಿನ ಮೇಲೆ ಮೊದಲು ನಿಮ್ಮ ದೃಷ್ಟಿ ಬೀಳುತ್ತದೆ. ಈ ಹೊಳೆಯುವ ಪದಾರ್ಥವು ಮಾಯೆಯ ಹೊರತು ಬೇರೇನೂ ಅಲ್ಲ. ಜನರು ಇದರ ಬಗ್ಗೆಯೆ ದೊಡ್ಡ ದೊಡ್ಡ ಮಾತು ಗಳನ್ನಾಡುವರು. ಆದರೆ ನಿಜವಾಗಿ ಅದು ಸತ್ಯದ ಹಾಗು ಅಧ್ಯಾತ್ಮದ ವಲಯದಿಂದ ಬಹು ದೂರವಾಗಿದೆ. ಜನರು ತಮ್ಮ ಅವಸ್ಥೆಯನ್ನು ಎಷ್ಟು ಮೂಕಗೊಳಿಸಿರುವರೆಂದರೆ ಇದನ್ನು ಕೇಳಲು ಸಹ ಒಲ್ಲರು; ಅಥವಾ ಇದರ ಅನುಭವ ಪಡೆಯುವ ಪ್ರಯತ್ನವನ್ನೂ ಮಾಡಲಾರರು. ಯಾವುದರ ಆಚೆಗೆ ಬೆಳಕಾಗಲಿ, ಕತ್ತಲೆಯಾಗಲಿ ಯಾವುದೂ ಇಲ್ಲವೋ ಆ ಮೂಲವಸ್ತುವನ್ನು ಕಳೆದುಕೊಂಡು ಬಿಟ್ಟಿದ್ದಾರೆ. ನಾನು ನಮ್ಮ ಸಂಸ್ಥೆಯ ಸಂಕೇತಮುದ್ರೆಯಲ್ಲಿ ತೋರಿಸಿದ ವಸ್ತು ಇದೇ. ಮಾನವನ ಉನ್ನತಿಯ ಮೂಲಸ್ಥಿತಿ ಇದೇ ಆಗಿದೆ. ಇಲ್ಲಿಂದ ಕೆಳಗೆ ಬೀಳುವ ಸಂಭವವುಳಿಯುವುದಿಲ್ಲ. ತತ್ತ್ವಜ್ಞಾನ ಬಹು ಸೂಕ್ಷ್ಮವಾಗಿದೆ. ಎಲ್ಲಿ ಬೆಳಕು, ಕತ್ತಲೆ ಯಾವುದೂ ಇಲ್ಲವೋ ಆ ಅವಸ್ಥೆಯನ್ನು ಮಹಾತ್ಮರು 'ಸತ್ಯಪದ'ವೆಂದು ಕರೆದಿದ್ದಾರೆ. ಆದರೆ ಅವರ ಈ ವಿಚಾರ ಸರಿಯಲ್ಲ. ಆ ವಸ್ತು ಇದಕ್ಕಿಂತಲೂ ಆಚೆಗಿದೆ. ಇದು ಮೂಲದ ಕೇವಲ ಪ್ರತಿಬಿಂಬ ಅಥವಾ ಛಾಯೆ ಮಾತ್ರ. ನಿಜವಾಗಿ, ಸತ್ಯವು ಅದರ ನಂತರ ಇದೆ.

ಜನರಿಗೆ ಈ ಮಾತುಗಳನ್ನು ತಿಳಿದು ಆಶ್ಚರ್ಯವಾಗಬಹುದು. ಆದರೆ ಅಧ್ಯಾತ್ಮದಲ್ಲಿ ಸಾಕಷ್ಟು ಮುಂದುವರಿದವರಿಗಾಗಿ ಮತ್ತು ನಾನು ಉಲ್ಲೇಖಿಸುವ ಶಾಸ್ತ್ರದಲ್ಲಿ ಪರಿಣತಿಯುಳ್ಳವರಿಗಾಗಿ ಇದನ್ನು ಬರೆಯುತ್ತಿದ್ದೇನೆ. ಕೇವಲ ಅನುಭವವೇ ಇದನ್ನು ತೋರಿಸಿಕೊಡಬಲ್ಲುದು. ಇದು ಧಾರ್ಮಿಕ ಕಟ್ಟುನಿಟ್ಟುಗಳಲ್ಲಿ ದೊರೆಯಲಾರದು. ಇದರ ದಾರಿಯೆ ಬೇರೆ. ಈ ವಿದ್ಯೆಯು ಸ್ವಯಂ ಒಂದು ವಿಜ್ಞಾನವೇ ಆಗಿದೆ. ನಿಸರ್ಗವನ್ನು ಒಳಗಣ್ಣಿನಿಂದ ನೋಡುವ ಯೋಗ್ಯತೆಯನ್ನು ಸಂಪಾದಿಸುವ ವರೆಗೆ ಯಾರೂ ಇದರ ಜ್ಞಾನ ವನ್ನು ಪಡೆಯಲಾರರು. ಅವರ ನಿಲುಕು ಅದರ ಬಾಗಿಲಿನ ವರೆಗೆ ಕೂಡ ಹೋಗಲಾರದು. ತಿಳಿವಳಿಕೆಯಂತೂ ದೂರ ಉಳಿಯಿತು. ನಿಸರ್ಗದಲ್ಲಿ ನೋಡತಕ್ಕುದು ಇನ್ನೂ ಇದೆಯೆಂಬುದನ್ನು ತಿಳಿಯಲು ಮಾತ್ರ ಧರ್ಮವು

ಸಹಾಯಮಾಡಬಲ್ಲುದು. ಆದರೆ ರತ್ನಗಳನ್ನಾಯ್ದುಕೊಳ್ಳಲು ಸ್ವತಃ ಒಳಗೆ ಪ್ರವೇಶಿಸಬೇಕಾಗುವುದು. ನಿಜವೆಂದರೆ, ಸತ್ಯದ ಸರಳತೆ, ಪವಿತ್ರತೆ ಮತ್ತು ಮುಗ್ಧತೆ ಇವೇ ಅದಕ್ಕೆ ಆವರಣವಾಗಿವೆ. ಆಧ್ಯಾತ್ಮವಿದ್ಯೆಯ ಆರಂಭದ ವಿದ್ಯಾರ್ಥಿಗಳಿಗಾಗಿ ಈ ಪುಸ್ತಕವನ್ನು ಬರೆಯಲಾಗಿಲ್ಲ. ಇದು ಈ ಪ್ರವಾಹದಲ್ಲಿ ಸಾಕಷ್ಟು ಮುಂದುವರಿದವರಿಗಾಗಿ ಎಂಬುದನ್ನು ಗಮನಿಸಬೇಕು.

ಸೂರ್ಯೋದಯಕ್ಕಿಂತ ಮುಂಚೆ ಸಂಧ್ಯೆಯನ್ನು ಮುಗಿಸಬೇಕೆಂದು ಹೇಳಿದುದರ ಉದ್ದೇಶವಿಷ್ಟೆ : ಶರೀರದಿಂದ ಹೊರಗೆ ಹೋದ ಉಷ್ಣತೆ ಅಥವಾ ತೊಲಗಿ ಹೋದ ದುಷ್ಪರಿಣಾಮಗಳು ಬಿಸಿಲಿನ ಪ್ರಭಾವದಿಂದ ಮತ್ತೆ ಉಂಟಾಗಿ ನಾವು ಸಮಯದ ಲಾಭಪಡೆಯದಂತಾಗಬಾರದು. ಪ್ರತಿಯೊಂದು ಕೆಲಸಕ್ಕೂ ಒಂದು ವಿಶಿಷ್ಟ ಸ್ಥಳ ಅಗತ್ಯವೆಂಬ ಮಾತಿಗೆ ಮಹಾತ್ಮರು ಬಹಳ ಮಹತ್ತ್ವ ಕೊಟ್ಟಿದ್ದಾರೆ. ಏಕೆಂದರೆ, ಅಲ್ಲಿ ಹೋದ ಕೂಡಲೇ ಆಯಾ ಕೆಲಸಕ್ಕಾಗಿಯೆ ಮೀಸಲಾಗಿದ್ದ ವಿಚಾರಗಳು ನಮ್ಮಲ್ಲಿ ಸುಳಿಯಬೇಕು. ಈ ಮಾತನ್ನು ಪಾಶ್ಚಾತ್ಯ ನಾಗರಿಕತೆಯಾದರೂ ಸಿದ್ಧಮಾಡಿಕೊಟ್ಟಿದೆ. ಮನುಷ್ಯನಲ್ಲಿ ಬಲವಿದೆ. ಆ ಬಲವು, ಮೂಲ ವಸ್ತುವಿನೊಡನೆ ಸಂಬಂಧಪಟ್ಟ ನಿಲುಗಡೆಯಿಂದಾಗಿ ಲಭಿಸಿದೆ. ನಾವು ಯಾವುದಾದರೊಂದು ಕೆಲಸ ಮಾಡಬೇಕೆಂಬ ಸಂಕಲ್ಪ ಮಾಡಿದಾಗ ಅವೆರಡರ ನಡುವಿನ ಸೂತ್ರ ಅಥವಾ ಸೆಳತವು ಅಲ್ಲಿ ಒಂದು ಗಾಢ ಸಂಬಂಧವನ್ನು ಸ್ಥಾಪಿಸಿಕೊಳ್ಳುತ್ತದೆ. ಅರ್ಥಾತ್ ನಾವು ನಮ್ಮ ಸಂಕಲ್ಪದಂತೆ ಮೂಲದಿಂದ ಶಕ್ತಿಯನ್ನು ಎಳೆಯತೊಡಗುವೆವು. ಶಕ್ತಿಯನ್ನೆಳೆದು ಅದರ ಸಂಬಂಧವನ್ನು ಒಂದು ವಿಶಿಷ್ಟ ಸಮಯದೊಡನೆ ಕಲ್ಪಿಸಿ ಸಾತತ್ಯವನ್ನುಂಟುಮಾಡಿದಾಗ ಅದೇ ಸಮಯದಲ್ಲಿ ನಮ್ಮ ಕೆಲಸಗಳ ನೆನಪು ಬರುವುದು. ಆದುದರಿಂದ ಸಂಧ್ಯೆಗಾಗಿ ನಾವು ಒಂದು ಸಮಯವನ್ನು ಗೊತ್ತು ಪಡಿಸಿದಾಗ ನಮ್ಮ ವಿಚಾರವು ಆ ಕಡೆಗೆ ಹರಿಯತೊಡಗುವುದು. ಮತ್ತು ನಾವು ಒಂದಿಲ್ಲೊಂದು ರೀತಿಯಿಂದ ಅದರ ಸ್ಮರಣೆಯಲ್ಲಿ ತೊಡಗಿಬಿಡುವೆವು. ಈ ಕೆಲಸಕ್ಕಾಗಿ ನಿಯಮಿತವಾದ ಒಂದು ಸ್ಥಳದಲ್ಲಿ ಅಥವಾ ಕೋಣೆಯಲ್ಲಿ ಕುಳಿತು ನಾವು ಸಂಧ್ಯೋಪಾಸನೆ ಮಾಡುವೆವು. ನಮ್ಮ ವಿಚಾರದ ವಿದ್ಯುತ್ತನ್ನು ಬಹಳಷ್ಟು ಅದರಲ್ಲಿ ವ್ಯಯಿಸುವೆವು. ಇದರಿಂದ ಆ ಸ್ಥಳದಲ್ಲಿ ಪವಿತ್ರತೆಯ ಭಾವನೆಯುಂಟಾಗತೊಡಗುವುದು. ಆ ಸ್ಥಳವು

ಅದೇ ಪರಿಣಾಮಂಗಳನ್ನು ಹೊಂದುವುದಾದಕಾರಣ ನಮಗೆ ಆ ಕಾರ್ಯದಲ್ಲಿ ಸಹಾಯ ದೊರೆಯುವುದು. ಪವಿತ್ರತೆಯ ಈ ಪರಿಣಾಮವು ಕೇವಲ ಆ ಸ್ಥಳಕ್ಕಷ್ಟೇ ಸೀಮಿತವಾಗಿರುವುದಿಲ್ಲ. ಅದು ಕ್ರಮೇಣ ಹರಡತೊಡಗುವುದು. ಅದನ್ನು ಶಕ್ಯವಿದ್ದಷ್ಟು ಹರಡಿಸುವುದು ನಮ್ಮ ಸಾಮರ್ಥ್ಯವನ್ನವಲಂಬಿಸಿದೆ. ಎಷ್ಟೋ ವರ್ಷಗಳು ಗತಿಸಿದರೂ ಅನೇಕ ಸ್ಥಳಗಳಲ್ಲಿ ಆ ಪರಿಣಾಮವು ಇದುವರೆಗೆ ಪೂರ್ಣವಾಗಿ ಅಳಿಸಿ ಹೋಗಿಲ್ಲವೆಂಬುದಕ್ಕೆ ಪೂಜಾಮಂದಿರಗಳು ಸಾಕ್ಷಿಯಾಗಿವೆ. ಅಲ್ಲಿಗೆ ಹೋಗುವವರೂ ದರ್ಶನ ಪಡೆಯುವರೂ ಸಹ ಪ್ರಭಾವಿತರಾಗುತ್ತಾರೆ. ಇಷ್ಟೇ ಅಲ್ಲ, ಅಲ್ಲಿ ಚಲಿಸುವ ಗಾಳಿಯೂ ಅದರ ಸೌರಭವನ್ನು ಹೊಂದಿ ತಾನು ಮುಟ್ಟುವ ಎಲ್ಲ ಸ್ತರಗಳಿಗೂ ಅದನ್ನು ತಲುಪಿಸುವುದು. ಪ್ರತಿಯೊಂದು ಸ್ತರದಲ್ಲಿಯೂ ಆಕುಂಚನ ಪ್ರಸರಣಗಳಾಗುತ್ತಿರುತ್ತವೆ. ಈ ಉಪಾಯದಿಂದ ಒಳಗೆ ಪ್ರವೇಶಿಸಿದ ಆ ವಸ್ತುವು ಬೆಳೆಯುವುದಲ್ಲದೆ ತನ್ನ ಪ್ರಭಾವವನ್ನು ಹಬ್ಬಿಸುತ್ತ ಹೋಗುವುದು.

ಈಗ ಆಸನದ ಬಗೆಗೆ ಕೇಳಿರಿ. ಇದು ಯೋಗದ ಅಂಗಗಳಲ್ಲಿ ಒಂದು. ಮಹಾತ್ಮರು ಇದಕ್ಕೆ ಬಹಳ ಮಹತ್ವ ಕೊಟ್ಟಿದ್ದಾರೆ. ಇದು ಯೋಗದ ಆರಂಭದ ಮೆಟ್ಟಿಲು. ಇದರಡಿಯಲ್ಲಿಯ ರಹಸ್ಯವನ್ನು ಇದುವರೆಗೂ ಪ್ರಕಟಿಸಲಾಗಿಲ್ಲ. ಸಮಯ ಬಂದಾಗ ಪ್ರತಿಯೊಂದು ಮಾತೂ ಬಯಲಿಗೆ ಬರುವುದು; ಪ್ರತಿಯೊಂದು ವಸ್ತುವೂ ಬೆಳಕನ್ನು ಕಾಣುವುದು. ಸೃಷ್ಟಿಯ ಆರಂಭದಲ್ಲಿ ಪ್ರತಿಯೊಂದು ಪದಾರ್ಥವೂ ಹೆಚ್ಚು ಕಡಮೆ ಸಂಪೂರ್ಣ ನಿಶ್ಚಲ ಸ್ಥಿತಿಯಲ್ಲಿದ್ದು ತನ್ನ ಮೂಲದಲ್ಲಿ ಸಮಾವೇಶ ಹೊಂದಿದ್ದಿತು. ಪದಾರ್ಥಗಳು ತಮ್ಮದೆಂಬ ಸ್ಥಿತಿಯನ್ನು ಕಳೆದುಕೊಂಡಿದ್ದರೂ ಅವುಗಳಲ್ಲಿ ತಮ್ಮ ಪರಿಣಾಮಂಗಳು ಇನ್ನೂ ಉಳಿದಿದ್ದುವು. ಏಕೆಂದರೆ, ಮೂಲತತ್ವದ ಪ್ರತಿಚ್ಛಾಯೆ ಅವುಗಳ ಮೇಲೆ ಸಾಕಷ್ಟು ಸಮಯದ ವರೆಗೆ - ಎಂದರೆ ಪ್ರಳಯಕಾಲದ ವರೆಗೆ ಇದ್ದಿತು. ಇದು ಅವುಗಳಿಗೆ ತಮ್ಮ ಅಸ್ತಿತ್ವದ ಎಲ್ಲ ಕಾಲದಲ್ಲಿಯೂ ಸಂಸ್ಕಾರಗಳ ಪರಿಣಾಮವನ್ನು ಕಾಯ್ದಿಟ್ಟುಕೊಳ್ಳುವುದರಲ್ಲಿ ಸಹಾಯ ಮಾಡಿತು. ಈ ಪರಿಣಾಮವನ್ನು ಅವು ಎಲ್ಲಿಯ ವರೆಗೆ ಆತ್ಮಸಾತ್ ಮಾಡಿಕೊಂಡುವೆಂಬುದು ಮನುಷ್ಯನ ತರ್ಕಕ್ಕೆ ಮೀರಿದ ಮಾತು. ಪ್ರಾಯಃ

ಸೃಷ್ಟಿಯ ಆರಂಭದಿಂದ ಹೀಗಾಗುತ್ತ ಬಂದಿರಬಹುದು. ಈ ಅವಧಿಯಲ್ಲಿ ಅವು ತಮ್ಮ ಸ್ಥೂಲತೆಯನ್ನು ಕಳೆದುಕೊಂಡಿದ್ದುವೆಂಬುದು ಮಾತ್ರ ನಿಜ. ಆದರೆ ಪರಿಣಾಮವಿದ್ದೇ ಇದ್ದಿತು. ಆ ಪರಿಣಾಮದೊಂದಿಗೇ ಅವು ಅದರಲ್ಲಿ ಸಮಾವಿಷ್ಟವಾದುವು. ಅವು ಹೀರಿಕೊಂಡ ಆ ಪರಿಣಾಮವಾವುದು ? ಅದು ಮೂಲ ಮಹಾಶಕ್ತಿಯ ಆಘಾತದಿಂದುಂಟಾದ ಚಲನವೆ ಆಗಿದ್ದಿತು. ಈ ಚಲನವು ಪರಿಣಾಮದಿಂದ ತುಂಬಿ ತುಳುಕುತ್ತಿದ್ದಿತಾದ ಕಾರಣ ಅದರಲ್ಲಿ ಸಾವಕಾಶವಾಗಿ ಗತಿಯನ್ನುಂಟು ಮಾಡಿತು. ಕೇವಲ ಅನುಭವದಿಂದ ಮಾತ್ರ ಗೋಚರವಾಗುವ ಈ ಗತಿಯು ಸ್ವಾಭಾವಿಕವಾಗಿಯೆ ಆ ಮೂಲಶಕ್ತಿಯಲ್ಲಿ ಒಂದಿಲ್ಲೊಂದು ರೂಪದಿಂದ ಉಳಿದುಕೊಂಡಿತು. ಈ ರೀತಿ ಅನಂತಕಾಲದ ವರೆಗೆ ಒಳಗೊಳಗೇ ಕುದಿಯತೊಡಗಿತು. ಇದನ್ನು ಕೇಂದ್ರದಲ್ಲಿಯ ಗುಪ್ತಚಲನವೆಂದು ಕರೆಯಲಾಗಿದೆ. ಇದು ಸತತವಾಗಿ ನಡೆದು ಮತ್ತೆ ಸೃಷ್ಟಿಯ ಕಾಲ ಬಂದಿತು. ಹೀಗಾಗಲು ಕಾರಣವೇನು ? ಅದರ ಅವಶ್ಯಕತೆ ಏಕೆ ಉಂಟಾಯಿತು ? ಕೇವಲ ಶಕ್ತಿಯಾಗಿದ್ದ ಆ ಗುಪ್ತ ಚಲನೆಗಳು ಹೊರ ಹೊಮ್ಮಲು ಕೊರಕಲನ್ನು ನಿರ್ಮಿಸಿದುವು. ಅದರಿಂದ ಆ ಶಕ್ತಿಯು ಹೊಸ ಆವೇಶದಿಂದ ಪ್ರವಹಿಸ ತೊಡಗಿತು. ಬರಬರುತ್ತ ಸೃಷ್ಟಿಯು ಪುನಃ ನಿರ್ಮಾಣವಾಯಿತು; ಮಾನವನು ರೂಪುಗೊಂಡನು. ಅವನಿಗೆ ತನ್ನ ಮೂಲವನ್ನು ಸೇರಬೇಕೆಂಬ ಆಕಾಂಕ್ಷೆಯು ಬಲವಾಗತೊಡಗಿತು. ಏಕೆಂದರೆ ಆತನಲ್ಲಿದ್ದ ಮೂಲದ ಸತ್ವಾಂಶವು ಪ್ರಬಲವಾಗಿದ್ದಿತಾದ ಕಾರಣ ಆತನನ್ನು ತನ್ನ ಕಡೆಗೆ ಆಕರ್ಷಿಸತೊಡಗಿತು. ಯಾವ ವಸ್ತುವು ಚಲನಗೊಂಡು ಸೃಷ್ಟಿಗೆ ಕಾರಣವಾಯಿತೋ ಅದು ಮನುಷ್ಯನಲ್ಲಿಯೂ ಕಾಣಿಸಿಕೊಂಡಿತು. ಅದರ ಆಧಾರವೇ ಗತಿಶೀಲವಾಗಿದ್ದಿತಾದುದರಿಂದ ಅದು ಸ್ಥಿರಸ್ಥಿತಿಗೆ ಹೋಗಬೇಕೆಂಬ ವಿಚಾರ ಬಂದಕೂಡಲೇ ತನ್ನಲ್ಲಿದ್ದ ಚಲನವನ್ನು ಆದಷ್ಟು ಮಟ್ಟಿಗೆ ಗುಪ್ತ ಸ್ಥಿತಿಗೆ ತರುವುದು ಅವಶ್ಯಕವಾಯಿತು. ಆತನು ಉಪಾಯಗಳನ್ನು ಶೋಧಿಸ ತೊಡಗಿದನು. ಗುಪ್ತ ಚಲನವು ಮೂಲಕ್ಕೆ ಹೊಂದಿಕೊಂಡಿದ್ದರೂ ಮೂಲ ದೊಂದಿಗೆ ಹೋಲಿಸಿದಾಗ ಒಂದು ರೀತಿಯಿಂದ ಹೇಗೆ ಸ್ಥೂಲವಾಗಿ ಕಾಣುವುದೋ ಅಂಥದೇ ಯಾವುದಾದರೊಂದು ಸ್ಥೂಲವಸ್ತುವನ್ನು ಉದ್ದಿಷ್ಟ ಗುರಿ ಮುಟ್ಟಲು ತೆಗೆದುಕೊಳ್ಳಬೇಕೆಂಬುದನ್ನು ಕಂಡುಕೊಂಡನು. ಆ ವಿಚಾರ

ಬಂದ ಕೂಡಲೇ, ಪ್ರಳಯಕಾಲದಲ್ಲಿದ್ದಂತೆ ಒಂದು ತರದ ಆಕುಂಚನ ಅಥವಾ ಸಂಹಾರವನ್ನು ತನ್ನಲ್ಲಿ ತಂದುಕೊಳ್ಳಬೇಕೆಂಬುದು ಆತನಿಗೆ ತಿಳಿಯಿತು. ಆತ್ಮವು ವಿಶ್ವದಾದ್ಯಂತ ವ್ಯಾಪಿಸಿದಂತೆ ಮನುಷ್ಯನಲ್ಲಿಯೂ ವ್ಯಾಪಿಸಿದೆ. ಆಕುಂಚನವು ಆರಂಭವಾದಾಗ ಪ್ರಳಯದ ಸ್ಥಿತಿಯುಂಟಾಗುವುದು. ಈಗ ಮನುಷ್ಯನಲ್ಲಿಯೂ ಇಂಥ ಆಕುಂಚನದ ಸ್ಥಿತಿಯುಂಟಾದರೆ ವೈಯಕ್ತಿಕ ಪ್ರಳಯವು ಆರಂಭವಾಗುವುದು. ಅರ್ಥಾತ್ ಸ್ಥೂಲತೆಯ ಸ್ಥಿತಿಯಿಂದ ಅವನು ಮೂಲಸ್ಥಿತಿಯಲ್ಲಿ ಜಿಗಿಯತೊಡಗುವನು. ಮನುಷ್ಯನಲ್ಲಿ ಈ ಸಂಕೋಚ ಅಥವಾ ಸಂಹಾರದ ಸ್ಥಿತಿ ಹೇಗಿರುವುದು? ಪಸರಿಸಿದ ತನ್ನ ಶರೀರವನ್ನು ಹೇಗಾದರೂ ಮುದುಡಿಕೊಳ್ಳುವುದೇ ಇಂಥ ಸಂಹಾರವಾಗಬಲ್ಲುದು. ಆಕುಂಚನವು ಯಾವಾಗಲೂ ಕೆಳಗಿನಿಂದ ಪ್ರಾರಂಭವಾಗಿ ಕ್ರಮೇಣ ಮೇಲಕ್ಕೆ ಹಬ್ಬುವುದು. ಏಕೆಂದರೆ ಅದಕ್ಕೆ ಮೇಲುಗಡೆ ಹೋಗಬೇಕಾಗಿದೆ. ಮನುಷ್ಯನಾದರೂ ಕೆಳಗಿನಿಂದ ತನ್ನ ಸಂಕೋಚವನ್ನಾರಂಭಿಸಿದರೆ ಆತನ ಸ್ಥಿತಿಯೂ ಅದೇ ಆಗುವುದು. ಎಂದರೆ, ತನ್ನ ಕಾಲುಗಳನ್ನೂ ಇತರ ಅವಯವಗಳನ್ನೂ ಒಂದು ಅವಸ್ಥೆಯಲ್ಲಿರಿಸಿ ಶರೀರವನ್ನು ನಿಶ್ಚಲಗೊಳಿಸಬೇಕು. ಇದನ್ನು ಆತನು ಹೇಗಾದರೂ ಮಾಡಬಹುದು; ಆದರೆ ಕೊನೆಗೆ ಆಗುವುದು ಆಸನದ ಆಕೃತಿಯೆ. ಹೀಗಾಗುವುದು ಆವಶ್ಯಕ. ಏಕೆಂದರೆ ಅದು ಆತ್ಮವನ್ನು ತಲುಪಲು ದಾರಿ ಮಾಡಿಕೊಡುವುದು. ಆಸನಪದ್ಧತಿಯು ಯಾವಾಗಲೂ ಒಂದೇ ಆಗಿರಬೇಕು. ಕಾರಣವಿಷ್ಟೆ: ಮೂಲವನ್ನು ತಲುಪಬೇಕೆಂಬ ಅಪೇಕ್ಷೆಯುಂಟಾದ ಕೂಡಲೇ ಈ ವಿಶಿಷ್ಟ ಉದ್ದೇಶವನ್ನು ಸಾಧಿಸಲು ಆತನು ಪ್ರಾರಂಭದಲ್ಲಿ ಕೈಕೊಂಡ ಉಪಾಯವು ಆತನನ್ನು ಮೂಲದೊಂದಿಗೆ ಜೋಡಿಸಿತು. ಆದುದರಿಂದ ಮೂಲದೊಂದಿಗೆ ಸಂಬಂಧವನ್ನು ಪ್ರಸ್ಥಾಪಿಸುವ ಆಸನವೇ ಆತನಿಗೆ ಹೆಚ್ಚು ಸಹಾಯಕಾರಿಯಾಗಬಲ್ಲುದು. ಅದರಿಂದ ಪ್ರಾರಂಭಿಕ ಸಂಸ್ಕಾರದ ಸಮಸ್ಯೆಯೂ ಪರಿಹಾರವಾಗುವುದು.

ಒಂದೇ ಆಸನದಲ್ಲಿ ನೇರವಾಗಿ ಕುಳಿತುಕೊಂಡು ಸಂಧ್ಯೆಯನ್ನಾಚರಿಸುವುದು ಬಹಳ ಲಾಭದಾಯಕವೆಂದು ತೀರ ಪ್ರಾಚೀನ ಕಾಲದಿಂದಲೂ ತಿಳಿಯಲಾಗಿದೆ. ಕಾರಣವೇನೆಂದರೆ, ಆ ಅವಸ್ಥೆಯಲ್ಲಿ ದೈವೀಕೃಪೆಯ ಶಕ್ತಿಯುತ ಧಾರೆಗಳು ಅಭ್ಯಾಸಿಯ ಮೇಲೆ ನೇರವಾಗಿ ಹರಿದು ಬರುವುವು. ಒಂದು

ವೇಳೆ ಜಿಜ್ಞಾಸುವು ಅಂಕ–ಡೊಂಕು ಸ್ಥಿತಿಯಲ್ಲಿ ಕುಳಿತುದಾದರೆ, ಅಥವಾ ಮೇಲಿಂದ ಮೇಲೆ ಆಸನವನ್ನು ಬದಲಾಯಿಸುತ್ತ ಹೋದರೆ ಧಾರೆಗಳ ನೇರ-ವಾದ ಅವತರಣದಲ್ಲಿ ತಡೆಯುಂಟಾಗಿ ಆತನಿಗೆ ಅಷ್ಟು ಲಾಭವಾಗುವುದಿಲ್ಲ. ಆದುದರಿಂದ ಆಧ್ಯಾತ್ಮಿಕ ಲಾಭ–ಆನಂದಗಳನ್ನು ಆದಷ್ಟು ಹೆಚ್ಚು ಪ್ರಮಾಣ ದಲ್ಲಿ ಪಡೆಯಬೇಕೆನ್ನುವವರು ಸರಳವಾಗಿ ಸುಖಾಸನದಲ್ಲಿ ಕುಳಿತುಕೊಳ್ಳಬೇಕು. ಇಲ್ಲದಿದ್ದರೆ ಹೆಚ್ಚಿನ ಲಾಭದಿಂದ ವಂಚಿತರಾಗಬೇಕಾಗುವುದು. ಆಸನದಲ್ಲಿ ಸರಳವಾಗಿ ಕತ್ತೆತ್ತಿ ಕೂಡುವುದರಿಂದ ಅಹಂಕಾರದ ಸುಳುವು ತೋರುವುದೆಂದು ಕೆಲವರು ಭಾವಿಸಬಹುದು, ಆದರೆ ಹಾಗೇನೂ ಅಲ್ಲ. ತತ್ತ್ವತಃ ಸೇವಕನು ಒಡೆಯನ ಮುಂದೆ ಒಬ್ಬ ಸೈನಿಕನು ತನ್ನ ಮೇಲಧಿಕಾರಿಯೆದುರು ಪರೇಡಿನಲ್ಲಿ ಕಾಣಿಸಿಕೊಳ್ಳುವಂತೆ ಇರತಕ್ಕದ್ದು. ಅಧಿಕಾರಿಯು ಬರುತ್ತಲೇ 'ಸಾವಧಾನ' ವೆಂಬ ಆಜ್ಞೆ ಬರುವುದು. ಕೂಡಲೇ ಸೈನಿಕನು ತನ್ನ ಎಲ್ಲ ಅವಯವಗಳನ್ನೂ ನೇರ್ಪಡಿಸಿಕೊಂಡು ಶರೀರವನ್ನು ಸಮಸ್ಥಿತಿಯಲ್ಲಿ ಅಚಲವಾಗಿರಿಸಿ ಅಧಿಕಾರಿಯ ಕಡೆ ಏಕಾಗ್ರತೆಯಿಂದ ನೋಡಬೇಕಾಗುವುದು. ಇದರಿಂದ ಆತನ ಶರೀರದ ದಕ್ಷತೆ, ಉತ್ಸಾಹ ಮತ್ತು ಆರೋಗ್ಯ ಮುಂತಾದುವು ಸೂಚಿತವಾಗುವುವು. ಭಗವಂತನ ಮುಂದೆ ಭಕ್ತನದೂ ಇದೇ ಕರ್ತವ್ಯವಾಗಿದೆ.

ಪವಿತ್ರತೆಯ ಬಗೆಗೆ ವಿಶೇಷತಃ ಹಿಂದುಗಳಲ್ಲಿ ಬಹಳ ಉನ್ನತ ಆದರ್ಶ ವನ್ನಿಡಲಾಗಿದೆ. ಆದರೆ ಅಧಃಪತನಹೊಂದಿದ ಇಂದಿನ ರೂಪದಲ್ಲಿ ಅದು ಕೇವಲ ವಿಚಾರದಲ್ಲಷ್ಟೇ ಉಳಿದುಕೊಂಡಿದೆ. ನಿಯಮಗಳೆಲ್ಲ ಮರೆತು ಹೋದುವು; ಕೇವಲ ಸ್ನಾನ ಮಾಡುವುದೊಂದೇ ನೆನಪಿನಲ್ಲುಳಿಯಿತು. ಈ ಪವಿತ್ರತೆಯ ತಳಹದಿ ಹೀಗಿದೆ : ನಾವು ತಲುಪಬೇಕಾದ ಅವಿನಾಶಿ ತತ್ತ್ವವು ನಿಷ್ಕಳಂಕವೂ ಶುದ್ಧವೂ ಆಗಿದ್ದು ಅದರಲ್ಲಿ ಪವಿತ್ರತೆ ತಾನೇತಾನಾಗಿದೆ. ಇಂತು ನಾವು ಪವಿತ್ರತೆಯ ಆದರ್ಶವನ್ನಿರಿಸಿಕೊಂಡೆವು. ಅದೂ ಎಂಥ ಪವಿತ್ರತೆ ? ಮಲ, ವಿಕ್ಷೇಪ ಮತ್ತು ಆವರಣ ರಹಿತವಾದಂಥದು ! ನಮ್ಮ ಅಸ್ತಿತ್ವದಲ್ಲಾದರೋ ಈ ಮೂರೂ ವಿಕಾರಗಳಿವೆ. ಪವಿತ್ರತೆಯಿದ್ದಲ್ಲಿ ಇವು ಇರಲಾರವು. ನಮ್ಮ ವಿಚಾರ ಇಂಥ ಉನ್ನತ ಮಟ್ಟದ ಪವಿತ್ರತೆಯ ಕಡೆಗೆ ಹರಿಯಿತು. ಆಗ ನಾವು ನಮ್ಮಲ್ಲಿದ್ದ ಬಾಹ್ಯವಸ್ತುಗಳಿಂದ ಆದರ್ಶದ

ಅನುಕರಣವನ್ನಾರಂಭಿಸಿದೆವು. ಶರೀರವನ್ನು ಉಜ್ಜಿ ಶುದ್ಧಗೊಳಿಸತೊಡಗಿದೆವು. ಅಶುದ್ಧಸ್ಥಾನಗಳನ್ನು ಶುದ್ಧವಾಗಿರಿಸಲು ವಿಶೇಷ ಲಕ್ಷವಹಿಸಿದೆವು. ಆಗ ಏನಾಯಿತು ? ಬಾಹ್ಯ ಕ್ರಿಯೆಗಳಿಂದ ನಾವು ಮಾಡಹತ್ತಿದ ಪವಿತ್ರತೆಯು ಅನುಕರಣವು ಮನಸ್ಸಿನ ಮೇಲೆ ಪರಿಣಾಮ ಬೀರತೊಡಗಿತು. ಕ್ರಮೇಣ ಅದರಲ್ಲಿಯೂ ಶುದ್ಧತೆಯು ಸಂಚಾರವಾಯಿತು. ಹೀಗೆ ಬಹುಕಾಲ ನಡೆಯಿತು. ಜೊತೆಗೆ ನಮ್ಮ ದೃಷ್ಟಿಯಲ್ಲಿ ಆದರ್ಶವೂ ಸತತವಾಗಿ ಉಳಿದು ಈ ಪವಿತ್ರತೆಯನ್ನು ಹೆಚ್ಚಿಸಿತು. ಮೊದಲನೆಯದಾಗಿ, ನಮ್ಮ ಕರ್ಮಗಳು ಮನಶ್ಶುದ್ಧಿಯನ್ನುಂಟುಮಾಡುವುದರಲ್ಲಿ ತತ್ಪರವಾದುವು. ಎರಡನೆಯದಾಗಿ, ಗುರಿಯು ಬಂಗಾರಕ್ಕೆ ಸುಗಂಧ ಬೆರೆಸಿದಂತೆ ಮಾಡಿತು. ಕೇಳುವುದೇನು ? ಪವಿತ್ರತೆ ಬೆಳೆಯಿತು; ಮನಶ್ಶುದ್ಧಿಯಾಯಿತು. ಒಳ್ಳೆಯ ವಿಚಾರಗಳು ಉದಿಸತೊಡಗಿದುವು. ಇವೆಲ್ಲ ನಮ್ಮ ಮುಖ್ಯ ಗುರಿಯ ಸಾಧನೆಯಲ್ಲಿ ಸಹಾಯಕವಾದುವು. ಹೀಗೆ ನಮಗೆ ಇಬ್ಬಗೆಯ ಲಾಭವಾಯಿತು. ಆಂತರಿಕ ಓಡಾಟವಂತೂ ನಡೆದೇ ಇದ್ದಿತು. ಹೊರಗಿನ ಓಡಾಟವೂ ಈ ಕೆಲಸದಲ್ಲಿ ಸಹಾಯಮಾಡಿತು. ಗುರಿಯನ್ನು ಮುಟ್ಟುವುದರಲ್ಲಿ ಇವೆರಡೂ ತುಂಬ ನೆರವು ನೀಡಿದವು. ಇವೆರಡೂ ಸಾಮರಸ್ಯ ಪಡೆದಾಗ ಅದೇ ಒಂದು ಶಕ್ತಿಯಾಗಿ ನಮ್ಮ ಮಾರ್ಗವನ್ನು ಮತ್ತಷ್ಟು ಸುಗಮಗೊಳಿಸಿದುವು. ಆಗ ನಾವು ಎರಡೂ ಪಕ್ಕಗಳಿಂದ ಹಾರತೊಡಗಿದೆವು. ಪ್ರತಿಯೊಂದು ವಸ್ತುವೂ ತಾನಾಗಿಯೆ ಸಿದ್ಧಿಸತೊಡಗಿತು. ನೋಡಿ, ಈ ಪವಿತ್ರತೆಯು ನಮ್ಮ ಧ್ಯೇಯ ಸಾಧನೆಯಲ್ಲಿ ಎಷ್ಟೊಂದು ನೆರವಾಯಿತು !

ನಮ್ಮ ನಿಯಮಗಳಲ್ಲಿ ಸಂಧ್ಯೆ ಹಾಗೂ ಉಪಾಸನೆ ಮೊಟ್ಟ ಮೊದಲು ಬಂದಿವೆ. ಕಾರಣವೇನೆಂದರೆ, ಅವನ್ನಾಚರಿಸುವುದರಿಂದ ನಾವು ಯಾವ ಶಕ್ತಿಯನ್ನು ಒಂದಿಲ್ಲೊಂದು ದಿನ ಸಹಜವಾಗಿ ಪಡೆಯಬೇಕಾಗಿದೆಯೋ ಅದನ್ನು ಆರಂಭದಿಂದಲೇ ಪಡೆಯತೊಡಗುವೆವು. ಈ ಬಗ್ಗೆ ಇನ್ನೊಂದು ಮಾತು : ಮೂಲದಿಂದ ಧಾರೆಗಳು ಪ್ರವಹಿಸತೊಡಗಿದಾಗ ಅವುಗಳ ಮಂಥನ-ಪ್ರತಿಮಂಥನವು ಸ್ಥೂಲತೆಯ ಅವಸ್ಥೆಯನ್ನು ಹುಟ್ಟಿಸಿತು. ಅದರಿಂದ ಅಣು, ಪರಮಾಣು ಹಾಗು ವಿವಿಧ ಆಕಾರಗಳ ಕಣಗಳು ಸಿದ್ಧವಾಗಿ ತಮ್ಮ ತಮ್ಮ ರೂಪದಲ್ಲಿ ಪ್ರಕಟವಾದುವು. ಯಾವುದನ್ನು ನಮ್ಮ ಜೀವನವು ಅವಲಂಬಿಸಿ

ದೆಯೋ ಆ ಉಷ್ಣತೆಯೂ ಅವುಗಳಲ್ಲಿ ಪ್ರವಹಿಸುತ್ತಿದ್ದಿತು. ಅದರಿಂದ ನಾನಾ ರೂಪಗಳು ವ್ಯಕ್ತವಾದವು. ವಿವಿಧ ಕ್ರಿಯೆಗಳು ನಡೆಯತೊಡಗಿದುವು. ಉಷ್ಣತೆ ಉಳಿಯಿತು; ಇದುವರೆಗೂ ಉಳಿದುಕೊಂಡೇ ಇದೆ. ಆದರೆ ಅದರ ಪ್ರವಾಹ ಮಾತ್ರ ಕೆಳಮುಖವಾಗಿದೆ. ಈ 'ಕೆಳಗೆ' 'ಮೇಲೆ'ಗಳ ವಿಚಾರವೇನೆಂದು ಜನರು ಪ್ರಶ್ನಿಸಬಹುದು. ನಾವು ಉಚ್ಚವಂಟ್ಟದ ವಸ್ತುವನ್ನು ಕುರಿತು ಚಿಂತಿಸುವಾಗ ಕೆಳಮಟ್ಟದ ಪದಾರ್ಥವೂ ನಮ್ಮ ವಿಚಾರದಲ್ಲಿ ನೆಲೆಸುವುದು. ಅಲ್ಲದೆ, ನಾವು ಉಚ್ಚ ಅಥವಾ ಶ್ರೇಷ್ಠ ವಸ್ತುವಿನಿಂದ ಬಂದಿರುವೆವೆಂದ ಮೇಲೆ ಅದರ ನಂತರದ ವಸ್ತುವು ಸ್ವಾಭಾವಿಕವಾಗಿಯೆ ಕೀಳು ಅಥವಾ ಕಡಮೆ ದರ್ಜೆಯದೆನಿಸುವುದು. ಆದುದರಿಂದಲೇ ನಾವು ಅದನ್ನು ಅತ್ಯುಚ್ಚ ಅಥವಾ ಸರ್ವಶ್ರೇಷ್ಠವೆಂದು ಭಾವಿಸುತ್ತೇವೆ. ಆಗ 'ಮೇಲೆ' 'ಕೆಳಗೆ' ಇವುಗಳ ಕಲ್ಪ-ನೆಯು ನಮ್ಮ ಮನ್ಸಿನಲ್ಲಿ ಕೂಡಲೇ ಪ್ರವೇಶಿಸುವುದು. ಕೆಳಗಿನ ಎಳೆತವು ಕಡಮೆಯಾದಾಗ, ಪರಮಾಣುಗಳ ಮೇಲೆ ಸತತವಾಗಿ ಉಷ್ಣತೆಯನ್ನು ಬೀರುತ್ತಿರುವ ವಸ್ತುವೇ ಅವನ್ನು ಮೇಲುಗಡೆ ತಿರುಗಿಸಲು ಸಹಾಯ ಮಾಡುವುದು. ಅರ್ಥಾತ್ ಎಲ್ಲಿಂದ ಈ ವಸ್ತುಗಳು ಪ್ರಕಟವಾಗುವುವೋ ಮತ್ತು ಯಾವ ಚಲನದಿಂದ ಇವುಗಳಲ್ಲಿ ಕಾವು ಹುಟ್ಟಿಕೊಂಡಿತೋ ಅದು ಇವುಗಳನ್ನು ಹಗುರುಮಾಡುವುದು. ಹಗುರಾದ ಪದಾರ್ಥವು ಯಾವಾಗಲೂ ಮೇಲಕ್ಕೇಳುವುದು ಅದರ ಗುಣಧರ್ಮವಾಗಿದೆ. ಅದರರ್ಥವಿಷ್ಟೆ: ಅದು ತನ್ನ ಮೂಲದ ಕಡೆಗೆ ಹೋಗಬಯಸುವುದು. ಈ ಪ್ರಕಾರ, ಧಾರೆಗಳ ಪರಿಣಾಮದಿಂದ ಗತಿಶೀಲತೆಯನ್ನು ಪಡೆದ ಎಲ್ಲ ಪದಾರ್ಥಗಳೂ ತಮ್ಮ ಮೂಲವನ್ನು ಸೇರಬಯಸುವುದು ಸ್ವಾಭಾವಿಕ. ಮನುಷ್ಯನಲ್ಲಿ ಈ ಪ್ರವೃತ್ತಿಯು ಹೆಚ್ಚು ಪ್ರಮಾಣದಲ್ಲಿದೆ. ಕೆಳಗಿನ ಹಗ್ಗ ಹರಿದಾಗ ಅರ್ಥಾತ್ ಅಧೋಮುಖ ಪ್ರವೃತ್ತಿಯು ನಿಂತಾಗ ತನ್ನ ಮೂಲವನ್ನು ಸೇರಬೇಕೆಂಬ ಅಭಿಲಾಷೆಯುಂಟಾಗುವುದು ಸಹಜವೆ. ಆದುದರಿಂದಲೇ ಸಂಧ್ಯೆ ಮತ್ತು ಉಪಾಸನೆಯ ಕಡೆಗೆ ಆತನ ಮನಸ್ಸು ಹರಿಯತೊಡಗುವುದು.

ಈ ಉಷ್ಣತೆಯಲ್ಲಿ ಹಾಗು ಸೂರ್ಯನ ಪರಿಣಾಮದಿಂದ ಉಂಟಾದ ಉಷ್ಣತೆಯಲ್ಲಿ ಬಹಳ ಅಂತರವಿದೆ. ಈ ಉಷ್ಣತೆಯು ಮೂಲದಿಂದಲೇ ಹುಟ್ಟುವುದು. ಆದಕಾರಣ ಅದರಲ್ಲಿ ಭೌತಿಕತೆ ಇರುವುದಿಲ್ಲ. ಸೂರ್ಯನ

ಉಷ್ಣತೆಯಾದರೋ ಪದಾರ್ಥದಿಂದ ಹುಟ್ಟುವುದಾದ ಕಾರಣ ಅದರಲ್ಲಿ ಭೌತಿಕತೆಯಿರುವುದಲ್ಲದೆ ಇದಕ್ಕಿಂತ ಸ್ಥೂಲವಾಗಿರುವುದು. ನನ್ನ ಅಭಿಪ್ರಾಯ ದಲ್ಲಿ ಮೊದಲಿನದನ್ನು ಶಕ್ತಿಯೆಂದು ಕರೆದರೆ ಹೆಚ್ಚು ಸಮಂಜಸವಾದೀತು. ಶಕ್ತಿಯಲ್ಲಿ ಉಷ್ಣತೆ ಗುಪ್ತವಾಗಿರುವುದು. ಸೂರ್ಯನಲ್ಲಿ ಅದು ಪ್ರಕಟ-ರೂಪದಲ್ಲಿದೆ. ಎರಡೂ ಉಷ್ಣತೆಯೆನಿಸಿದರೂ ಅವುಗಳಲ್ಲಿ ಭೂಮಿ-ಆಕಾಶಗಳ ಅಂತರವಿದೆ. ಸೂರ್ಯನ ಪರಿಣಾಮದ ಉಷ್ಣತೆಯಲ್ಲಿ ಕೇವಲ ಸೆಕೆಯಿದೆ; ಮೂಲ ಉಷ್ಣತೆಯಾದರೋ ಜೀವನವನ್ನು ಪೋಷಿಸುವಂಥದು, ವರ್ಧಿಸು-ವಂಥದು. ಈ ಸೂಕ್ಷ್ಮ ಸಂಗತಿಗಳನ್ನು ತಿಳಿಸಲು ಸರಿಯಾದ ಸಾಧನ ವಿಲ್ಲದಿರುವುದು ಶೋಚನೀಯವೇ ಸರಿ. ಸಾಧ್ಯವಾದ ಮಟ್ಟಿಗೆ ವಿಚಾರಗಳನ್ನು ಶಬ್ದಗಳಲ್ಲಿ ಅಭಿವ್ಯಕ್ತಗೊಳಿಸಲಾಗಿದೆ. ಆದರೆ ಇವೆರಡೂ ಉಷ್ಣತೆಗಳ ಭೇದವನ್ನು ಪ್ರತ್ಯಕ್ಷ ಅನುಭವದಿಂದಲೇ ಅರಿಯಲು ಸಾಧ್ಯ.

ಸಹಜಮಾರ್ಗ ಪದ್ಧತಿಯಲ್ಲಿ ಮಾರ್ಗದರ್ಶಿಯು ತನ್ನ ಶಕ್ತಿಯಿಂದ ಅಭ್ಯಾಸಿಯ ಕೆಳಮುಖದ ಪ್ರವೃತ್ತಿಗಳನ್ನು ದುರ್ಬಲಗೊಳಿಸುವನು. ಇದರಿಂದ ಅವು ತಾವಾಗಿಯೆ ಭಗವದಭಿಮುಖವಾಗುವುವು. ಮನಸ್ಸಿನ ಈ ಸ್ಥಿತಿಯು ಚೈತನ್ಯದ ಉನ್ನತ ಸ್ತರಕ್ಕೆ ಸಂಬಂಧಪಟ್ಟಿದೆ; ಮೊದಲಿನದು ನಿಮ್ನ ಸ್ತರಕ್ಕೆ. ಇದೇ ತತ್ತ್ವವೇ ಆಧ್ಯಾತ್ಮಿಕ ತರಬೇತಿಯ ತಳಹದಿಯಾಗಿದೆ. ತತ್ತ್ವಜ್ಞಾನಿಗಳು ಇದನ್ನು ಕುರಿತು ವಿಚಾರಮಾಡಲಿ. ತೀರ ಸಂಕ್ಷೇಪವಾಗಿ ಇದನ್ನು ವಿವರಿಸಿದ್ದೇನೆ. ಈ ಸಂದರ್ಭದಲ್ಲಿ ಒಬ್ಬ ಶ್ರೇಷ್ಠ ಸಂತರ ಈ ಮಾತುಗಳನ್ನು ಹೇಳುವುದು ತೀರ ಉಚಿತವೆನಿಸುವದು : "ಭಗವಂತನು ಭಕ್ತನ ಪ್ರತಿಯೊಂದು ಪ್ರಶ್ನೆಗೂ ಉತ್ತರದ ಬಾಗಿಲನ್ನು ಮುಚ್ಚಿರುವನು." ಈ ಬಾಗಿಲು ಏನೆಂಬುದನ್ನು ವಿಚಾರಮಾಡಿದಾಗ, ಈ ತೆರೆ ಜ್ಞಾನಕ್ಕೆ ಸಂಬಂಧಪಟ್ಟುದೆಂದು ತಿಳಿದುಬರುವುದು. ಒಬ್ಬ ಕವಿಯಾದರೂ "(ಚೀನದ ತತ್ತ್ವಜ್ಞಾನಿ) ಸಹಬಾನನಂತೆ ವಾಕ್ಪಟುತ್ವವನ್ನು ಯಾರಾದರೂ ಪಡೆಯ ಬಹುದು; ಆದರೆ ಸುಭಾನನ (ಭಗವಂತನ) ಪೂರ್ಣಜ್ಞಾನವನ್ನು ಯಾರೂ ಪಡೆಯಲಾರರು" ಎಂದು ಹೇಳಿದ್ದಾನೆ.

ಈಗ ಈ ತೆರೆಯನ್ನು ಕುರಿತು ಕೇಳಿ. ಭಗವಂತನ ಮೂಲ ರಹಸ್ಯವನ್ನು ತಿಳಿಯಲು ಅಡ್ಡಬರುವ ತೆರೆ ಯಾವುದು ? ನಾವು ಭಗವಂತನನ್ನು ಕುರಿತು

ವಿಚಾರಮಾಡಿದಾಗ ನಮ್ಮ ತಿಳಿವಳಿಕೆಯು ತನ್ನ ಸುತ್ತಲೂ ಒಂದು ವೃತ್ತವನ್ನು ನಿರ್ಮಿಸಿಕೊಳ್ಳುವುದು. ನಮ್ಮ ಪ್ರತಿಯೊಂದು ಪ್ರಶ್ನೆಗೂ ಉತ್ತರ ದೊರೆಯದಿರಲು ಇದೇ ಗ್ರಂಥಿಯೆ ಕಾರಣ. ಈ ಪರಿಮಿತಿಯನ್ನು ನಾವು ದಾಟಿ ಹೋಗಲು ಸಾಧ್ಯವಾದರೆ ಅತ್ಯಂತ ಸೂಕ್ಷ್ಮಸಂಗತಿಗಳು ಸಹ ನಮಗೆ ತಿಳಿಯಬಹುದು. ಈ ವೃತ್ತವು ಇದರ ನಂತರ ಬರುವ ವೃತ್ತದ ಪ್ರತಿಚ್ಛಾಯೆ. ಅದರಲ್ಲಿ ನಾವು ಪ್ರವೇಶಮಾಡಿದಾಗ ಕೇಂದ್ರದ ರಹಸ್ಯವು ಗೋಚರವಾಗುವುದು. ನಾವು ನಮ್ಮ ಅಸ್ತಿತ್ವದ ಕಣಗಳನ್ನು ಭಿನ್ನಭಿನ್ನಮಾಡಿಕೊಂಡಾಗಲೇ ಈ ಬಂಧಗಳು ಕತ್ತರಿಸಿಹೋಗಬಲ್ಲುವು. ಆದರೆ ಈ ಸಾಮರ್ಥ್ಯ ಎಲ್ಲರಿಗೂ ಬರುವುದಿಲ್ಲ. ಏಕೆಂದರೆ ಇದಕ್ಕೆ ಅಗತ್ಯವಾದ ನಿಯಮಗಳ ಪಾಲನೆ ಎಲ್ಲರಿಂದಲೂ ಸಾಧ್ಯವಿಲ್ಲ. ತನ್ನ ಇಚ್ಛಾಶಕ್ತಿಯಿಂದ ಈ ಕಣಗಳನ್ನು ಭಿನ್ನಭಿನ್ನಮಾಡಬಲ್ಲ ಯಾವನಾದರೂ ಉದಿಸಿಬಂದರೆ ಮಾತ್ರ ಈ ವೃತ್ತವು ದೃಷ್ಟಿಯಿಂದ ಸರಿದುಹೋಗುವುದು, ಏಕೆಂದರೆ ಭಿನ್ನಭಿನ್ನ ಸ್ಥಿತಿಯಲ್ಲಿ ಆತನ ದೃಷ್ಟಿಯೂ ಅದರೊಂದಿಗೆ ಬೆರೆತುಹೋಗುವುದು. ಆದರೆ ಇದರ ಜ್ಞಾನವಾಗಬೇಕಾದರೆ ಮೊದಲಿದ್ದ ಹಾಗೆಯೆ ಕಣಗಳನ್ನು ಮತ್ತೆ ಹೊಂದಿಸಿ ಶರೀರವನ್ನು ಸುವ್ಯವಸ್ಥಿತಗೊಳಿಸಲು ಬಲ್ಲವನಾಗಿರಬೇಕು. ಜನಸಾಮಾನ್ಯರ ದೃಷ್ಟಿಯಲ್ಲಿ ಇಂಥ ಮನುಷ್ಯನು ಹುಟ್ಟಿರಲಿಕ್ಕಿಲ್ಲ. ನನ್ನ ಅನುಭವದ ಮೇರೆಗೆ ಹೇಳುವುದಾದರೆ ಇಂಥ ಹಲವಾರು ಮಹಾಪುರುಷರು ಆಗಿ ಹೋಗಿದ್ದಾರೆ. ಕಣಗಳನ್ನು ಬೇರ್ಪಡಿಸಿದಾಗಿನ ಸ್ಥಿತಿಯು ಸೃಷ್ಟಿಯ ಆರಂಭದಲ್ಲಿದ್ದ ಗುಪ್ತಚಲನದಂತಿರುವುದು. ಅದರಲ್ಲಿ ಆತನ ಇಚ್ಛಾಶಕ್ತಿ ಅಡಗಿರುವುದು. ಮಹಾಪ್ರಳಯದ ಅನಂತರವೂ ಇದೇ ಸ್ಥಿತಿ ಕಾಣಿಸಿಕೊಳ್ಳುವುದು. ಈ ಪ್ರಕಾರ ಸೃಷ್ಟಿಗೆ ಕಾರಣವಾದ ಪ್ರಸುಪ್ತ ಇಚ್ಛಾಶಕ್ತಿಯೆ ಭಿನ್ನವಿಚ್ಛಿನವಾದ ಕಣಗಳನ್ನು ಪುನರ್ವ್ಯವಸ್ಥೆಗೊಳಿಸಲು ಕಾರಣವಾಗುವುದು, ಆಗ ಯಾವ ಬಂಧನವೂ ಉಳಿಯುವದಿಲ್ಲ.

# ನಿಯಮ - ೨

**ನಿಮ್ಮ ಪೂಜೆಯನ್ನು ಆತ್ಮೋನ್ನತಿಯ ಪ್ರಾರ್ಥನೆಯೊಂದಿಗೆ ಆರಂಭಿಸಿರಿ. ಪ್ರಾರ್ಥನೆ ಮಾಡುವಾಗ ಹೃದಯವು ಪ್ರೇಮ - ಭಕ್ತಿಗಳಿಂದ ತುಂಬಿರಲಿ.**

ಪ್ರಾರ್ಥನೆಯು ಭಕ್ತಿಯ ಕುರುಹು. ಪರಮಾತ್ಮನೊಂದಿಗೆ ನಮ್ಮ ಸಂಬಂಧವು ಸ್ಥಾಪಿತವಾದುದನ್ನು ಅದು ಸೂಚಿಸುತ್ತದೆ. ನಾವು ಯಾರನ್ನಾದರೂ ಒಡೆಯನೆಂದು ಒಪ್ಪಿಕೊಂಡಮೇಲೆ ಆತನ ಸೇವಕರಾದಂತೆಯೇ ಸರಿ. ಸೇವೆಮಾಡುವುದೊಂದೇ ಸೇವಕನ ಕೆಲಸ. ಭರತನ ಉದಾಹರಣೆಯನ್ನು ತೆಗೆದುಕೊಳ್ಳೋಣ. ಆತನು ಹೃದಯದಲ್ಲಿ ತನ್ನ ಒಡೆಯನ ಸಂಮಾನ, ಪೂಜೆಗಳನ್ನುಳಿದು ಬೇರೆ ವಿಚಾರಗಳಿಗೆ ಅವಕಾಶವನ್ನೇ ಕೊಡುತ್ತಿರಲಿಲ್ಲ. ಭಕ್ತಿಯ ಸಂಬಂಧವನ್ನು ಸ್ಥಿರವಾಗಿ ಉಳಿಸಿಕೊಳ್ಳಬೇಕಾದರೆ ನಮ್ಮ ಕಣ್ಣ ಮುಂದೆ ಯಾವಾಗಲೂ ಈ ಉದಾಹರಣೆಯನ್ನಿರಿಸಿಕೊಳ್ಳಬೇಕು. ಇದನ್ನೆ ಪ್ರೇಮದ ಸಂಬಂಧವೆಂದು ಹೇಳಬಹುದು. ಮೊದಲಿನಿಂದ ಕೊನೆಯವರೆಗೆ ಸಂಬಂಧವನ್ನು ಜೋಡಿಸುವುದು ಇದೇ.

ವಿದ್ಯುತ್ತಂತ್ರಿಯ ತತ್ತ್ವ ಪ್ರತಿಯೊಬ್ಬನಿಗೂ ಗೊತ್ತಿದೆ. ಅದರ ಒಂದು ತುದಿ ವಿದ್ಯುತ್ತನ್ನು ಹೊಂದಿದ್ದಾಗ ಸುದ್ದಿಯು ಎರಡನೆಯ ತುದಿಗೆ ಮುಟ್ಟುವುದು. ಇದೇ ಸ್ಥಿತಿ ಭಕ್ತನದೆಂದು ತಿಳಿಯತಕ್ಕದ್ದು. ಆತನು ತನ್ನ ಭಕ್ತಿಯ ವಿದ್ಯುತ್ತಿನಿಂದ ಒಡೆಯನ ವರೆಗೆ ತನ್ನ ವರದಿಯನ್ನು ತಲುಪಿಸುವನು. ಭಕ್ತಿಯ ಪ್ರಭಾವದಿಂದ ಇಬ್ಬರ ನಡುವೆ ಸ್ಥಾಪಿತವಾದ ಸಂಬಂಧದ ಮೂಲಕ ಒಡೆಯನ ಹತ್ತಿರ ಇದ್ದುದು ಭಕ್ತನ ಹತ್ತಿರ ಹರಿದುಬರುವುದು. ಕ್ರಮೇಣ ಒಡೆಯನಲ್ಲಿದ್ದ ಎಲ್ಲವೂ ಭಕ್ತನವರೆಗೆ ತಲುಪತೊಡಗುವುದು. ಮೊದ ಮೊದಲು ಭಕ್ತನು ಒಡೆಯನಿಗೆ ಕೇವಲ ತನ್ನ ಪರಿಚಯಮಾಡಿಕೊಟ್ಟಿದ್ದನು.

ಭಕ್ತನು ಭಕ್ತಿಮಾಡಲಾರಂಭಿಸಿದುದರ ಪರಿಣಾಮವಾಗಿ ಒಡೆಯನು ಆತನ ಸಮೀಪಕ್ಕೆ ಬರತೊಡಗಿದನು. ಇದು ಹಾಗೆಯೆ ಬೆಳೆಯುತ್ತ ಹೋಯಿತು. ಭಕ್ತನಲ್ಲಿ ಸಹವಾಸದ ಭಾವ ಸುಳಿಯಲಾರಂಭಿಸಿತು. ಮೈತ್ರಿ ಬೆಳೆಯಿತು. ಪರಸ್ಪರ ಧ್ಯಾನ ನಡೆಯಿತು. ಸಮಾಚಾರ ಹೋಗತೊಡಗಿತು. ಆದೇಶಗಳು ಬರಲಾರಂಭಿಸಿದುವು. ಮೊದಲ ಸಂಸ್ಕಾರ ಪ್ರಾರಂಭವಾಯಿತು. ಇಲ್ಲಿಯ ವರೆಗಂತೂ ತಂದದ್ದಾಯಿತು. ಮುಂದೆ .....? ಅದೊಂದು ರಹಸ್ಯವಾಗಿದೆ. ನಾಲಗೆ ಏಳುವುದಿಲ್ಲ. ಭಕ್ತಿಯು ನಮ್ಮನ್ನು ದಾಸ್ಯದಲ್ಲಿ ಬಂಧಿಸಿತೆಂದು ಸಾಮಾನ್ಯಜನರು ತಿಳಿಯುವರು. ಆದರೆ ಇಲ್ಲಿ ವಿಲೋಮದ ತತ್ತ್ವ ಮತ್ತೆ ಬರುವುದು. ಯಾರು ಈ ತತ್ತ್ವವನ್ನು ಅನುಸರಿಸಿದರೋ ಅವರು ಪೂರ್ಣತೆ ಯನ್ನು ಮುಟ್ಟಿದರು. ಆದರೆ ಜನರ ದೃಷ್ಟಿಗೆ ಈ ತತ್ತ್ವಜ್ಞಾನ ನಿಲುಕಿಲ್ಲ ವಾದುದರಿಂದ ಈ ರಹಸ್ಯವು ಇದುವರೆಗೆ ಪ್ರಕಟವಾಗಿಲ್ಲ.

ಪ್ರಾರ್ಥನೆ ಮಾಡುವಾಗ ಹೃದಯವು ಪ್ರೇಮದಿಂದ ತುಂಬಿ ತುಳುಕ ಬೇಕೆಂದು ಹೇಳಿದುದರ ಕಾರಣವಿಷ್ಟೆ : ನಾವು ಪ್ರಾರ್ಥನೆಯ ಮೂಲಕ ನಮ್ಮ ಹೃದಯವನ್ನು ನಿರ್ವಿಷಯ ಮಾಡಿಕೊಳ್ಳುವುದರಿಂದ ದೈವೀಕೃಪೆಯ ಧಾರೆಗಳು ಆಕರ್ಷಿತವಾಗಿ ಅದರಲ್ಲಿ ನೇರವಾಗಿ ಹರಿದು ಬರುವುವು. ಒಬ್ಬ ಕವಿ ಹೀಗೆ ಹೇಳಿದ್ದಾನೆ :

> ದೈವಕೃಪೆಯುನ್ಮಾದಕೆಳಸುತಿಹ ಸದ್ಭಕ್ತ !
> ಮೊದಲು ನಿಜಹೃದಯವನು ಬರಿದು ಮಾಡು ;
> ಪೂರ್ತಿ ಬರಿದಾಗಿರುವ ಬಟ್ಟಲೊಳು ಮಧುಪಾತ್ರೆ
> ಬಾಗುವುದು, ಇಂತದರ ಗುಟ್ಟು ನೋಡು.

ಬರಬರುತ್ತ ಇದರ ಸತತಾಭ್ಯಾಸದಿಂದ ಸಾಧಕನು ತಾನು ಪ್ರಾರ್ಥನಾಮಯ ನಾದಂತೆ ಅನುಭವಿಸುವನು. ಮೇಲೆ ವಿವರಿಸಿದ ನಿಯಮದಂತೆ ಅಭ್ಯಾಸ ಮಾಡಿದಾಗಲೇ ಸಾಧಕನಲ್ಲಿ ಈ ಅವಸ್ಥೆಯುಂಟಾಗುತ್ತದೆ. ಆಗ ಮಾತ್ರವೇ ದೈವೀಕೃಪೆ ಪೂರ್ಣರೂಪದಿಂದ ಇಳಿದು ಬರುವುದು. ಕೊನೆಯ ಅವಸ್ಥೆ ಯನ್ನು ಮುಟ್ಟಿದಾಗ ಸಾಧಕನು ಯಾವಾಗಲೂ ಪ್ರಾರ್ಥನೆಯ ಸ್ಥಿತಿಯಲ್ಲಿಯೆ ಇರತೊಡಗುವನು. ಪ್ರಾಪಂಚಿಕ ಕಾರ್ಯಗಳನ್ನು ಮಾಡುತ್ತಿರುವಾಗಲೂ

ಆ ಸ್ಥಿತಿಯಿಂದ ಕದಲುವುದಿಲ್ಲ. ಪ್ರಪಂಚದ ಯಾವ ಕೆಲಸವೂ ಇದರಲ್ಲಿ ವಿಘ್ನವನ್ನುಂಟುಮಾಡಲಾರದು. "ಪ್ರಪಂಚವನ್ನು ತ್ಯಜಿಸಬೇಕೆಂದು ನಾನು ಹೇಳುವುದಿಲ್ಲ. ಆದರೆ ಪ್ರತಿಯೊಂದು ಕೆಲಸವನ್ನೂ ದೇವರಲ್ಲಿ ಚಿತ್ತವಿಟ್ಟು ಮಾಡಬೇಕು."

ಯಾವನಾದರೊಬ್ಬ ಮನುಷ್ಯನು ತನ್ನಲ್ಲಿ ಈ ಸ್ಥಿತಿಯನ್ನು ತಂದು ಕೊಂಡರೆ ಅವನು ಯಾವಾಗಲೂ ಪ್ರಾರ್ಥನೆಯಲ್ಲಿಯೆ ಇರುವನೆಂದರ್ಥ. ಒಡೆಯನ ಸ್ವಾಮಿತ್ವವನ್ನೂ ತನ್ನ ದಾಸ್ಯವನ್ನೂ ಆತನು ಅರಿತುಕೊಂಡು ಭಕ್ತಿಯ ಸಂಬಂಧವನ್ನು ಗಾಢವಾಗಿ ಸ್ಥಾಪಿಸಿದ್ದಾನೆ. ಈ ಸ್ಥಿತಿಯನ್ನು ಪ್ರತಿಯೊಬ್ಬನೂ ಸಾಕಷ್ಟು ಅಭ್ಯಾಸ ಮಾಡಿದನಂತರವೇ ಪಡೆಯಲು ಸಾಧ್ಯ. ಇದನ್ನು ಪಡೆದವನು ಪ್ರಾರ್ಥನೆಯ ವಲಯದಲ್ಲಿ ಬಂದಂತೆಯೆ. ತನ್ನ ಒಡೆಯನ ಮುಂದೆ ನಮ್ರತೆಯಿಂದ ಏನುಬೇಕಾದರೂ ಹೇಳಿಕೊಳ್ಳುವ ಅಧಿಕಾರ ಅವನಿಗಿದೆ. ಪ್ರಾರ್ಥನೆಯ ಕಾಲದಲ್ಲಿ ಇಂಥ ಭಾವವನ್ನು ಪ್ರತಿ ಯೊಬ್ಬನೂ ಹೊಂದಬೇಕು. ಆಗಮಾತ್ರವೇ ಪ್ರಾರ್ಥನೆ ಸ್ವೀಕೃತವಾಗುವುದು. ಇದೊಂದು ಪ್ರೇಮದ ಸಂಬಂಧ. ಇದು ಮೊದಲು ಭಕ್ತನಲ್ಲಿ ಅಂಕುರಿಸಿ ಭಗವಂತನವರೆಗೂ ಹಬ್ಬುವುದು. ಒಮ್ಮೆ ಪ್ರಸ್ಥಾಪಿತವಾದ ಈ ಸಂಬಂಧವು ಎಂದಿಗೂ ಕಡಿದುಹೋಗುವುದಿಲ್ಲ. ಗಂತವ್ಯವು ಇನ್ನೂ ದೂರವಾಗಿದ್ದರೂ ಚಿಂತನೆಯು ಅದನ್ನು ಸುಗಮಗೊಳಿಸುವುದು. ಪ್ರಿಯತಮನ ಧ್ಯಾನವು ಪ್ರೇಮಿಯನ್ನು ಅವನ ಹತ್ತಿರಕ್ಕೆ ಎಳೆದೊಯ್ಯುವುದು. ಈ ಸಾಮೀಪ್ಯಕ್ಕೆ ಮೇರೆಯಿಲ್ಲ. ಪ್ರೇಮವು ಹೆಚ್ಚಿದಂತೆ ಅವನ ಕಡೆಗೆ ಮುಂದುವರಿಯುವೆವು. ಈ ಸಂಬಂಧವನ್ನು ನಾವು ಹುಟ್ಟುತ್ತಲೇ ನಮ್ಮ ಜೊತೆಗೆ ತಂದಿದ್ದೇವೆ. ಇದನ್ನು ಬೆಳೆಸುವುದು ನಮ್ಮ ಕರ್ತವ್ಯವಾಗಿದೆ. ನಾವು ಯಾವಾಗಲೂ ಆತನಿಗೆ ತೀರ ಸಮೀಪವೆನಿಸುವಷ್ಟು ಮಟ್ಟಿಗೆ ಇದನ್ನು ಬೆಳೆಸಬೇಕು. ಪ್ರಾರ್ಥನೆಯ ಸ್ಥಿತಿ ಭಕ್ತನದಾಗಿರುತ್ತದೆ. ಪ್ರೇಮ-ಭಕ್ತಿಗಳಿಂದಲೇ ಅದಕ್ಕೆ ದೃಢತೆ ಬರುವುದು. ಪರಮಾತ್ಮನವರೆಗೆ ನಮ್ಮನ್ನು ಮುಟ್ಟಿಸುವ ಏಣಿ ಇದೇ. ಇದರಲ್ಲಿಯೆ ಆಧ್ಯಾತ್ಮಿಕ ಪ್ರಗತಿಯ ಎಲ್ಲ ಘಟ್ಟಗಳೂ ಅಡಕವಾಗಿವೆ.

ಪ್ರಾರ್ಥನೆಗಾಗಿ ಯಾವುದೊಂದು ವಿಶಿಷ್ಟ ಸಮಯವೇ ಬೇಕೆಂಬುದೇನಿಲ್ಲ. ಬೇಕೆನಿಸಿದಾಗ ಅದನ್ನು ಮಾಡಬಹುದು. ಒಂದುವೇಳೆ ಇಚ್ಛೆಯಾಗ

ದಿದ್ದರೂ ಮನಸ್ಸನ್ನು ಆ ಕಡೆಗೆ ಒಲಿಸಬೇಕು. ನಿಜವಾದ ಅರ್ಥದಲ್ಲಿ ಸ್ವಾಮಿಯೆನಿಸುವವನನ್ನೇ ಪ್ರಾರ್ಥಿಸಬೇಕು. ಗುಲಾಮರಿಗೆ, ಅರ್ಥಾತ್ ಮನುಷ್ಯನ 'ಅಧೀನದಲ್ಲಿದ್ದು ಆತನಿಂದಲೇ ಬಲಪಡೆಯುವ ಶಕ್ತಿಗಳಿಗೆ ಪ್ರಾರ್ಥನೆಮಾಡುವುದು ಉಚಿತವಲ್ಲ. ಕಾಲಮಹಿಮೆಯಿಂದ ಅವೆಲ್ಲ ಕ್ಷಯಗ್ರಸ್ತವಾಗಿದೆ. ಇನ್ನೊಂದು ಮಾತು : ಶ್ರೇಷ್ಠಸ್ವಾಮಿಯನ್ನು ಕುರಿತು, ತೀರ ಅಪವಾದಾತ್ಮಕ ಪ್ರಸಂಗಗಳನ್ನುಳಿದು, ಪ್ರಾಪಂಚಿಕ ಲಾಭಗಳಿಗಾಗಿ ಪ್ರಾರ್ಥಿಸುವುದು ತುಂಬ ಮೂರ್ಖತನ. ಆತನು ಅಪ್ಪಣೆಕೊಡಿಸಿದ ಸಂಗತಿಗಳಿಗಾಗಿ ಮಾತ್ರ ಪ್ರಾರ್ಥನೆ ಸಲ್ಲಿಸುವುದು ಆಕ್ಷೇಪಣೀಯವಲ್ಲ. ಇದು ಮಾನವನ ವಿನಯಕ್ಕೆ ಭೂಷಣ. ಅಲ್ಲದೆ, ನಾವು ಆತನನ್ನು ನಮ್ಮ ಒಡೆಯನೆಂದು ತಿಳಿದು ಆತನಿಗೆ ನಮ್ಮನ್ನು ಪೂರ್ಣವಾಗಿ ಸಮರ್ಪಿಸಿಕೊಂಡಿರುವೆವೆಂಬುದಕ್ಕೆ ಇದು ಸಾಕ್ಷಿಯಾಗಿದೆ.

ಇನ್ನು, ಬೇರೆಯವರ ಹಿತಕ್ಕಾಗಿ ಯಾವ ರೂಪದಲ್ಲಿ ಪ್ರಾರ್ಥನೆಮಾಡಬೇಕೆಂಬ ಪ್ರಶ್ನೆ ಬರುವುದು. ಪ್ರಾರ್ಥನೆ ಮಾಡುವಾಗ ತನ್ನ ಮನಃಸ್ಥಿತಿ ಹೇಗಿರುವುದೋ ಅದೇ ಮಟ್ಟಕ್ಕೆ ಅವರನ್ನು ತರಬೇಕೆಂಬುದೇ ಅದಕ್ಕೆ ಉತ್ತರ. "ನಾವು ವಿನೀತ ಸೇವಕರಂತೆ, ಕ್ಷುದ್ರ ಭಿಕ್ಷುಕರಂತೆ ಮಹಾಮಹಿಮನ ಮಂದಿರದಲ್ಲಿ ಬಂದಿದ್ದೇವೆ. ನಮ್ಮದೆಲ್ಲವನ್ನೂ ಆತನ ಮುಂದಿಟ್ಟು ಆತನ ಇಚ್ಛೆಗೆ ನಮ್ಮನ್ನು ಸಮರ್ಪಿಸಿಕೊಳ್ಳಬೇಕು" ಎಂಬ ಈ ವಿಚಾರವನ್ನು ಅವರ ಮನಸ್ಸಿನ ಮೇಲೆ ಬಿಂಬಿಸಬೇಕು. ಎಲ್ಲ ಕಡೆಯಿಂದಲೂ ಉಪಸಂಹರಿಸಿಕೊಂಡು ಆತನ ಕಡೆಗೆ ತಿರುಗಬೇಕು. ಸಂಸಾರವು ಅಸಾರವೆಂದೆನಿಸಬೇಕು. ಪ್ರತಿಯೊಂದರ ಸ್ಮರಣೆಯೂ ಆ ಒಂದು ಸ್ಮರಣೆಯಲ್ಲಿ ಸಮಾವೇಶವಾಗಬೇಕು. ರೋಮ ರೋಮದಲ್ಲಿ ಆತನ ನೆನಪೇ ಉಳಿದುಕೊಂಡಿರಬೇಕು. ಇದನ್ನು ಪೂರ್ಣಲಯವೆನ್ನುವರು. ಈ ಸ್ಥಿತಿಯನ್ನು ಮನುಷ್ಯನು ಪಡೆದುದಾದರೆ, ನನ್ನ ಅಭಿಪ್ರಾಯದಲ್ಲಿ, ಆತನು ಅಡಿಯಿಂದ ಮುಡಿಯವರೆಗೆ ಪ್ರಾರ್ಥನಾಮಯನೇ. ಆತನ ಪ್ರತಿಯೊಂದು ವಿಚಾರವೂ ಒಡೆಯನದೇ. ಒಡೆಯನ ಅಪ್ಪಣೆಯೇ ಆತನ ಇಚ್ಛೆ.

ಇಂಥ ಪ್ರಾರ್ಥನೆಮಾಡಲು ಜನರನ್ನು ಅಣಿಗೊಳಿಸಬೇಕು. ಯಾರಾದರೂ ಇದನ್ನು ಸಾಧಿಸಿ ಇದರಲ್ಲಿ ನೆಲೆಸಿಬಿಟ್ಟರೆ ಅವರಿಗೆ ಅವನ ಸ್ಮರಣೆಯನ್ನು

ಳಿದು ಇನ್ನೇನೂ ಮಾಡಬೇಕಾದುದು ಉಳಿಯುವುದಿಲ್ಲ. ಆ ಸ್ಮರಣೆಯಾದರೂ ಏಂಥದು? ಅದರ ನೆನಪು ಸಹ ಬಾರದಂಥದು! ದೊಡ್ಡ ದೊಡ್ಡ ಸಂತರು ಈ ಸ್ಥಿತಿಯನ್ನು ಪಡೆಯಲು ಹಂಬಲಿಸಿ ಹೋದರು; ಆದರೆ ಇದರ ಅಂಚನ್ನು ಸಹ ಮುಟ್ಟಲು ಆಗಲಿಲ್ಲ. ಕೇವಲ ಅಭಿಲಾಷೆಯಾಗಿಯೆ ಉಳಿಯಿತು. ಇದೇನು ಸಾಮಾನ್ಯ ಸಂಗತಿಯೆ? ಅದರ ನಿಜಸ್ಥಿತಿಯನ್ನು ತಿಳಿದು ಮಹದಾಶ್ಚರ್ಯ ಪಡುವಿರಿ. ಅಲ್ಲಿ ಮಿತಿಮೀರಿದ ಸರಳತೆಯಿದೆ. ತರಂಗ ಗಳಿದ್ದರೂ ಶಾಂತಿಯಿದೆ. ಅದನ್ನು ಶಾಂತಿಯೆನ್ನಲೂ ಬರುವಂತಿಲ್ಲ. ಉದ್ವೇಗಾವೇಗಗಳಂತೂ ದೂರ ಉಳಿದುವು. 'ಬೆಳಕು' ಎಂದು ಕರೆದರೂ ಸರಿಯಾಗಲಾರದು. 'ಕತ್ತಲೆ' ಯೆಂದರೂ ವಿಸಂಗತವಾಗುವುದು. ಹಾಗಾದರೆ ಏನಿದೆ? ಪ್ರಾಯಶಃ ಅದನ್ನು ಯಾರೂ ಮೆಚ್ಚಲಾರರು. ಇಲ್ಲಿ ಎಲ್ಲವೂ ಕೊನೆಗೊಳ್ಳುವುದು. ಇದು ಎಲ್ಲ ಸತ್ಯದ ಮೂಲತತ್ತ್ವ. ಇದೇ ಯಥಾರ್ಥ! ಇಲ್ಲಿಯೇ ಎಲ್ಲ ಸ್ಥಿತಿಗಳೂ ಮುಗಿದುಹೋಗುವುವು. ಅಲ್ಲಿಂದ ಮುಂದೇನು ಹೇಳಲಿ....? ಭಗವಂತನು ಎಲ್ಲರಿಗೂ ಈ ಅನುಭವವನ್ನು ಕರುಣಿಸಲಿ.

ಸೃಷ್ಟಿಪೂರ್ವದಲ್ಲಿ ಎಲ್ಲವೂ ನೀರವವಾಗಿದ್ದಿತು. ಅದು ಅವತರಣ ಮಾಡಿದಾಗ ತನ್ನೊಂದಿಗೆ ಮೂಲಸತ್ತ್ವವನ್ನು ತಂದಿತು. ಅವೆರಡರ ಸ್ಥಿತಿಯೂ ಸುಮಾರು ಒಂದೇ ಆಗಿದ್ದಿತು. ಅದರ ಮೇಲೆ ಒಂದೊಂದಾಗಿ ಆವರಣಗಳು ಸುತ್ತತೊಡಗಿದುವು. ಅದಕ್ಕೆ ನಾವೇ ಕಾರಣರು. ಪ್ರವಾಹದ ತೆರೆಗಳು ಒಂದು ದೊಡ್ಡ ಸಮುದ್ರವನ್ನೇ ನಿರ್ಮಿಸಿದವು. ಅನೇಕ ಬಿಂದು ಗಳು ಕೂಡಿ ಪ್ರವಾಹವಾಯಿತು. ಎಲ್ಲದರ ಮೂಲ ಮಾತ್ರ ಅದೇ ಬಿಂದು; ಆದರೊಡನೆ ಕೆಳಗಿಳಿದಿದ್ದ ಅದೇ ಸತ್ತ್ವ. ಬೆಟ್ಟದ ತುದಿಯಿಂದ ಬಿದ್ದ ನೀರಿನ ಕೆಲವು ಹನಿಗಳೇ ನದಿಯ ಮೂಲವಾದವು. ಅವುಗಳಲ್ಲಿ ಅನಾವಶ್ಯಕ ಹನಿಗಳು ಸೇರಿದುವು; ಮೂಲಬಿಂದುವನ್ನು ಮರೆಮಾಡಿ ಅದಕ್ಕೊಂದು ಪ್ರತಿಬಿಂಬಿತ ರೂಪಕೊಟ್ಟು ಅದನ್ನು ಸ್ಥೂಲಗೊಳಿಸಿದುವು. ಸಾಮಾನ್ಯವಾಗಿ ಪದಾರ್ಥದ ಸ್ಥೂಲರೂಪವೇ ನಮ್ಮ ಕಣ್ಣಿಗೆ ಬೀಳುವುದು. ಸತತವಾಗಿ ಅದನ್ನೇ ನೋಡುವುದರಿಂದ ಸ್ಥೂಲರೂಪವೂ ಮರೆಯಾಗಿ ಅದರ ಆಕಾರ ಮಾತ್ರ ಉಳಿಯುವುದು. ಪ್ರಯತ್ನ ಮಾಡಿದರೆ ಇದೂ ಮಾಯವಾಗುವುದು.

ಕೊನೆಗೆ ಆ ಮೂಲವಸ್ತುವನ್ನು ಸ್ಥೂಲಗೊಳಿಸಿದ ಎಲ್ಲವೂ ಕಣ್ಮರೆಯಾಗುವುವು. ಆ ವಸ್ತುವೊಂದೇ ನಿಜರೂಪದಲ್ಲಿ ಕಾಣುವುದು. ವಸ್ತುವನ್ನು ನಿಜರೂಪದಲ್ಲಿ ಕಾಣುವ ದೃಷ್ಟಿಯು ನಿರಂತರ ಅಭ್ಯಾಸದಿಂದ ಬರುವುದು. ಇಂಥ ನೈಜದೃಷ್ಟಿಯೆ ಪ್ರಾರ್ಥನೆಯ ಸಾರವಾಗಿದೆ. ಇದೇ ಆರಂಭದ ಬಿಂದು ಅನಾವಶ್ಯಕ ಸಂಗತಿಗಳನ್ನು ದೂರಮಾಡುವುದೇ ಮೊದಲನೆಯ ಹೆಜ್ಜೆ. ನಾನು ಅದನ್ನು ಆರಂಭದ ಸ್ಥಿತಿಯೆಂದು ಏಕೆ ಕರೆದಿರುವೆನೆಂದು ಓದುಗರು ಆಶ್ಚರ್ಯಪಡಬಹುದು. ಅದು ನಿಜವಾಗಿಯೂ ಚೇತನತೆಯ ಅವಸ್ಥೆ. ಚೇತನತೆಯು ಪ್ರತಿಯೊಂದು ಘಟ್ಟದಲ್ಲಿ ಕಂಡುಬರುವುದಾದರೂ ಇದು ಉತ್ಕೃಷ್ಟವಾದ ಚೇತನತೆಯೆಂದು ಹೇಳಬಹುದು. ಇದರ ನಂತರದ ಸ್ಥಿತಿಗಳನ್ನು ನಾನು ವರ್ಣಿಸಬಯಸುವುದಿಲ್ಲ. ಏಕೆಂದರೆ ಅವುಗಳನ್ನು ಗ್ರಹಿಸುವುದು ತುಂಬ ಕಠಿಣ. ಕೊನೆಯ ಅಂತಸ್ತಿನವರೆಗಂತೂ ದೃಷ್ಟಿಯೆ ನಿಲುಕಲಾರದು. ಅಲ್ಲಿ ಪೂರ್ಣ ಏಕತೆಯಿದೆ. ಪ್ರಾರ್ಥನೆಯನ್ನು ಅದಕ್ಕಿಂತ ಮುಂಚಿನ ಸ್ಥಿತಿಯಲ್ಲಿ ಮಾಡಲಾಗುವುದು. ಈ ಮೂರು ಮಜಲುಗಳನ್ನೂ ತಿಳಿವಳಿಕೆಗಾಗಿ ಪ್ರಾರಂಭ ಹಾಗು ಕೊನೆ ಎಂದು ಇಟ್ಟುಕೊಳ್ಳಬಹುದು. ಇದರಲ್ಲಿ ಮಧ್ಯದ ಸ್ಥಿತಿಯೂ ಬಂದಂತಾಯಿತು. ಹಾಗೆ ನೋಡಿದರೆ, ಎರಡೂವರೆ ಮಜಲುಗಳೆಂಬುದೇ ನಿಜ. ಏಕೆಂದರೆ ಅಲ್ಲಿಂದ ಮುಂದೆ ನಮಗೆ ಅರಿವು ಇರುವುದಿಲ್ಲ. ನಾನು ಯಾವುದನ್ನು ಆರಂಭವೆಂದು ಕರೆದಿರುವೆನೋ ಅದೇ ನಿಜವಾದ ನೆಲೆಯಾಗಿದೆ. ಅದು ಪ್ರಾರ್ಥನೆಯ ಆರಂಭದ ಸ್ಥಿತಿ ಹೇಗಾಗಬಲ್ಲುದೆಂದು ಜನರು ಗೊಂದಲದಲ್ಲಿ ಬೀಳಬಹುದು. ಈಗ, ಹೆಚ್ಚಿನ ಜ್ಞಾನಸಂಪಾದನೆಗಾಗಿ ಒಬ್ಬ ಹುಡುಗನು ಅಕ್ಷರಗಳನ್ನು ಕಲಿಯುತ್ತಿರುವನೆಂದು ತಿಳಿಯಿರಿ. ಕೆಲಕಾಲದನಂತರ ತಾನು ಸಂಪಾದಿಸಿದ ಜ್ಞಾನದಿಂದ ಅವನು ಗಹನವಾದ ಸಮಸ್ಯೆಗಳನ್ನು ಬಿಡಿಸಬಹುದು. ಧ್ಯೇಯವೇನೋ ಆತನ ಕಣ್ಣೆದುರಿಗೆ ಇದ್ದಿತಾದರೂ ಕೆಲಕಾಲ ಅಕ್ಷರಾಭ್ಯಾಸದಲ್ಲಿಯೆ ಸಿಕ್ಕಿಬಿದ್ದ. ಕೊನೆಯ ಸ್ಥಿತಿಯೊಂದಿಗೆ ಈ ಸ್ಥಿತಿಯನ್ನು ಹೋಲಿಸಿದಾಗ ಇದೆಲ್ಲವೂ ಕ್ಷುಲ್ಲಕವೆನಿಸುವುದು. ಆದುದರಿಂದಲೇ ಅದನ್ನು ಪ್ರಾಥಮಿಕಸ್ಥಿತಿಯೆಂದು ಕರೆದಿದೆ. ಪ್ರಾರ್ಥನೆಯನ್ನು ಆರಂಭಿಸುವ ಪ್ರತಿಯೊಬ್ಬನಲ್ಲಿಯೂ ಈ ಮೊದಲಿನ ಸ್ಥಿತಿಯಿದೆ. ಆದರೆ ಧ್ಯೇಯವು ದೃಷ್ಟಿಪಥದಲ್ಲಿದ್ದರೆ ಈ ಆರಂಭಾವಸ್ಥೆ

ಯಲ್ಲಿಯೂ ಅದು ಪ್ರಭಾವವನ್ನು ಬೀರಿ ಕ್ರಮೇಣ ಅದೊಂದೇ ಬಿಂದುವು ಆತನ ಕಣ್ಣೆದುರಿನಲ್ಲಿ ಉಳಿದು ಅದರಲ್ಲಿ ನೆಲೆಸುವಂತಾಗುವುದು. ಈ ಆರಂಭಾವಸ್ಥೆಯನ್ನು ಪಡೆದ ನಂತರ ಅದನ್ನು ವಿಸ್ತರಿಸುತ್ತ ಹೋಗಬೇಕು. ವಿಸ್ತರಿಸುವುದೆಂದರೆ ಬಲೂನಿನಂತೆ ಉಬ್ಬಿಸುವುದಿಲ್ಲ. ಅದರಲ್ಲಿ ನಿಜವಾದ ಸತ್ವವನ್ನು ತುಂಬಿ ಬೆಳೆಸಬೇಕು. ಅದರಲ್ಲಿ ಪ್ರಗತಿಯಾಗತೊಡಗಿ, ಸ್ಥೂಲ ವಸ್ತುವು ಇಲ್ಲವೆಂಬ ಮಟ್ಟಿಗೆ ಸೂಕ್ಷ್ಮವಾಗುತ್ತ ನಡೆದು ಲಯವಾದಾಗ ನಾವು ಪದಾರ್ಥಗಳ ಸೂಕ್ಷ್ಮ ಅಸ್ತಿತ್ವದ ಜ್ಞಾನವಲಯದಲ್ಲಿ ಪ್ರವೇಶಿಸಿರುವೆವೆಂದು ತಿಳಿಯಬೇಕು.

ಮೂಲದಿಂದ ಧಾರೆಯು ನಾನಾರೂಪಗಳು ಪ್ರಕಟವಾದುವು. ಇವುಗಳ ಅವತರಣವು ಉದ್ದೇಶರಹಿತವಾಗಿರಲಿಲ್ಲ. ವಾಸ್ತವವಾಗಿ ಇವು ಶಕ್ತಿಗಳಾಗಿದ್ದು ವಿವಿಧರೀತಿಯಲ್ಲಿ ಕಾರ್ಯೋನ್ಮುಖವಾಗಿ ಅಭೀಷ್ಟ ಪರಿಣಾಮವನ್ನುಂಟು ಮಾಡಿದುವು. ಹೀಗೆ, ಮೂಲದಿಂದ ಧಾರೆಗಳ ರೂಪದಲ್ಲಿ ಪ್ರಕಟವಾದ ಶಕ್ತಿಗಳು ತಮ್ಮ ತಮ್ಮ ಕಾರ್ಯಗಳನ್ನು ಪ್ರಕಾಶ ಪಡಿಸಿದುವು. ಒಂದು ಮಗುವಿನ ಉದಾಹರಣೆಯನ್ನು ತೆಗೆದುಕೊಳ್ಳಿ. ಜನಿಸಿದಾಗ ಅದಕ್ಕೆ ಸರಿದಾಡಲೂ ಬರುತ್ತಿರಲಿಲ್ಲ. ಆದರೆ ಕಾಲ ಕಳೆದಂತೆಲ್ಲ ಅದು ಎದ್ದು ಕೂಡತೊಡಗಿತು; ನಿಲ್ಲಲು ಕಲಿತಿತು; ಓಡಾಡ ತೊಡಗಿತು. ಮಾತನಾಡಲು ಮೊದಲುಮಾಡಿತು ಅರ್ಥಾತ್ ಈ ಎಲ್ಲ ಶಕ್ತಿಗಳು ಅದರಲ್ಲಿ ಇದ್ದುವು. ಕ್ರಮೇಣ ಬೆಳೆಯುತ್ತ ಬಂದುವು. ಕೊನೆಗೆ ಯೌವನವು ಪ್ರಾಪ್ತವಾಗಿ ಮನುಷ್ಯನ ಪೂರ್ಣ ಬೆಳವಣಿಗೆ ಬಂದೇ ಬಿಟ್ಟಿತು. ಮಗುವಿನ ರಚನೆಗೆ ಕಾರಣವಾದ ಎಲ್ಲ ಘಟಕಗಳೂ ಬೇರೆಬೇರೆ ರೂಪತಾಳಿ ವಿಕಾಸ ಹೊಂದಿದ್ದರೂ ಇವೆಲ್ಲದರ ಮೂಲ ಮಾತ್ರ ಅದರ ಪಾಲಿಗೆ ಬಂದ ಸಣ್ಣ ಬಿಂದುವೇ. ಅದರೊಂದಿಗೆ ಆವರಣಗಳಿಂದು ಕರೆಯಲಾದ ಅನೇಕ ವಸ್ತುಗಳು ಕಲೆಯುತ್ತ ಹೋದುವು. ತಾಯಿಯ, ಸಂಸ್ಕಾರಗಳು ಹಾಗು ಅವುಗಳ ಪರಿಣಾಮ, ತಂದೆಯ ವಿಚಾರಗಳ ಪ್ರಭಾವ, ಶಿಕ್ಷಣ ಪದ್ಧತಿ, ಮತ್ತು ಸಮಾಜದಲ್ಲಿಯ ಇತರ ವ್ಯಕ್ತಿಗಳ ಪ್ರಭಾವ – ಇವೆಲ್ಲ ತಮ್ಮ ತಮ್ಮ ಕೆಲಸಗಳನ್ನು ಪ್ರಾರಂಭಿಸಿ ಉಪರಿಸಂಸ್ಕಾರಗಳನ್ನು ಮೂಡಿಸಿದುವು. ಮತ್ತೆ ಈ ಸಂಸ್ಕಾರಗಳೂ ತಮ್ಮ ಕ್ರಿಯೆಗಳನ್ನು ಆರಂಭಿಸಿದುವು. ಇದನ್ನು ಎಷ್ಟೆಂದು ಹೇಳುವುದು ! ಹೀಗೆ

ಕ್ರಿಯೆಗಳು ನಡೆಯುತ್ತಲೇ ಹೋದುವು. ಕೊನೆಗೆ, ಅವನಿಗೆ ತಾನು ಇಷ್ಟೆಲ್ಲ ಕ್ರಿಯೆಗಳ ಪರಿಣಾಮದಿಂದ ಬಂದಿರುವೆನೆಂಬ ಅರಿವುಕೂಡ ಸ್ವಲ್ಪವೂ ಉಳಿಯು ಲಿಲ್ಲ. ಈ ಪ್ರಭಾವಗಳೆಲ್ಲ ಸ್ಥೂಲತೆಯ ರೂಪ ಹೊಂದಿದುವು. ಈಗ, ಈ ಸ್ಥೂಲತೆಯಿಂದ ದೂರವಾಗಬೇಕೆಂದರೂ ಸಾಧ್ಯವಾಗಲೊಲ್ಲದು. ಬರಬರುತ್ತ ಸ್ಥಿತಿ ಬದಲಾಯಿತು. ಆತನು ಜಗತ್ತನ್ನು ನೋಡತೊಡಗಿದ. ಜನಜೀವನ, ರೀತಿ – ನೀತಿಗಳ ಪರಿಣಾಮವಾಯಿತು. ಪರಿಸರವು ಪ್ರಭಾವ ಬೀರಿತು. ಚಿಂತೆಗೊಳಗಾದನು. ಈ ರೀತಿ ಅವನ ರೂಪ ಇನ್ನೂ ಬದಲಾಯಿತು. ಆತನ ಅಸ್ತಿತ್ವವೆಲ್ಲ ಬಣ್ಣಗೊಂಡು ಸದೃಶ ಕಣಗಳನ್ನು ಸೆಳೆಯತೊಡಗಿತು. ಆತನ ಮೂಲರೂಪವು ಏನಿದ್ದಿತು – ಈಗ ಏನಾಯಿತೆಂಬುದನ್ನು ಸ್ವಲ್ಪ ಯೋಚಿಸಿ. ಆ ಚಿಕ್ಕ ಬಿಂದು ಈಗ ಕಣ್ಣಿಗೆ ಸಹ ಕಾಣದಂತಾಗಿದೆ. ಇಷ್ಟೇ ಅಲ್ಲ, ಆತನು ತನ್ನ ಸ್ವಂತದ ವಿಚಾರಗಳಿಂದ ಈಯೆಲ್ಲ ಘಟಕಗಳಿಗೆ ಬಲ ಕೊಡುತ್ತ ನಡೆದನು. ಇದರ ಪರಿಣಾಮವಾಗಿ ಕಾರ್ಯಗಳು ತ್ವರಿತಗತಿಯಿಂದ ನಡೆದುವು. ನಿಸರ್ಗದ ಬಲವೂ ದೊರೆಯುಹತ್ತಿತು. ಹಿಂದೆ ಹೇಳಿದ ಹಾಗೆ, ಬೆಟ್ಟದ ತುದಿಯಿಂದ ಬಿದ್ದ ನೀರಿನ ಕೆಲವು ಬಿಂದುಗಳಿಗೆ ಬೇರೆ ಕಡೆಯ ನೀರೂ ಕರಗಿದ ಹಿಮವೂ ಕೂಡಿಕೊಂಡು ಅದಕ್ಕೆ ಚಿಕ್ಕ ಪ್ರವಾಹದ ರೂಪಕೊಟ್ಟು ನದಿಯನ್ನಾಗಿ ಮಾಡಿ ಕೊನೆಗೆ 'ಸಮುದ್ರ' ವೆನಿಸಿದಂತೆ ಮಗು ಬೆಳೆದು ಮನುಷ್ಯನಾದದ್ದು. ನದಿಯಲ್ಲಿ ಕಂಡುಬರುವ ತರಂಗಗಳ ಮೂಲರೂಪವು ದಾರಿಯಲ್ಲಿ ಅದಕ್ಕೆ ಬೆರೆತ ಕರ್ಮಫಲಗಳ ಪ್ರವಾಹಗಳ ಕಾರ್ಯವೇ ಹೊರತು ಮತ್ತೇನೂ ಅಲ್ಲ. ಇವೇ ತರಂಗಗಳನ್ನೇ ಜನರು ಆನಂದ ಲಹರಿಗಳೆಂದು ಭಾವಿಸುವರು. ಈ ಸ್ಥಿತಿಯು ಮನುಷ್ಯನಿಗೆ ಯೌವನದಲ್ಲಿ ಬಹಳ ಗಾಢ-ವಾಗಿರುವುದು. ಆಗ ಆತನು ಬಾಹ್ಯಪ್ರಭಾವಗಳಿಂದ ತುಂಬ ದೂಷಿತ ನಾಗಿರುತ್ತಾನೆ. ಅನೇಕ ಕ್ರಿಯೆಗಳ ಪರಿಣಾಮರೂಪವಾದ ಆತನ ಅವಸ್ಥೆಯು ಸಮುದ್ರದ ಅವಸ್ಥೆಯಂತೆಯೆ ಎಂದು ಹೇಳಬಹುದು.

ಒಂದು ಮುಖ್ಯ ಪ್ರಶ್ನೆ ಉಳಿಯಿತು : ಒಂದು ಪದಾರ್ಥವನ್ನು ಸತತ-ವಾಗಿ ನೋಡುತ್ತಿರಲು ಅದು ನಮ್ಮ ದೃಷ್ಟಿಯಿಂದ ಸರಿದುಹೋಗುವುದು. ಸ್ವಲ್ಪಹೊತ್ತು ಅದರ ಆಕಾರ ಮಾತ್ರ ಉಳಿದು ಕೊನೆಗೆ ಅದೂ ಮಾಯವಾಗು ವುದು. ಹೀಗೇಕೆ? ಕಾರಣವಿಷ್ಟೆ : ಘನಪದಾರ್ಥದಲ್ಲಿ ಘನವಾದುದನ್ನೇ

ನೋಡುವ ಸಾಮರ್ಥ್ಯವಿದೆ. ಅದರಾಚೆಗಿರುವುದನ್ನು ನೋಡಬೇಕಾದರೆ ಅದಕ್ಕಿಂತ ಸೂಕ್ಷ್ಮಶಕ್ತಿಯೆ ಬೇಕು. ಮುಂದುಮುಂದಕ್ಕೆ ಹೋದಂತೆ ಕೊನೆಗೆ ನೋಡುವ ಶಕ್ತಿಯೆ ಇಲ್ಲದಂತಾಗುವವರೆಗೂ ಇದೆ ತತ್ತ್ವ ಅನ್ವಯಿಸುವುದು. ಇಷ್ಟಾದರೂ ಅದರಾಚೆಗೆ ನೋಡತಕ್ಕ ವಸ್ತು ಉಳಿದೇ ಉಳಿಯುವುದು. ಅದು ಚೇತನತೆಯ ರೂಪದಲ್ಲಿ ಕಾಣಿಸಿಕೊಳ್ಳುವುದು. ಮುಂದೆ ಇದೂ ಇಲ್ಲದಂತಾಗಿ ಅಸ್ತಿತ್ವದ ಅರಿವು ಕೂಡ ಅಪ್ಪಣೆ ತೆಗೆದು ಕೊಳ್ಳುವುದು. ಆಗ ಏನಾಗುವುದು? ಅದೇ – ನಾಸ್ತಿತ್ವ, ಲಯಾವಸ್ಥೆ. ಅದೇ ಮೂಲಸ್ಥಿತಿ. ನಿಜವಾಗಿಯೂ ಇದನ್ನು ಅನುಭವಿಸುವವರೆಗೆ ಇದು ತಿಳಿಯುವುದು ಕಷ್ಟ. ಅಷ್ಟೇ ಅಲ್ಲ, ಆ ಅವಸ್ಥೆಯಲ್ಲಿ ಸಂಪೂರ್ಣ ಮುಳುಗಿ ಹೋಗುವ ವರೆಗೆ ಇದು ತಿಳಿಯುವುದಿಲ್ಲ. ಆದರೆ ಈ ನಾಸ್ತಿತ್ವವೂ ಕೊನೆಯದಲ್ಲ. ಅದಕ್ಕಿಂತ ಮುಂದೆ ಹೋಗಬೇಕು.

ಇನ್ನೂ ಒಂದು ಪ್ರಶ್ನೆ. ಧಾರೆಗಳು ಮೂಲದಿಂದ ಅವತರಣಮಾಡುತ್ತ ಬಂದಂತೆಲ್ಲ ಸ್ಥೂಲವಾಗುತ್ತ ಏಕೆ ನಡೆದುವು? ಇದು ತುಂಬ ಜಟಿಲವಾದ ಪ್ರಮೇಯ. ಒಬ್ಬ ಮನುಷ್ಯನು ಬೆಟ್ಟದ ತುದಿಯಿಂದ ಕೆಳಕ್ಕೆ ಹಾರಿದಾಗ ನಡುವೆಯೆ ಅರೆಜೀವವೇಕಾಗುವುದು? ಪೃಥ್ವಿಯ ಆಕರ್ಷಣದಿಂದ ಎಂದು ಸಾಮಾನ್ಯ ತಿಳಿವಳಿಕೆ. ಆದರೆ ನಾನು ಹೇಳುವುದು ಹೀಗೆ : ಮೇಲಿನಿಂದ ಕೆಳಗಡೆ ಬೀಳಬೇಕೆನ್ನುವ ವಿಚಾರ ಬರುತ್ತಲೇ ಅದರ ಕಾವು ಕೆಳಗಡೆ ಇಳಿಯ ತೊಡಗಿ ಜಿಗಿತದ ಧಕ್ಕೆಯಿಂದ ಶರೀರದ ಹೊರಗೆ ಹೊರಡಲಾರಂಭಿಸುವುದು. ಇದೇ ಅವಸ್ಥೆ ಕೆಳಗಿಳಿದ ಧಾರೆಗಳದು. ಸ್ಥೂಲತೆಯೆಂದರೆ ಘನತ್ವ. ಅದರಲ್ಲಿ ಜೀವನವಿರುವುದಿಲ್ಲ. ದೈವೀ ಪ್ರವಾಹದಲ್ಲಿ ಜೀವನವಿರುವುದಿಲ್ಲವೆಂಬ ಮಾತನ್ನು ಜನರು ಒಪ್ಪಲಾರರು. ಖನಿಜಗಳು, ಸಸ್ಯಗಳು ಹಾಗು ಪ್ರಾಣಿವರ್ಗ ಇವೆಲ್ಲ ದೈವೀಸೃಷ್ಟಿಯೆ ಆಗಿದ್ದರೂ ಎಲ್ಲವುಗಳಲ್ಲಿ ಜೀವವಿರುವುದಿಲ್ಲ. ಒಂದು ವೇಳೆ ಇದೆಯೆಂದು ಒಪ್ಪಿಕೊಂಡರೂ ಅದು ಸುಪ್ತಾವಸ್ಥೆಯಲ್ಲಿದೆ. ಇದೇ ಮಾತು ಧಾರೆಗಳಿಗೂ ಅನ್ವಯಿಸುವುದು. ಆದರೆ ಮನುಷ್ಯನು ಅವುಗಳೊಂದಿಗೆ ತನ್ನ ಕರ್ಮಗಳನ್ನು ಜೋಡಿಸುವುದರಿಂದ ಅವುಗಳಲ್ಲಿ ಸಾರೂಪ್ಯ ಹೊಂದುತ್ತಾನೆ.

ಪ್ರಾರ್ಥನೆಯು ಅಗತ್ಯವಾದ ತತ್ತ್ವವೆಂದು ಸಿದ್ಧವಾದಮೇಲೆ ಅದನ್ನು ಯಾವ ಶಬ್ದಗಳಲ್ಲಿ ಮಾಡಬೇಕೆಂಬುದನ್ನು ತಿಳಿಯುವುದು ಅವಶ್ಯಕ. ಈ ಕೆಳಗಿನ ಚಿಕ್ಕ ಪ್ರಾರ್ಥನೆ ಅಭ್ಯಾಸಿಗೆ ಅತ್ಯಾವಶ್ಯಕವೆಂದು ನನ್ನ ಭಾವನೆ. ಇನ್ನೂ ಬೇರೆ ಅನೇಕ ರೀತಿಯಿಂದ ಪ್ರಾರ್ಥನೆ ಮಾಡಬಹುದು. ಆದರೆ ಈ ಸಂಕ್ಷೇಪ ಪ್ರಾರ್ಥನೆಯೆ ನನಗೆ ಇಷ್ಟ :

"ಓ ನಾಥ! ನೀನೇ ಮಾನವಜೀವನದ ಗುರಿ.
ನಮ್ಮ ಇಚ್ಛೆಗಳು ಆತ್ಮೋನ್ನತಿಯಲ್ಲಿ ಬಾಧಕಗಳಾಗಿವೆ.
ನೀನೇ ನಮ್ಮೆಲ್ಲರ ಏಕಮಾತ್ರ ಸ್ವಾಮಿ ಹಾಗು ಇಷ್ಟದೈವ.
ನಿನ್ನ ಸಹಾಯವಿಲ್ಲದೆ ನಿನ್ನ ಪ್ರಾಪ್ತಿಯು ಅಸಂಭವ."

ಸೃಷ್ಟಿಗೆ ಮೊದಲು ಎಲ್ಲೆಲ್ಲೂ ಅತ್ಯಂತ ಪ್ರಶಾಂತಸ್ಥಿತಿಯಿದ್ದಿತು. ಸೃಷ್ಟಿಯು ಈಗಿರುವ ರೂಪದಲ್ಲಿ ಪ್ರಕಟವಾದಾಗ ಅದರ ಕೇಂದ್ರ ಬಿಂದುವು ಎಲ್ಲರ ಹೃದಯದಲ್ಲಿಯೂ ಪೂರ್ಣವಾಗಿ ನೆಲೆಗೊಂಡಿದ್ದಿತು. ಅನಂತದ ಒಂದು ಭಾಗವಾಗಿದ್ದ ಈ ಬಿಂದುವು ನಮ್ಮ ದೃಷ್ಟಿಯನ್ನು ಮೂಲದ ಕಡೆಗೆ ಹೊರಳಿಸಿತು. ಪ್ರಾರ್ಥನೆಯಲ್ಲಿ ನಾವು ಆ ಮೂಲವನ್ನು ತಲುಪಲು ಯತ್ನಿಸುವೆವು. ನಾವು ನಮ್ಮೊಳಗೆ ಅಂಥ ಸ್ಥಿತಿಯನ್ನು ಪಡೆದಾಗಲೇ ಅದು ಸಾಧ್ಯವಾಗುವುದು. ಅದಕ್ಕೆ ಅಭ್ಯಾಸ ಬೇಕು. ಸರಳವೂ ಶಾಂತವೂ ಆದ ಆ ದೈವೀ ಇಚ್ಛೆಗೆ ನಮ್ಮನ್ನು ಸಮರ್ಪಿಸಿಕೊಳ್ಳುವುದರಿಂದ ಆ ಅವಸ್ಥೆಯನ್ನು ಹೊಂದಬಹುದು. ತೋರಿಕೆಗೆ ಇದು ಬಹಳ ಕಠಿಣವೆಂದು ಕಂಡರೂ ವಾಸ್ತವವಾಗಿ ಹಾಗಿಲ್ಲ. ಆದರೆ ಯಾರಿಗೆ? ಅದರೊಳಗೆ ನುಗ್ಗಲು ಹಂಬಲಿಸುವವರಿಗೆ ಮಾತ್ರ. ಮನುಷ್ಯನು ತನ್ನಲ್ಲಿ ಈ ಹಂಬಲವನ್ನು ಹುಟ್ಟಿಸಿಕೊಂಡಾಗ ಆತನು ಪ್ರಾರ್ಥನೆಯ ಸ್ಥಿತಿಯಲ್ಲಿ ಇರುವನು. ಯಾರಾದರೂ, ಒಂದು ಕ್ಷಣಕಾಲವೇ ಏಕಾಗಲೊಲ್ಲದು, ಈ ಸ್ಥಿತಿಗೆ ಬಂದು ಮುಟ್ಟಿದರೆ ಆತನ ಪ್ರಾರ್ಥನೆಯು ಸ್ವೀಕೃತವಾಗುವುದು. ಇದನ್ನು ಸಾಧಿಸಲು ದೈನಂದಿನ ಅಭ್ಯಾಸದ ಅಗತ್ಯವಿದೆ.

# ನಿಯಮ – ೩

**ಪ್ರತಿಯೊಬ್ಬನೂ ಭಗವಂತನನ್ನು ತಲುಪಿ ಆತನಲ್ಲಿ ಲಯ ಹೊಂದಿ ಶಾಶ್ವತವಾಗಿ ನೆಲೆಸಬೇಕೆಂಬ ಧ್ಯೇಯವನ್ನಿಟ್ಟುಕೊಳ್ಳಬೇಕು. ಧ್ಯೇಯವು ಪ್ರಾಪ್ತವಾಗುವ ವರೆಗೆ ಸಮಾಧಾನ ಹೊಂದಬಾರದು.**

ಪ್ರತಿಯೊಬ್ಬ ಮನುಷ್ಯನೂ ತನ್ನ ಧ್ಯೇಯವನ್ನು ಪಡೆಯಲು ಮೊದಲೇ ದೃಢಸಂಕಲ್ಪನಾಗುವುದು ಆವನ ಕರ್ತವ್ಯ. ಅದರಿಂದ ಆತನ ಇಚ್ಛೆಗೆ ಬಲ ದೊರೆತು ಅಲ್ಲಿಯ ವರೆಗೆ ತಲುಪಲು ದಾರಿಯಾಗುವುದು. ಈಶ್ವರನ ವಿಷಯದಲ್ಲಿ ಯಾರು ಅತ್ಯುನ್ನತವಾದ ಸ್ಥಿತಿಯನ್ನು ತಮ್ಮ ಗುರಿಯಾಗಿಟ್ಟು-ಕೊಂಡಿಲ್ಲವೋ ಅವರು ಆ ಅಮೂಲ್ಯ ಆಧ್ಯಾತ್ಮಸಂಪತ್ತಿನಿಂದ ವಂಚಿತರಾಗಿ ಉಳಿದರೆಂದು ಸರ್ವಸಾಮಾನ್ಯವಾಗಿ ಕಂಡುಬಂದಿದೆ. ಏಕೆಂದರೆ, ಅಲ್ಲಿಗೆ ಮುಟ್ಟುವ ಮೊದಲು, ನಡುದಾರಿಯಲ್ಲಿ ತಮಗೆ ಸಿಕ್ಕ ವಸ್ತುವನ್ನೇ ಕೊನೆಯದೆಂದು ತಿಳಿದು ಅಲ್ಲಿಯೆ ನಿಂತುಬಿಟ್ಟರು. ಅದನ್ನೇ ಸರ್ವಸ್ವವೆಂದು ಭಾವಿಸಿದರು. ಗುರಿಯನ್ನು ನಿಶ್ಚಿತಗೊಳಿಸಲಾರದ ಕಾರಣ ಅದೆಷ್ಟು ಹಾನಿಯಾಯಿತು, ನೋಡಿ. ಲೌಕಿಕವಿಷಯಗಳಲ್ಲಾದರೂ ಎಲ್ಲಿಯ ವರೆಗೆ ಮನುಷ್ಯನು ತನ್ನ ಧ್ಯೇಯವನ್ನು ಎದುರಿಗಿಟ್ಟುಕೊಳ್ಳುವುದಿಲ್ಲವೋ ಅಲ್ಲಿಯ ವರೆಗೆ ಅದರ ಪ್ರಾಪ್ತಿಗಾಗಿ ಹಾರ್ದಿಕ ಪ್ರಯತ್ನ ನಡೆಯಲಾರದು. ದೋಣಿಯಲ್ಲಿ ಚುಕ್ಕಾಣಿಯಿಲ್ಲದಿದ್ದರೆ ಅದು ಅಭೀಷ್ಟದಿಶೆಯಲ್ಲಿ ಚಲಿಸಲಾರದೆಂಬುದು ಎಲ್ಲರಿಗೂ ತಿಳಿದ ಮಾತು. ನಮ್ಮ ಶರೀರವನ್ನು ದೋಣಿಯೆಂದು ತಿಳಿದು ಅದು ಚಲಿಸುವ ಸ್ಥಳವನ್ನು ಆಧ್ಯಾತ್ಮವೆಂಬ ನದಿಗೆ ಹೋಲಿಸಿದರೆ, ನದಿಯಲ್ಲಿ ದೋಣಿಯನ್ನು ಸಾಗಿಸಿಕೊಂಡು ಹೋಗಲು ಚುಕ್ಕಾಣಿ ಬೇಕೇ ಬೇಕು. ಆಧ್ಯಾತ್ಮಮಾರ್ಗದಲ್ಲಿ ನಮ್ಮ ಇಚ್ಛಾಶಕ್ತಿಯೆ ಚುಕ್ಕಾಣಿ. ಅದೇ ನಮ್ಮನ್ನು ಗುರಿಯವರೆಗೆ ಒಯ್ಯಲು ಸಹಾಯ ಮಾಡುವುದು. ನಿಸ್ಸಂದೇಹವಾಗಿ ದಾರಿಯಲ್ಲಿ ಅಸಂಖ್ಯ ಸುಳಿಗಳಿವೆಯಾದರೂ ನಮ್ಮ ಇಚ್ಛಾಶಕ್ತಿ ಹಾಗು

ವಿಶ್ವಾಸದ ಬಲದಿಂದ ಅವೆಲ್ಲವನ್ನೂ ದಾಟಿ ಸರಿಯಾದ ಮಾರ್ಗದಲ್ಲಿ ಗುರಿಯ ಕಡೆಗೆ ಸಾಗುವೆವು. ನಮ್ಮ ದೃಷ್ಟಿಯು ಆಧ್ಯಾತ್ಮದ ಮೇಲೆ ನೆಲೆಸಿರುವುದರಿಂದ ನಾವು ಅತ್ಯುನ್ನತ ಗುರಿಯನ್ನು ಇರಿಸಿಕೊಳ್ಳುವೆವು. ಅಂಥ ಗುರಿ ಪರಮಾತ್ಮ ತತ್ತ್ವಸೂಚಕವೇ ಆಗಬಲ್ಲುದು. ಅಲ್ಲಿಯವರೆಗೆ ತಲುಪಲು ಯತ್ನಿಸುವುದು ಮನುಷ್ಯನ ಕರ್ತವ್ಯವಾಗಿದೆ. ಈ ಗುರಿಯು ವಿಚಾರದಲ್ಲಿ ದೃಢವಾಗಿ ನೆಲೆಗೊಳ್ಳುವ ವರೆಗೆ ಮಾರ್ಗಕ್ರಮಣವು ಅತ್ಯಂತ ಕಠಿಣವಾಗುವುದು. ಭಕ್ತನು ತನ್ನ ಕಡೆಗೆ ಬರುವ ಪ್ರಯತ್ನ ನಡೆಸಿರುವನೆಂದು ಭಗವಂತನಿಗೆ ಮನದಟ್ಟಾ-ದಾಗಲೇ ಆತನ ಸಹಾಯ ಬಂದೊದಗುವುದು. ಪರಮಾತ್ಮನಲ್ಲಿ ಒಂದು ತರಹದ ಕ್ಷೋಭವುಂಟಾಗುವುದೇ ನಿಮ್ಮ ಚಿತ್ತವನ್ನು ಅವನಲ್ಲಿ ಪ್ರತಿಷ್ಠಿಸಿದ್ದೀ-ರೆಂಬುದರ ಸೂಚನೆ. ಇನ್ನೊಂದು ಉಪಮೆಯನ್ನು ಕೊಡಬಹುದು. ಭಗವಂತನು ಪ್ರಿಯತಮ, ಭಕ್ತನು ಪ್ರೇಮಿ. ಇವರಿಬ್ಬರ ನಡುವಿನ ಅಂತರ ಕಡಮೆಯಾಗತೊಡಗಿ ದೂರವೆಂದು ಭಾಸವಾಗುತ್ತಿದ್ದ ಇಬ್ಬರ ಸಂಬಂಧವು ಸಮೀಪತರವಾಗುತ್ತ ನಡೆಯಿತು. ಬರಬರುತ್ತ ಈ ವಿಚಾರವಾದರೂ ಮರೆತು ಹೋಯಿತು. ಭೇದಭಾವ ಸಂಪೂರ್ಣವಾಗಿ ಅಳಿಯಿತು. ಆತನಲ್ಲಿ ನಾವು ಐಕ್ಯರಾಗಿದ್ದೇವೆಂದು ತೋರತೊಡಗಿತು. ಕ್ರಮೇಣ ಈ ಭಾವನೆಯೂ ಕರಗಿಹೋಗಿ ಸೃಷ್ಟಿಯ ಆರಂಭದಲ್ಲಿದ್ದ ಗುಪ್ತಚಲನದ ರೂಪ ತಾಳಿತು. ಅದರಲ್ಲಿ ನಾವು ಸಂಪೂರ್ಣ ವಿಸ್ಮಾರಹೊಂದಿದೆವು. ಈ ರೀತಿ ನಮ್ಮ ಲಯವು ಅದರಲ್ಲಿ ಶಾಶ್ವತವಾಯಿತು. ಅನಂತ ಸಾಗರದಲ್ಲಿ ನಮ್ಮ ಈಜು ಪ್ರಾರಂಭ ವಾಯಿತು. ನಮ್ಮಲ್ಲಿ ಹೊಸ ಜೀವನ ಮೂಡಿತು. ನಾವು ಈಜುತ್ತಿರುವ ಸಾಗರದ ಪ್ರಭಾವವೇ ಈ ಹೊಸ ಜೀವನ. ನಮ್ಮ ಇಚ್ಛೆಯ ದೃಢತೆ ಹಾಗು ಗುರಿಯನ್ನು ಮುಟ್ಟಬೇಕೆಂಬ ಅಚಲ ನಿರ್ಧಾರ – ಇವು ನಮಗೆ ಸಹಾಯಕವಾದುವು. ಇದರಿಂದಾಗಿ ನಾವು ಅಂತಿಮಸ್ಥಿತಿಯಲ್ಲಿ ಸ್ಥಿರವಾಗಿ ನೆಲೆಸಿದೆವು. ಈ ಪ್ರೇಮವು ಅದೆಷ್ಟು ಕಠಿಣವಾಗಿದ್ದಿತು ! ಕೇವಲ ಸರಿಯಾದ ಗುರಿಯನ್ನಿಟ್ಟುಕೊಳ್ಳುವುದು ಮತ್ತು ದೃಢನಿರ್ಧಾರದೊಂದಿಗೆ ಅದರ ಕಡೆಗೆ ಮುಂದುವರಿಯುವುದು– ಇವೇ ಇದನ್ನು ಸುಲಭಗೊಳಿಸಿದುವು. ಗುರಿಯು ಯಾವಾಗಲೂ ದೃಷ್ಟಿಪಥದಲ್ಲಿದ್ದುದರಿಂದ ಅದರ ಕಡೆಗೆ ಸಾಗಬೇಕೆಂಬ ಆಸಕ್ತಿಯುಂಟಾಯಿತು. ಅದರಂತೆ ನಮ್ಮ ಪ್ರಯತ್ನ ನಡೆಯಿತು. ಯಾವುದೇ

ಕೆಲಸದಲ್ಲಿ ಆಸಕ್ತಿಯುಂಟಾದರೆ ಅದನ್ನು ಮತ್ತೆ ಮತ್ತೆ ಮಾಡಬೇಕೆನ್ನಿಸುವುದು. ಈ ಅಭ್ಯಾಸವು ಬಲಿತಮೇಲೆ ಅದೊಂದು ಚಟವಾಗಿ ಪರಿಣಮಿಸಿ ಅದನ್ನು ಮಾಡದೆ ಶಾಂತಿ ದೊರೆಯುವುದಿಲ್ಲ. ಅಭ್ಯಾಸ ಮಾಡುತ್ತ ಮಾಡುತ್ತ ನಮ್ಮ ಅಂತಃಕರಣವು ಅದರಲ್ಲಿ ಸಂಪೂರ್ಣವಾಗಿ ಆಸಕ್ತವಾಗುವುದು. ನಮ್ಮ ಸಮಗ್ರ ಚೈತನ್ಯವನ್ನೂ ಅದರಲ್ಲಿ ತೊಡಗಿಸಿ ಮನಸ್ಸಿನ ಎಲ್ಲ ವೃತ್ತಿಗಳನ್ನೂ ಅದರತ್ತ ಹೊರಳಿಸಿದೆವು. ಅದನ್ನು ಪಡೆಯುವ ಹಂಬಲ ಹೆಚ್ಚುತ್ತ ಹೋಯಿತು. ಇದೇ ಅಶಾಂತಿಯೆಂಬ ಹೆಸರನ್ನು ಪಡೆಯಿತು. ಹೀಗೆ, ತೀವ್ರ ಹಂಬಲ ಅಥವಾ ಅಶಾಂತಿಯು ಗಂತವ್ಯವನ್ನು ತಲುಪಲು ತುಂಬ ಸಹಾಯಕವಾಗುವು- ದೆಂಬುದು ಅನುಭವದಿಂದ ಸಿದ್ಧವಾಗುವುದು. ಸೃಷ್ಟಿಯ ಸಮಯ ಬಂದಾಗ ಆ ಸುಪ್ತಚಲನವು ತನಗೋಸ್ಕರ ಹಾದಿಮಾಡಿಕೊಳ್ಳಲು ತವಕಪಡುತ್ತಿತ್ತು. ಅದರ ಕ್ಷೋಭವೇ ಅದಕ್ಕೆ ಹಾದಿಮಾಡಿಕೊಟ್ಟಿತು. ಅದರಂತೆಯೇ ನಮ್ಮ ಈ ಅಶಾಂತಿ ನಮಗೆ ಗುರಿಯನ್ನು ತಲುಪಲು ದಾರಿಮಾಡಿಕೊಡುವುದು.

# ನಿಯಮ – ೪

**ನಿಮ್ಮ ಜೀವನವು ನಿಸರ್ಗದೊಡನೆ ಸಮರಸವಾಗುವಂತೆ ಸಾಧಾರಣವಾಗಿರಲಿ.**

ಈ ನಿಯಮದಲ್ಲಿ ಅಡಕವಾದ ವಿಷಯ ತುಂಬ ಗಹನವಾದುದು. ಸರಳತೆ ನಿಸರ್ಗದ ಜೀವಾಳ. ಅದು ಪರತತ್ತ್ವದಲ್ಲಿ ಸುಪ್ತವಾಗಿದ್ದ ಸ್ಥಿತಿಯ ಛಾಯೆ. ಬೆಳವಣಿಗೆಗೆ ಅದೇ ಕಾರಣ. ಅದನ್ನು ಆತ್ಮದ ಸಾರಸರ್ವಸ್ವವೆಂದರೆ ಹೆಚ್ಚು ಸಮಂಜಸವಾದೀತು. ವಾಸ್ತವವಾಗಿ ಇದು ನಿಸರ್ಗದ ಜೀವಸತ್ತ್ವ. ಇಲ್ಲಿಂದಲೇ ಎಲ್ಲ ಕ್ರಿಯೆಯೂ ಆರಂಭವಾಗುವುದು. ಇದೇ ನಿಜತತ್ತ್ವ. ಇಲ್ಲಿಂದ ಮುಂದೆ ಮಾಯೆಯ ವಲಯವಿದೆ. ಸಾಮಾನ್ಯವಾಗಿ ಜನರು ಮಾಯೆಯ ಕ್ಷೇತ್ರದಲ್ಲಿಯೆ ಇದ್ದು ಅದರಂತೆ ಕಾರ್ಯಮಾಡುವರು. ಮಾಯೆಯು ಸೃಷ್ಟಿಯ ನಾಮ-ರೂಪಗಳಿಗೆ ಕಾರಣವಾಯಿತೆನ್ನಬಹುದು. ಇದು ಮನುಷ್ಯನಲ್ಲಿಯೂ ಬೆಳೆದು ಗ್ರಂಥಿಗಳ ರೂಪತಾಳಿ ಬಿಚ್ಚಲು ಕಠಿಣವಾಯಿತು. ಅದನ್ನು ಬಿಡಿಸಲು ವಿಶಿಷ್ಟ ಇಚ್ಛಾಶಕ್ತಿಯೆ ಬೇಕು. ಇದರಲ್ಲಿ ಸಿಲುಕಿ ಮನುಷ್ಯನು ಮೇಲುನೋಟಕ್ಕೆ ಒಂದು ಸ್ಥೂಲರೂಪವನ್ನು ಪಡೆದನು. ಬಾಹ್ಯ ಪರಿಸರವೂ ಅವನ ಮೇಲೆ ತನ್ನ ಪ್ರಭಾವ ಬೀರಲಾರಂಭಿಸುವುದು. ಕ್ರಿಯೆ-ಪ್ರತಿಕ್ರಿಯೆಗಳುಂಟಾಗಿ ಪರಿಸ್ಥಿತಿ ಕೆಡುತ್ತಹೋಗುವುದು. ಇದರ ಪರಿಣಾಮವಾಗಿ ಸರಳತೆಯು ಅದರಲ್ಲಿ ಪೂರ್ಣ ಮರೆಯಾಗುವುದು. ಹೀಗೆ ಇವೆಲ್ಲ ಒಂದು ರೀತಿಯ ಜಾಲಗಳಾಗಿ ಪರಿಣಮಿಸಿ ಮನುಷ್ಯನು ಅವುಗಳಲ್ಲಿ ಸಿಕ್ಕಿ ಬೀಳುವನು.

ಸೃಷ್ಟಿಗೆ ಮುಂಚೆ ಎಲ್ಲೆಲ್ಲೂ ಆವರಿಸಿದ್ದ ಶಾಂತಿಯು ಕ್ಷೋಭದಿಂದ ಕದಡಿತು. ರೂಪಗಳು ಕಾಣಿಸಿಕೊಂಡವು. ಎಲ್ಲ ವಸ್ತುಗಳೂ ತಮ್ಮ ಮೂಲ ಶಕ್ತಿಯ ಛಾಯೆಯನ್ನು ತಮ್ಮೊಡನೆ ತಂದುದಾದ ಕಾರಣ ಕ್ಷೋಭದಿಂದಾಗಿ ಗತಿಶೀಲತೆಯನ್ನು ಪಡೆದ ವಿಶ್ವಶಕ್ತಿಗಳಂತೆಯೆ ಅವುಗಳ ಕಾರ್ಯವೂ ಆಗಿದೆ.

ಈ ರೀತಿ ಒಂದು ಜೇಡದ ಬಲೆಯಂತೆ ನಿರ್ಮಾಣವಾಗತೊಡಗಿತು. ಅದರ ಒಂದೊಂದು ಎಳೆಯು ಪ್ರತಿಯೊಂದು ಕಣವೂ ಶಕ್ತಿಯನ್ನು ಪಡೆದಿದೆ. ಅವೆಲ್ಲ ಮೂಲಕ್ಕೆ ತಿರುಗಿಹೋಗುವವರೆಗೂ ಅದರ ರೂಪ ಹಾಗೆಯೆ ಇರುವುದು. ಮನುಷ್ಯನ ಸೃಷ್ಟಿಯಾದಾಗ ಆತನ ಸ್ಥಿತಿಯು ಸುಪ್ತ ರೂಪದಲ್ಲಿದ್ದಿತು. ಆತನು ತಂದಿದ್ದ ಎಲ್ಲ ಘಟಕಗಳು ಇನ್ನೂ ಪ್ರಕಟವಾಗಿರಲಿಲ್ಲ. ಸಾವಕಾಶ ವಾಗಿ ಆತನಲ್ಲಿದ್ದ ಶಕ್ತಿಗಳು ವಿಕಾಸಗೊಳ್ಳಲಾರಂಭಿಸಿದುವು. ಆತನ ಸೃಷ್ಟಿಗೆ ಮುಂಚೆ, ಪ್ರಥಮ ಕ್ಷೋಭವನ್ನು ಹುಟ್ಟಿಸಿದ ಅದೇ ಮೂಲ ಕಲ್ಪನೆಯೆ ಆತನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬೆಳೆಯಿತು. ದೈವೀ ಕಾರ್ಯಗಳಂತೆಯೇ ಅದರ ಕಾರ್ಯಗಳೂ ನಡೆದುವು. ಆದರೆ ದೈವೀ ಇಚ್ಛೆಯು ಕೆಳಮೊಗವಾಗಿ ದ್ದುದರಿಂದ ಮನುಷ್ಯನ ಕಲ್ಪನೆಯು ಮೂಲಸ್ಥಿತಿಯ ಅಥವಾ ಅತ್ಯುನ್ನತ ಸ್ಥಿತಿಯ ವಿರುದ್ಧದಿಶೆಯನ್ನು ಹಿಡಿದು ತನ್ನದೇ ಆದ ಸೃಷ್ಟಿಯನ್ನು ನಿರ್ಮಿ- ಸಿತು. ವಿರುದ್ಧ ದಿಶೆಯನ್ನು ಹಿಡಿದುದರಿಂದ ಆತನ ಎಲ್ಲ ಕಾರ್ಯಗಳೂ ನಿಸರ್ಗದ ವಿರುದ್ಧವಾಗಿಯೆ ನಡೆದುವು. ಇದರಿಂದ ವೈಯಕ್ತಿಕ ಜಾಲವೂ ಆತನಲ್ಲಿ ರಚಿತವಾಯಿತು. ಇವೆರಡರ ಕಾರ್ಯಗಳೂ ಒಂದೇ ತೆರನಾಗಿದ್ದರೂ ಶುದ್ಧತೆಯಲ್ಲಿ ಮಾತ್ರ ಮನುಷ್ಯನಲ್ಲಿದ್ದುದು ದೈವೀಕಲ್ಪನೆಗಿಂತ ಕೆಳಮಟ್ಟದ್ದಾ ಗಿದ್ದಿತು. ದೈವೀ ಕಲ್ಪನೆಯು ತಾನು ಇಟ್ಟುಕೊಂಡಿದ್ದ ಕಾಲಪರಿಮಿತಿಯು ಮುಗಿದಾಗಲೇ ಈಶಸೃಷ್ಟಿಯು ಸಂಹಾರವಾಗುವುದು. ಅಂತೆಯೇ ಮನುಷ್ಯ ನಾದರೂ ತನ್ನ ಸೃಷ್ಟಿಜಾಲವನ್ನು ನಿರ್ಮಿಸಲು ಕಾರಣವಾದ ಕಂಪನಗಳನ್ನು ಕೊನೆಗೊಳಿಸಿದಾಗಲೇ ಆತನ ಸೃಷ್ಟಿಯು ಕೊನೆಗೊಳ್ಳುವುದು. ಮನುಷ್ಯನು ನಿರ್ಮಿಸಿದ ಕಂಪನಗಳು ಮೂಲಸ್ಥಿತಿಗೆ ವಿರದ್ಧವಾಗಿದ್ದ ಕಾರಣ ಮೂಲಕಂಪನ ಗಳ ಸ್ಥೂಲರೂಪವು ಆತನಲ್ಲಿಳಿದು ಬಂದಿತು. ಮೂಲ ಕಂಪನಗಳಾದರೋ ಸೂಕ್ಷ್ಮತರವಾಗಿದ್ದುದರಿಂದ ತಮ್ಮ ಮೂಲಗುಣವನ್ನು ಕಾಯ್ದುಕೊಂಡುವು. ಇವೆರಡು ವಿಧದ ಕಂಪನಗಳಲ್ಲಿರುವ ವ್ಯತ್ಯಾಸವೇನೆಂದರೆ, ಮಾನವೀಯ ಕಂಪನಗಳು ತಲೆಕೆಳಗಾಗಿವೆ; ಮೂಲಕಂಪನಗಳು ಮೊದಲಿದ್ದಂತೆಯೆ ಇವೆ. ಮೂಲದಲ್ಲಿದ್ದ ಎಲ್ಲ ಶಕ್ತಿಗಳೂ ಮನುಷ್ಯನಲ್ಲಿವೆ. ಏಕೆಂದರೆ, ಪ್ರಥಮ ಕ್ಷೋಭದಲ್ಲಿದ್ದ ಎಲ್ಲ ಕಣಗಳೂ ಆತನ ಕಲ್ಪನಾಶಕ್ತಿಯಲ್ಲಿದ್ದುವು. ಆದರೆ ಇದರಲ್ಲಿ ಅಧೋಮುಖತೆ ಇದ್ದುದರಿಂದ ಇದರ ಕಾರ್ಯಗಳು ವೈಪರೀತ್ಯ

ಹೊಂದಿ ಶಕ್ತಿಗಳ ಉಪಯೋಗವು ವಿರುದ್ಧ ದಿಶೆಯಲ್ಲಾಯಿತು. ಇವೆಲ್ಲವೂ ಕೂಡಿ ಜಟಿಲತೆಯ ಬೆಳವಣಿಗೆಗೆ ಕಾರಣವಾದುವು. ಅದರ ಪ್ರತಿಯೊಂದು ಕಣವೂ ಈಶಸೃಷ್ಟಿಯಿಂದ ಶಕ್ತಿಯುತವಾಯಿತು. ಈ ರೀತಿ ಮನುಷ್ಯನು ತನ್ನದೇ ಆದ ಸೃಷ್ಟಿಯೊಂದನ್ನು ತನ್ನಲ್ಲಿ ನಿರ್ಮಿಸಿಕೊಂಡನು. ಆತನ ಪ್ರತಿ-ಯೊಂದು ಅಂತರಿಂದ್ರಿಯವೂ ಒಂದು ಸಜೀವಪ್ರಾಣಿಯಂತೆ ಚಲನಹೊಂದಿ ಬಲಗೊಂಡು ಪ್ರತಿಭಟಿಸತೊಡಗಿತು. ಜೊತೆಗೆ ವಿಚಾರ, ಮನಸ್ಸುಗಳು ಸಹಕರಿಸತೊಡಗಿದುವು. ಇದರ ಪರಿಣಾಮವಾಗಿ ಆತನಲ್ಲಿ ವಿಚಾರಗಳ ಜಗತ್ತೇ ನಿರ್ಮಾಣವಾಯಿತು. ಸಮತೆಯು ಕದಡಿಹೋಗಿ ದ್ವಂದ್ವವು ಆರಂಭವಾಯಿತು. ಒಂದು ವಿಚಾರವು ಬಯಲಿನಲ್ಲಿ ತಿರುಗಾಡಲು ಹೋಗಬೇಕೆಂದು ಪ್ರೇರಿಸುವುದು. ಇನ್ನೊಂದು, ಚಳಿಯು ಬಹಳವಿದ್ದುದರಿಂದ ಶೀತವಾದೀತೆಂದು ತಡೆಗಟ್ಟುವುದು. ಮೂರನೆಯದು ಮತ್ತೊಂದು ಮಾತನ್ನು ಹೇಳಿದರೆ ನಾಲ್ಕನೆಯದು ಮಗದೊಂದನ್ನು ಹೇಳುವುದು. ಐದನೆಯದು ಹಣಗಳಿಸಲು ಹೇಳಿದರೆ ಆರನೆಯದು ದುಡಿಯಲು ಸೂಚಿಸುವುದು. ಏಳನೆಯದು ಪರಿಶ್ರಮ ಮಾಡದಿರಲು ಬೋಧಿಸುವುದು. ಎಂಟನೆಯದು, ಯಾವನಾದರೊಬ್ಬ ಶ್ರೀಮಂತನ ಗೆಳೆತನ ಕಟ್ಟಿ ಆತನ ಮನವೊಲಿಸಿ ಎಲ್ಲ ಹಣ ಪಡೆಯುವಂತೆ ಹೇಳುವುದು. ಮತ್ತೊಂದು, ಮದುವೆಯಾಗಿ ಮಕ್ಕಳನ್ನು ಪಡೆಯುವವರೆಗೆ ಎಲ್ಲವೂ ವ್ಯರ್ಥವೆಂದು ಅಭಿಪ್ರಾಯಕೊಡುವುದು. ಸರಿ, ಈಗ ಮದುವೆಯ ಚಿಂತೆಗೆ ಮೊದಲಾಯಿತು. ಮದುವೆಯೂ ಆಯಿತು. ಮಕ್ಕಳಾದರು. ಅವರ ವಿದ್ಯಾಭ್ಯಾಸದ ಚಿಂತೆ ಹತ್ತಿತು. ಮಕ್ಕಳು ದೊಡ್ಡವರಾದರು. ಯಾವಳೋ ಜಮೀಲಾ ಎಂಬುವವಳು ಸೊಗಸಾಗಿ ನರ್ತಿಸುವಳೆಂಬುದನ್ನು ಕೇಳಿ ನಾಟ್ಯ ಮಂದಿರಕ್ಕೆ ಹೋಗುವ ಆಸೆಯಾಯಿತು. ಹೋಗಿ ನರ್ತನ ನೋಡಿಯೂ ಆಯಿತು. ಒಮ್ಮೆ ಅಲ್ಲ, ಹಲವಾರು ಬಾರಿ ಹೋಗಿ ಬಂದುದಾಯಿತು. ಜಮೀಲಾಳ ಅಂಗಚಲನಗಳು ನರ್ತನವನ್ನು ಮತ್ತೆ ಮತ್ತೆ ನೋಡಲು ವಿವಶ-ಗೊಳಿಸಿದುವು. ಜಮೀಲಾಳ ಪ್ರತಿಯೊಂದು ಚಲನವಲನವೂ ಆತನ ಮನಸ್ಸನ್ನು ಸೆಳೆದುವು. ಪ್ರೇಮ ಅಂಕುರಿಸಿತು. ಈಗ ಯಾವಾಗಲೂ ಅದೇ ವಿಚಾರ. ಇದರಿಂದ ಆ ಸ್ಥಿತಿಗೆ ಪುಷ್ಟಿ ದೊರೆಯಿತು. ಅವಳ ಬಗೆಗಿನ ವಿಚಾರವೇ ಆತನ ಚಟವಾಯಿತು. ಹೀಗೆ ಈ ಜಾಲವು ಬಲವತ್ತರವಾಯಿತು. ಆತನ

ಸುತ್ತುಮುತ್ತಲಿದ್ದ ಪ್ರತಿಯೊಂದು ವಸ್ತುವಿನಲ್ಲೂ ಜಮೀಲಾಳ ರೂಪವೇ ಕಾಣಿಸತೊಡಗಿತು. ಇದರ ಪರಿಣಾಮವಾಗಿ ಯಾವಾಗಲೂ ಜಮೀಲಾಳ ಚಿಂತೆಯೇ ಆವರಿಸಿತು. ಅವಳನ್ನು ಪಡೆಯುವ ಇಚ್ಛೆಯಾಯಿತು. ಹಣವಿಲ್ಲದೆ ಈ ಕೆಲಸ ಸಾಧ್ಯವಿಲ್ಲವಷ್ಟೆ! ಆದರೆ ಅಷ್ಟು ಹಣ ಗಳಿಸಲು ಜಮೀಲಾಳ ವಿಚಾರದಿಂದ ಬಿಡುವೆಲ್ಲಿ? ಆದುದರಿಂದ ಎಲ್ಲಿಂದಾದರೂ ಎತ್ತಿಹಾಕುವ ಬುದ್ಧಿಯಾಯಿತು. ಒಡನೆಯೇ ಕಾರಾಗೃಹವಾಸ ಹಾಗು ಮೊಕದ್ದಮೆಗಳ ವಿಚಾರವೂ ಬಂದುಹೋಯಿತು. ಸ್ವಲ್ಪ ಹಿಂಜರಿದ. ಆದರೆ ಜಮೀಲಾಳ ಬಗೆಗಿನ ವಿಚಾರಗಳು ಆತನ ತಲೆಯಲ್ಲಿ ಆಳವಾಗಿ ಬೇರುಬಿಟ್ಟಿದ್ದರಿಂದ ಕೊನೆಗೊಮ್ಮೆ, ಕಳವು ಮಾಡಿ ಅನ್ಯಾಯದ ಸಂಪಾದನೆಗೆ ಕೈಹಾಕಿದ. ಮೊದಲು ಏನಿದ್ದ, ಈಗ ಏನಾಗಿಬಿಟ್ಟ! ಆತನ ವಿಚಾರಗಳ ಪರಿಣಾಮವು ಎಂಥ ದುರವಸ್ಥೆಗೆ ಗುರಿಮಾಡಿತೆಂಬುದನ್ನು ಯೋಚಿಸಿ. ಮಾನವನು ತಾನು ನಿರ್ಮಿಸಿದ ಬಲೆಯಲ್ಲಿ ಹೇಗೆ ಸಿಲುಕಿರುವನೆಂಬುದಕ್ಕೆ ಇದೊಂದು ಉದಾಹರಣೆ, ಅಷ್ಟೆ. ಇಂಥ ವಿಚಾರಗಳಿಂದ ಉಷ್ಣತೆ ಹುಟ್ಟಿತು. ಈ ಉಷ್ಣತೆಯಿಂದ ವಿಚಾರಗಳು ಮತ್ತಷ್ಟು ಗಟ್ಟಿಯಾದವು. ಸ್ಥೂಲತೆ ಹೆಚ್ಚುತ್ತ ಹೋಯಿತು. ಬಲೆಯು ದೃಢತರವಾಯಿತು. ಯಾವ ಎಳೆಗಳಲ್ಲಿ ತನ್ನನ್ನು ಬಂಧಿಸಿಕೊಂಡಿದ್ದನೋ ಅವು ಹೊಸ ಹೊಸ ರೂಪದಲ್ಲಿ ಕಾಣಿಸಿಕೊಂಡುವು. ಉಷ್ಣತೆಯು ಒಮ್ಮೆ ಕ್ರೋಧದ ರೂಪತಾಳಿತು; ಮತ್ತೊಮ್ಮೆ ಕಾಮವಿಕಾರವಾಯಿತು. ಸ್ವಲ್ಪದರಲ್ಲಿ ಹೇಳುವುದಾದರೆ, ಒಂದು ರಸಾಯನವೇ ಸಿದ್ಧವಾಯಿತು. ಈಗ ಅವನ್ನು ಮರಳಿ ಪಡೆಯಬೇಕಾದರೆ ಸಂಸ್ಕಾರಗಳ ರೂಪದಲ್ಲಿ ತಾನು ತೆಗೆದುಕೊಂಡಿದ್ದ ಎಲ್ಲವನ್ನೂ ಎಸೆದು, ಮೂಲಸ್ಥಿತಿಯುಂಟಾಗಲು ಅವಕಾಶಮಾಡಿ ತಲೆ ಕೆಳಗಾಗಿದ್ದ ವಿಚಾರವನ್ನು ಸರಿಯಾದ ದಾರಿಗೆ ತಿರುಗಿಸಿ ಊರ್ಧ್ವಮುಖ ಮಾಡಿ ಅದನ್ನು ಬಲಪಡಿಸಬೇಕು.

ಈಗ, ವಿಚಾರಗಳಿಗೆ ಊರ್ಧ್ವಗತಿಯನ್ನು ಕೊಡುವುದು ಸಾಮಾನ್ಯ ಮನುಷ್ಯನಿಗೆ ಶಕ್ಯವಿಲ್ಲವಾದ್ದರಿಂದ, ಪತನದ ಸಾಧ್ಯತೆಯಿಲ್ಲದಂತೆ ಸರ್ವೋಚ್ಚ ಸ್ಥಿತಿಯಲ್ಲಿ ನೆಲೆಸಿದ ಒಬ್ಬ ಮಹಾಪುರುಷನನ್ನು ಆಶ್ರಯಿಸುವೆವು. ವಿಚಾರಗಳ ಅಧೋಮುಖತೆಯು, ಕೆಳಗಿನ ಸ್ತರಕ್ಕೆ ಇಳಿದು ಸ್ಥೂಲತೆಯನ್ನು ಪಡೆದುದರ

ಕುರುಹಾಗಿದೆ. ಇಂಥ ಸಂದರ್ಭಗಳಲ್ಲಿ ಮೇಲಕ್ಕೇರಬಯಸುವ ಪ್ರತಿಯೊಬ್ಬನೂ ಉನ್ನತಸ್ಥಿತಿಯಲ್ಲಿರುವ ಸಹಬಾಂಧವನೊಂದಿಗೆ ಶ್ರದ್ಧೆ-ಭಕ್ತಿಗಳಿಂದ ಹೊಂದಿಕೊಳ್ಳಬೇಕು. ಆತನ ಪ್ರಭಾವದಿಂದ ಕೆಳಮಟ್ಟದ ವಿಚಾರಗಳು ಪರಿಶುದ್ಧವಾಗುವುವು. ಸಾಧಕನು ಆಕರ್ಷಣ-ವಿಕರ್ಷಣಗಳಿಂದ ಮುಕ್ತನಾಗುವನು. ಜೊತೆಗೆ, ದುಷ್ಟಜಾಲವನ್ನು ಕತ್ತರಿಸಲು ಸಹಾಯಕವಾಗುವಂಥ ಸದಭ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಉದಾಹರಣೆಗಾಗಿ, ಕಿವಿಗಳಿಂದ ಒಳ್ಳೆಯ ಮಾತುಗಳನ್ನು ಕೇಳಬೇಕು. ಕಣ್ಣುಗಳಿಂದ ಒಳ್ಳೆಯದನ್ನೇ ನೋಡಬೇಕು. ಮನಸ್ಸನ್ನು ಸತ್ಕಾರ್ಯಮಾಡಲು ಒಲಿಸಬೇಕು. ಇದೇರೀತಿ ಅನೇಕ ಸಂಗತಿಗಳು, ಮಾಡುವುದರಿಂದ ತಾವಾಗಿಯೆ ಗೊತ್ತಾಗುವುವು. ಇದಲ್ಲದೆ, ಈ ಜಾಲವನ್ನು ಭೇದಿಸಲು ತಾನೂ ಹಾರ್ದಿಕಪ್ರಯತ್ನ ಮಾಡಬೇಕು. ಇದಕ್ಕಾಗಿ ಪ್ರತಿಯೊಂದು ಘಟ್ಟದಲ್ಲಿಯೂ ಬೇರೆ ಬೇರೆ ಅಭ್ಯಾಸಗಳು, ಧ್ಯಾನವಿಧಿಗಳು ಇವೆಯಾದರೂ ಅವುಗಳ ಜೊತೆಗೆ ಶ್ರದ್ಧೆ ಹಾಗು ಇಚ್ಛಾಶಕ್ತಿಗಳು ಅವಶ್ಯವಾಗಿವೆ. ಈ ಜಾಲದ ಬೇರೆ ಬೇರೆ ಚಕ್ರಗಳಲ್ಲಿ ಬಗೆ ಬಗೆಯ ಗ್ರಂಥಿಗಳು ನಿರ್ಮಾಣವಾಗಿವೆ, ಆಗುತ್ತಲಿವೆ. ಅವುಗಳನ್ನೆಲ್ಲ ಕತ್ತರಿಸಿದ ಮಹಾಪುರುಷನಿಂದ ಈ ಭೇದನಕಾರ್ಯದಲ್ಲಿ ತುಂಬ ಸಹಾಯವಾಗುವುದು.

ಈ ಸಿದ್ಧಾಂತವು ಲಕ್ಷ್ಯಪೂರ್ವಕ ಅಭ್ಯಾಸಮಾಡಲು ಯೋಗ್ಯವಾಗಿದೆ. ಇವು ಇಂದಿನವರೆಗೆ ರಹಸ್ಯಗಳಾಗಿಯೆ ಉಳಿದಿದ್ದುವು. ಜನರು ಗಮನಕ್ಕೆ ತಂದುಕೊಂಡು ಅಭ್ಯಾಸ ಮಾಡಲೆಂಬ ದೃಷ್ಟಿಯಿಂದ ಅದನ್ನು ವಿವರಿಸಲಾಗಿದೆ. ಈ ವಿವೇಚನೆಯ ನಂತರ ನೀವು ಸ್ವಯಂ ನಿರ್ಮಿಸಿದ ಜಾಲವನ್ನು ಭೇದಿಸಿ ನಿಸರ್ಗದ ಜೀವಾಳದಂತಿದ್ದ ಆ ಗುಪ್ತಶಕ್ತಿಯನ್ನು ಮತ್ತೆ ಪಡೆಯಲು ಪ್ರಯತ್ನಿಸಬೇಕೆಂದು ನನ್ನ ವಿನಮ್ರ ಪ್ರಾರ್ಥನೆ. ಪ್ರತಿಯೊಬ್ಬನೂ ಆಳವಾಗಿ ವಿಚಾರಿಸಿ, ಅತ್ಯಂತ ಸರಳತೆಯ ದೃಷ್ಟಾಂತವನ್ನು ಆದರ್ಶವಾಗಿಟ್ಟುಕೊಂಡು ಗುರಿಯನ್ನು ಮುಟ್ಟಲು ಯತ್ನಿಸಬೇಕು. ನಮ್ಮ ಎಲ್ಲ ಇಂದ್ರಿಯಗಳೂ ಅದರಲ್ಲಿ ಲಯಹೊಂದಿ ತಮ್ಮ ಪೂರ್ವ ಸಂಸ್ಕಾರಗಳನ್ನು ಕಳೆದುಕೊಂಡು ಅದರೊಂದಿಗೆ ಸಾಮರಸ್ಯ ಹೊಂದುವಂತಾಗಬೇಕು. ಆಗ ಮಾತ್ರ ನಿಜವಾದ ಅರ್ಥದಲ್ಲಿ ನೀವು ಧ್ಯೇಯದ ಕಡೆಗೆ ತಿರುಗಿದಂತೆ.

ಮೇಲೆ ವಿವರಿಸಲಾದ ಪದ್ಧತಿಯೇ ಅದಕ್ಕೆ ತಕ್ಕ ಉಪಾಯ. ಅರ್ಥಾತ್ ನಮ್ಮ ಎಲ್ಲ ಉದ್ವೇಗ-ಆವೇಗಗಳನ್ನು ಕಡಮೆ ಮಾಡುತ್ತ, ಆಢ್ಯತೆ-ಆಡಂಬರಗಳನ್ನು ತ್ಯಜಿಸುತ್ತ, ನಮ್ಮ ಅಸ್ತಿತ್ವದಲ್ಲಿ ಸೇರಿದ ಅನಾವಶ್ಯಕ ಅಂಶಗಳನ್ನು ಬಿಸುಡುತ್ತ ನಡೆಯಬೇಕು. ಆಗ ಏನಾಗುವುದು? ನೀವೇ ಹೆಣೆದಿದ್ದ ಬಲೆಯು ಕತ್ತರಿಸುತ್ತ ಹೋಗುವುದು. ನೀವು ಕೊನೆಗೆ ಮುಟ್ಟಬೇಕಾಗಿದ್ದ ಶುದ್ಧಸ್ಥಿತಿಯನ್ನು ನಿರಾಯಾಸವಾಗಿ ಹೊಂದುವಿರಿ. ಇಲ್ಲಿಯವರೆಗೆ ಹೇಳಲಾದಂತೆ, ಯಾರು ಈ ಬಲೆಯನ್ನು ಈಗಾಗಲೇ ಭೇದಿಸಿ ಅನಂತದಲ್ಲಿ ಸಾಕಷ್ಟು ಈಜಿರುವರೋ ಅಂಥವರ ಸಹಾಯ ಪಡೆದಾಗಲೆ ಇದು ಸಾಧ್ಯವಾಗುವುದು.

# ನಿಯಮ – ೫

**ಸತ್ಯವಂತರಾಗಿರಿ. ಕಷ್ಟಗಳು ನಿಮ್ಮ ಹಿತಕ್ಕಾಗಿಯೆ ಬಂದ ದೈವೀಕೃಪೆಯೆಂದು ತಿಳಿದು ಕೃತಜ್ಞರಾಗಿರಿ.**

ಸತ್ಯಹೇಳುವುದರ ಅರ್ಥವೇನೆಂದರೆ ನಾವಿದ್ದ ಸ್ಥಿತಿಯಲ್ಲಿ ನಮ್ಮನ್ನು ಪ್ರಕಟಗೊಳಿಸುವುದು. ಈ ಸ್ಥಿತಿಗೆ ಬಂದ ಮನುಷ್ಯನು "ಅದು ಏನಿದೆಯೋ ಇದೆ" ಎಂದು ವಿವಶನಾಗಿ ಹೇಳುವನು. ಶಬ್ದಗಳು ಈ ಸ್ಥಿತಿಯನ್ನು ಹೇಗೂ ವರ್ಣಿಸಲಾರವು. ನಿಜವಾಗಿ ಇದು ಮೂಲದ ಸ್ಥಿತಿ. ಇದನ್ನು 'ಸ್ಥಿತಿ'ಯೆಂದು ಕರೆಯುವುದು ಸಹ ಅದರ ವೈಶಿಷ್ಟ್ಯವನ್ನು ಕೆಡಿಸಿದಂತೆಯೆ. ಈ ಶಬ್ದ-ಪ್ರಯೋಗವು ಅದರ ವರ್ಣನೆಗೆ ಉಚಿತವಾಗಲಾರದು. ವಾಸ್ತವವಾಗಿ, ಪ್ರಳಯಕಾಲದಲ್ಲಿ ಎಲ್ಲ ಶಕ್ತಿಗಳೂ ಸಂಹೃತವಾಗಿ ಕೇವಲ ಮೂಲಮಾತ್ರ ಉಳಿಯುವ ಬಿಂದು ಅದು. 'ಮೂಲ'ವೆಂಬುದೂ ಅದರ ಸರಿಯಾದ ಅಭಿವ್ಯಕ್ತಿಯಾಗಲಾರದು. ಏಕೆಂದರೆ, ಅಲ್ಲಿ ಎಲ್ಲ ಸಂವೇದನೆಗಳೂ ಪೂರ್ಣ ಇಲ್ಲದಂತಾಗುವುವು. ಅದನ್ನು 'ಶಕ್ತಿ'ಯೆಂದು ಕರೆದರೂ ಕೂಡ ಒಂದು ರೀತಿಯ ಭೌತಿಕತೆ ಅಭಿಪ್ರೇತವಾಗುವುದು. ಹಾಗಾದರೆ ಏನು ಹೇಳಬೇಕು ? ಅಭಿವ್ಯಕ್ತಿಯು ಇಲ್ಲದಂತಾಗುವುದು. 'ಶೂನ್ಯ'ವೆಂದು ಕರೆದರೂ ಒಂದು ತರದ 'ವಸ್ತು'ತ್ವದ ಗಂಧ ಬರುವುದು. ಅದನ್ನು ಸೂಚಿಸಲು ಈಗ 'ಅಸ್ತಿತ್ವ'ವೆಂಬ ಶಬ್ದವೊಂದೇ ಉಳಿಯಿತು. ಇದರಿಂದ ಅಭಿವ್ಯಕ್ತಿ ಶಕ್ಯವಾಗ-ಬಹುದು. ನಾವು ಈ ಶಬ್ದಾರ್ಥವನ್ನು ಕುರಿತು ಚಿಂತಿಸಿದ್ದಾದರೆ ಯಾವುದಾದರೊಂದು ಪದಾರ್ಥದ ಕಲ್ಪನೆ ಬಂದು ಮತ್ತೆ ಅದೇ ಸ್ಥೂಲತೆಯ ಬೋಧೆ-ಯಾಗುವುದು. ಇವೆರಡನ್ನೂ ನಮ್ಮ ಕಲ್ಪನೆಯಿಂದ ತಳ್ಳಿಹಾಕಿದರೂ ಕೂಡ ಏನಾದರೊಂದು ಶೇಷ ಉಳಿದೇ ಉಳಿಯುವುದು. ಈಗ, "ಅದೇ ಏನಿದೆಯೋ ಇದೆ" ಎಂಬುದಕ್ಕಿಂತ ಬೇರೆ ಯೋಗ್ಯ ಅಭಿವ್ಯಕ್ತಿ ಯಾವುದಾಗ-ಬಲ್ಲುದು ? ಪ್ರತಿಯೊಂದು ಕಲ್ಪನೆಯಿಂದ ದೂರ ಉಳಿಯುವುದೊಂದೇ

ಅದನ್ನು ವರ್ಣಿಸುವ ಕಲ್ಪನೆಯಾಗಬಲ್ಲುದು. ಸದ್ವ್ಯವಹಾರದಿಂದ ತನ್ನನ್ನು ಅದರತ್ತ ಕೊಂಡೊಯ್ಯುವುದು ಅಭ್ಯಾಸವನ್ನವಲಂಬಿಸಿದೆ. ದೃಢತೆಯು ಇದರಲ್ಲಿ ಸಹಾಯಕವಾಗುವುದು. ಆದರೆ ಗಂತವ್ಯ ಮುಟ್ಟುವ ಮೊದಲೇ ಈ ದೃಢತೆಯು ಅಪ್ಪಣೆ ತೆಗೆದುಕೊಳ್ಳಬೇಕು. ಆಗ ಮೂಲದ ಭಾಸ-ವಾಗಬಲ್ಲುದು. ಈ ಭಾಸವೂ ಇಲ್ಲದಂತಾದಾಗ ನಾವು ಮೂಲಸ್ಥಿತಿಯನ್ನು ಹೊಂದಿರುವೆವೆಂದು ತಿಳಿಯಬಹುದು.

ಮೇಲೆ ವಿವರಿಸಲಾದಂತೆ, ನಮ್ಮ ಎಲ್ಲ ವ್ಯವಹಾರಗಳೂ ನಿಸರ್ಗ-ದಲ್ಲಿರುವ ಹಾಗೆ ನಡೆಯಬೇಕೆಂಬುದೇ ನಾವು ಸತ್ಯವನ್ನಾಡುವುದರ ಉದ್ದೇಶ. ಇಲ್ಲಿಂದ ಭಕ್ತಿಯು ಆರಂಭವಾಯಿತು. ಭಕ್ತನಿಗೆ ಸ್ವಾಮಿಭಕ್ತಿಯ ಅರಿವಾಗಿ ಆತನ ಸ್ಮರಣೆಯು ಸದಾ ಹೃದಯದಲ್ಲಿ ನೆಲೆಸತೊಡಗುವುದು. ಪ್ರಿಯತಮನ ಕಠೋರ ವರ್ತನೆಯೂ ಪ್ರೇಮಿಗೆ ರುಚಿಸುವುದು; ಏಕೆಂದರೆ ಅದರಲ್ಲಿ ಒಂದು ತರದ ಪ್ರೀತಿ ಸುರಿಯುವುದು. ಇದರಿಂದ ಆತನಕಡೆಗೆ ಮತ್ತಷ್ಟು ಆಕರ್ಷಣೆ ಯುಂಟಾಗುವುದು. ಆತನ ಬೈಗಳಾದರೂ ಪ್ರಿಯವಾಗಿಯೆ ತೋರಿ ಒಂದು ತರದ ಆನಂದವಾಗುವುದು. ಈ ಬೈಗಳ ಒರಟುರೂಪವನ್ನು ತೆಗೆದುಕೊಂಡು-ದಾದರೆ ಅದರ ಸ್ವರೂಪವೇ ಬೇರೆಯಾಗಿ ಕಾಣುವುದು. ಜನರು ಅದನ್ನು 'ದುಃಖ'ಗಳೆಂದು ಕರೆಯುವರು. ಆದರೆ ಭಕ್ತನು ಅವುಗಳ ಅತ್ಯಂತ ಸ್ಥೂಲ-ರೂಪದಲ್ಲಿ ಸಹ ಅವನ್ನು ಸಹಿಸಬಲ್ಲನು. ಈ ಸ್ಥಿತಿಯು ಪ್ರಾಪ್ತವಾದಾಗ ಅದರ ಅಡಿಯಲ್ಲಿ ಕೃತಜ್ಞತೆಯ ಭಾವನೆಯಿರುವುದು. ಅವನು ದುಃಖಗಳನ್ನು ಎಷ್ಟು ಚೆನ್ನಾಗಿ ಸ್ವಾಗತಿಸುವನು ! ಹಾಗು, ಅವು ಪ್ರಿಯತಮನಿಂದ ಬಂದಿವೆ ಯೆಂಬ ಕಾರಣದಿಂದ ಅವುಗಳಿಂದ ಅದೆಷ್ಟು ಸಂತುಷ್ಟನಾಗುವನು !

"ದುಃಖಗಳಿಗಾಗಿ ನೀ ದೂರಬೇಡ;
ದುಃಖವಿಲ್ಲದೆ ಸುಖವು ಸಿಗದು ನೋಡ !"

ಇದರ ಪರಿಣಾಮವೇ ಆನಂದ. ಈಗ ಆತನು ಆನಂದದ ವಲಯದಲ್ಲಿ ನೆಲೆಸತೊಡಗುವನು. ಸಾಕಷ್ಟು ಅಭ್ಯಾಸವಾದನಂತರ ಇದು ಆತನ ಪ್ರಕೃತಿಯಾಗಿ ಪರಿಣಮಿಸುವುದು. ಇದರ ಅರಿವು ಸಹ ಮಾಯವಾಗುವುದು. ಮುಂದುವರಿದಂತೆಲ್ಲ ಆ ವಲಯದಲ್ಲಿ ಯಾವ ಆಕರ್ಷಣೆಯೂ ಉಂಟಾಗುವು-

ದಿಲ್ಲ. ಈ ಅವಸ್ಥೆ ಬಂದಮೇಲೆ ಕೇಳುವುದೇನು ? ಸತ್ಯದ ವಲಯದಲ್ಲಿ ಈಜುವುದೊಂದೇ ಉಳಿಯುವುದು. ಬರಬರುತ್ತ ಈಜುವ ಕಲ್ಪನೆಯೂ ಇಲ್ಲದಾಗುವುದು. ಸಹನಶೀಲತೆಯಿಂದುಂಟಾದ ಶಕ್ತಿಯು ಈ ಕಾರ್ಯದಲ್ಲಿ ಸಹಾಯ ಮಾಡುವುದು. ಆಗ ಸಾಧಕನು ಮೇಲೆ ಹೇಳಿದ ವಲಯದಲ್ಲಿ ಪ್ರವೇಶಿಸುವನು. ಅಲ್ಲಿಂದ ಮುಂದೇನಾಗುವುದೆಂಬುದರ ವಿವರಣೆ ಸಾಕಷ್ಟು ಮಾಡಲಾಗಿದೆ. ಪ್ರಿಯತಮನ ಬೈಗಳೂ ಪ್ರೇಮಿಗೆ ಪ್ರಿಯವಾಗಿಯೆ ಕಂಡು ಅದರಿಂದ ಒಂದುತರದ ಆನಂದವಾಗುವುದು.

ನಮ್ಮ ಸಾಧನಪದ್ಧತಿಯಲ್ಲಿ ಅಭ್ಯಾಸಿಗೆ ಅನೇಕವೇಳೆ ಈ ಸ್ಥಿತಿ ಬರುವುದು. ಇದರಿಂದ ಆತನಿಗೆ ಆನಂದವುಂಟಾಗಿ ಅದು ರುಚಿಸತೊಡಗು-ವುದು. ಮೇಲೆ ಹೇಳಲಾದ ವಲಯದಲ್ಲಿ ಆತನು ಪ್ರವೇಶಿಸಲು ಇದರಿಂದ ಸಹಾಯವಾಗುವುದು. ಅಲ್ಲಿ ಆತನಿಗೆ ಒಂದು ತರದ ಮನಃಶಾತಿ ಲಭಿಸುವುದು. ಆಗ, ತನ್ನ ಹಿತವೇ ಬೈಗಳ ಹಾಗು ದುಃಖಗಳ ರೂಪತಾಳಿ ಬಂದಂತೆ ಆತನಿಗೆ ಅನುಭವವಾಗುವುದು. 'ವರ'ಗಳೆಂದು ಕರೆಯಬಹುದಾದ ಈ ಕಷ್ಟಗಳು ಅದೆಷ್ಟು ಅಮೂಲ್ಯವಾಗಿವೆಯೆಂಬುದನ್ನು ಗಮನಿಸಿ. ಇದರಿಂದ ಸಂತುಷ್ಟನಾದವನು ಧನ್ಯತೆಯ ಭಾವನೆಗಳನ್ನಲ್ಲದೆ ಏನು ತಾನೆ ವ್ಯಕ್ತಮಾಡ-ಬಲ್ಲನು ?

# ನಿಯಮ – ೬

## ಎಲ್ಲರನ್ನೂ ನಿಮ್ಮ ಸಹೋದರರೆಂದು ತಿಳಿದು ಹಾಗೆ ವರ್ತಿಸಿರಿ.

ಭಕ್ತನು ಯಾವಾಗಲೂ ಭಕ್ತಿಯ ವಲಯದಲ್ಲಿರುವುದೇ ಮಾನವೀಯ ವಿನಯದ ಪರಿಪೂರ್ಣ ಲಕ್ಷಣ. ಮೂಲದಿಂದ ಬಂದ ಎಲ್ಲ ವಸ್ತುಗಳೂ ಒಂದೇ ಉಗಮದಿಂದ ಬಂದುವೆಂದು ತಿಳಿಯಬೇಕು. ಒಂದೇ ತಾಯಿಯಿಂದ ಜನಿಸಿದ ಮಕ್ಕಳೆಲ್ಲರೂ ಹೇಗೆ ಒಂದೇ ರೀತಿಯಿಂದ ಸಂಬಂಧಪಟ್ಟಿರುವರೋ, ಹಾಗೆಯೆ ಪ್ರಪಂಚದ ಸಮಸ್ತ ಜನರೂ ಒಂದೇ ರೀತಿಯ ಬಾಂಧವ್ಯದಲ್ಲಿ ಬದ್ಧರಾಗಿದ್ದಾರೆ.

ಇದರ ಅಡಿಯಲ್ಲಿರುವ ಅರ್ಥ ಯಾರಿಗೂ ಹೊಳೆದಿಲ್ಲ. ಪ್ರತಿಯೊಂದಕ್ಕೂ ಕ್ರಿಯಾಶೀಲತೆಯನ್ನೊದಗಿಸಿದ ಕೇಂದ್ರ ಬಿಂದುವಾದ ಅದೇ ಸತ್ಯದೊಂದಿಗೆ ಎಲ್ಲರ ಸಂಬಂಧವಿದೆ. ನಿಜವಾಗಿ ಪರಕೀಯತೆಯೆಂಬುದಿಲ್ಲ. ನಮ್ಮ ಕಲ್ಪನೆಯಿಂದಲೇ ಎಲ್ಲ ಬಂಧುಭಗಿನಿಯರೂ ಪರಕೀಯರಾಗಿ ಕಾಣುತ್ತಿರುವರು. ನಮ್ಮ ಸ್ವಾರ್ಥ ಭಾವನೆಯಿಂದಾಗಿ ಅವರೆಲ್ಲರೂ ಬೇರೆಯೆಂಬಂತಾದರು. ಈ ಪರಕೀಯತೆಯನ್ನು ತೊಡೆದು ಹಾಕಿ ಮೊದಲಿನ ಬಂಧುತ್ವವನ್ನು ಸ್ಥಾಪಿಸಬೇಕಾಗಿದೆ. ಇದು ಕೂಡ ಭಕ್ತನನ್ನು ಆವರಿಸಿರುವ ಒಂದು ತೆರೆಯಾಗಿದೆ. ಒಂದು ಕುಟುಂಬವು ವಿಸ್ತಾರವಾದಂತೆ ಅದರ ವ್ಯಕ್ತಿಗಳ ನಡುವೆ ದೂರತೆಯ ಭಾವನೆ ಹೇಗೆ ತಾನಾಗಿಯೆ ಬರತೊಡಗುವುದೋ, ಹಾಗೆಯೆ ಕಾಲಕಳೆದಂತೆಲ್ಲ ನಮ್ಮ ಬಂಧುಗಳು ನಮ್ಮಿಂದ ದೂರವಾದಂತೆ ಭಾಸವಾಗತೊಡಗಿತು. ಎಲ್ಲರೂ ಒಂದೆಂಬ ಭಾವನೆ ಕಲ್ಪನಾವಲಯದಿಂದ ಕಣ್ಮರೆಯಾಯಿತು. ಕೇವಲ ಅದರ ಸ್ಥೂಲರೂಪವೇ ನಮಗೆ ಕಾಣಿಸಹತ್ತಿ ಅದನ್ನೇ ನಾವು ಪ್ರೀತಿಸತೊಡಗಿದೆವು. ಮೂಲ ಸತ್ಯತೆಯ ಕಡೆಗೆ ನಮ್ಮ ದೃಷ್ಟಿ ಹರಿಯಲೇ ಇಲ್ಲ. ಆದರೆ ಪ್ರೀತಿಯಿದ್ದಲ್ಲಿ ವೈರದ ಭಾವನೆಯೂ ಪ್ರಚ್ಛನ್ನವಾಗಿರುವುದು. ಈಗ ವಿಚಾರದ ಧಾರೆಗಳು ವಿರುದ್ಧವಾಗಿ ಹರಿದು

ಅದು ದುಷ್ಟಪರಿಣಾಮವನ್ನುಂಟು ಮಾಡ ತೊಡಗಿತು. ಪ್ರತಿಯೊಂದು ವಸ್ತುವೂ ಬೇರೆಯೆಂಬಂತೆ ಕಾಣಿಸಿ ಒಬ್ಬರನ್ನು ಮತ್ತೊಬ್ಬರಿಂದ ಅಗಲಿಸಿತು. ಇವೆಲ್ಲ ನಮ್ಮ ವೈಯಕ್ತಿಕ ಜಾಲಕ್ಕೆ ಕಾರಣವಾದುವು. ಪ್ರತಿಯೊಂದು ಪ್ರಾಣಿಯಲ್ಲಿಯೂ ಹರಿದುಬಂದು ಮನುಷ್ಯನಲ್ಲಿ ಸಂವೇದನೆಗಳ ರೂಪತಾಳುವ ಆ ಧಾರೆಗಳ ಅರಿವು ನಮಗಿಲ್ಲದಾಯಿತು.

ವಿಶ್ವಬಾಂಧವ್ಯದ ಭಾವನೆಯನ್ನು ಬೆಳೆಸುವುದೆಂದರೆ, ಆ ವೈಯಕ್ತಿಕ ಜಾಲವನ್ನು ಭೇದಿಸಿದಂತೆಯೆ. ಈ ಅಭ್ಯಾಸದಿಂದಲೇ ಭ್ರಾತೃಭಾವ ಮೂಡಿ-ಬಂದು ನಾವೆಲ್ಲರೂ ಒಬ್ಬರಿಗೊಬ್ಬರು ಸಮೀಪ ಬರುವೆವು. ಇದರಿಂದ ಪರಸ್ಪರರಲ್ಲಿ ಸರಿಯಾದ ತಿಳಿವಳಿಕೆಯುಂಟಾಗಿ ಶಾಂತಿ – ಸಮಾಧಾನಗಳು ನೆಲೆಗೊಳ್ಳುವುವು. ಈ ರೀತಿ ನಮ್ಮ ವ್ಯವಹಾರವೆಲ್ಲ ಸರಳವಾದರೆ ಅದೆಷ್ಟು ಚೆನ್ನಾಗುವುದು! ಇದು ಸಾಧಿಸಿದ ನಂತರ ನಾವು ಮುಂದುವರಿದ ಇನ್ನೊಂ-ದನ್ನು ಸಾಧಿಸಲು ಅನುಕೂಲವಾಗುವುದು. ಈ ಮರ್ತ್ಯಲೋಕವು ವಾಸ್ತವವಾಗಿ ಪರಲೋಕದ ಪ್ರತಿಬಿಂಬವಾಗಿದೆ. ನಾವು ಈ ಪ್ರತಿಬಿಂಬವನ್ನು ಸರಿಪಡಿಸಿಕೊಂಡರೆ ಪ್ರತಿಬಿಂಬದ ಮೂಲವಾದ ಪರಲೋಕವೂ ಸರಿಪಟ್ಟು ಶುದ್ಧವಾಗುವುದು. ಅದರಿಂದ ನಮ್ಮ ಧ್ಯೇಯಸಾಧನೆಯು ಅತ್ಯಂತ ಸುಗಮವಾಗುವುದು. ಇಲ್ಲಿಯ ನಮ್ಮ ಯಶಸ್ಸು ಅಲ್ಲಿಯೂ ಯಶಸ್ಸನ್ನು ತಂದು ಕೊಡುವುದು. ಪ್ರತಿಬಿಂಬವನ್ನೆಸೆಯುವ ಜಗತ್ತೆಂದರೆ ಇಲ್ಲಿ ಬ್ರಹ್ಮಾಂಡವೆಂದು ನನ್ನ ಅಭಿಪ್ರಾಯ. ಈ ಜಗತ್ತಿನಲ್ಲಿ ಪ್ರಕಟವಾಗುವ ಪ್ರತಿಯೊಂದು ವಸ್ತುವು ಮೊದಲು ಬ್ರಹ್ಮಾಂಡಮಂಡಲದಲ್ಲಿ ಸೂಕ್ಷ್ಮರೂಪದಿಂದ ಕಾಣಿಸಿಕೊಳ್ಳುವುದು. ಬ್ರಹ್ಮಾಂಡದಲ್ಲಿಯೂ ಅವು ಅದಕ್ಕಿಂತ ಮೇಲಿನ ಲೋಕದಿಂದ ಬರುವುವು. ಹೀಗೆಯೆ ಮೇಲೆ ಮೇಲಕ್ಕೆ ಹೋದಂತೆಲ್ಲ ಸೂಕ್ಷ್ಮತರ ರೂಪದಲ್ಲಿರುವುವು. ಈ ಪ್ರಕಾರ, ಅತ್ಯಂತ ಕೆಳಗಿನ ಸ್ತರವನ್ನು ಶುದ್ಧಪಡಿಸಿದರೆ ಅದರ ಪರಿಣಾಮವು ಮೇಲಿನ ಸ್ತರಗಳಿಗೆ ವ್ಯಾಪಿಸುತ್ತ ನಡೆದು ತೀರ ಮೇಲಿನ ಸ್ತರವೂ ಸಹಜವಾಗಿಯೆ ಶುದ್ಧವಾಗುವುದು.

## ನಿಯಮ - ೭

**ಯಾರಾದರೂ ಕೇಡು ಮಾಡಿದರೆ ಸೇಡು ಬಗೆಯಬೇಡಿರಿ. ಬದಲು, ದೈವೀಕೃಪೆಯೆಂದು ತಿಳಿದು ಧನ್ಯವಾದಗಳನ್ನರ್ಪಿಸಿರಿ.**

ಆಗುವುದೆಲ್ಲವೂ ನಮ್ಮ ಕರ್ಮಗಳ ಫಲವೆಂದು ಜಗತ್ತಿನ ಸಕಲ ಧರ್ಮಗಳೂ ಸಾರುತ್ತಿವೆ. ಈ ಸಿದ್ಧಾಂತಕ್ಕೆ ವಿರುದ್ಧವಾದ ಫಲವು ಯಾರಿಗೂ ಸಿಗುವುದಿಲ್ಲ. ಹೀಗಿರುವಾಗ, ಘಟಿಸುವುದೆಲ್ಲವೂ ವಾಸ್ತವವಾಗಿ ನಾವೇ ನಿರ್ಮಿಸಿರುವ ದೈವದ ಆಟವೆಂದು ಏಕೆ ತಿಳಿಯಬಾರದು? ನಿಜವಾಗಿಯೂ ನಮ್ಮ ದೈವದ ಆಟವೆಂದು ಏಕೆ ತಿಳಿಯಬಾರದು? ನಿಜವಾಗಿಯೂ ನಮ್ಮ ದೈವವನ್ನು ನಾವೇ ನಿರ್ಮಿಸಿಕೊಂಡಿದ್ದೇವೆ. ಹೇಗೆಂದರೆ, ಯಾವುದಾದ-ರೊಂದು ಕಾರ್ಯವನ್ನು ನಮ್ಮ ಹೃದಯ ಮತ್ತು ಬುದ್ಧಿಪೂರ್ವಕವಾಗಿ ಮಾಡಿದಾಗ ಅಡಿಯಲ್ಲಿ ಅದರ ಸಂಸ್ಕಾರಗಳುಂಟಾಗುವುವು. ಭೋಗ-ದಿಂದ ಅವುಗಳ ಪರಿಣಾಮ ಕ್ಷಯವಾಗುವ ವರೆಗೆ ಅವು ಬೀಜರೂಪದಲ್ಲಿ ಅಲ್ಲಿಯೇ ನೆಲೆಸಿರುವುವು. ಈ ಪ್ರಕಾರ ಭೋಗವು ಆವಶ್ಯಕವಾಗಿದೆ. ಸೃಷ್ಟಿಯ ಆದಿಯಲ್ಲಿದ್ದಂತೆ ಪ್ರತಿಯೊಂದು ವಸ್ತುವೂ ಶುದ್ಧರೂಪದಲ್ಲಿರಬೇಕೆಂಬುದು ನಿಸರ್ಗದ ಅನಿವಾರ್ಯ ನಿಯಮವಾಗಿದೆ. ಅದರ ಮೇಲೆ ಕಿಂಚಿತ್ ಮಲಿನತೆ-ಯಾದರೂ ಕೂಡ ಅದರ ಪ್ರಕಾಶವನ್ನು ಮಂದಗೊಳಿಸುತ್ತದೆ. ಇದು ಸ್ವಯಂ ಒಂದು ಶಕ್ತಿಯಾದಕಾರಣ ಒಂದು ತರದ ಜೀವನವನ್ನು ತಳೆದು ಕರ್ಮಗಳೊ-ಡನೆ ಸಂಬಂಧಪಡೆಯುತ್ತದೆ. ಇಷ್ಟೆಲ್ಲ ಏಕೆಂದರೆ, ನಾವು ನಮ್ಮನ್ನು ಕರ್ತೃಗಳೆಂದು ತಿಳಿದೆವು. ಈ ಕಲ್ಪನೆಯ ಬಲದಿಂದಲೇ ಸಂಸ್ಕಾರಗಳುಂಟಾ-ದುವು. ಕಲ್ಪನೆಯೊಳಗಿನ ಉಷ್ಣತೆಯು ಚೇತನತೆಯನ್ನು ಹೆಚ್ಚಿಸಿ ಅದರಲ್ಲಿ ಒಂದು ತರದ ಕುದಿಯುವ ಕ್ರಿಯೆಯನ್ನುಂಟು ಮಾಡಿತು. ಯಾವ ವಸ್ತುವು ಎಲ್ಲಿಂದ ಬಂದಿರುವುದೋ ಅಲ್ಲಿಗೆ ಮರಳಿ ಹೋಗಲು ಯತ್ನಿಸುವುದು ಪ್ರಕೃತಿ ನಿಯಮವಾಗಿದೆ. ಉಷ್ಣತೆಯ ಸತತ ಸಂಪರ್ಕದಿಂದ ಅದರ ಭಾರವು ಹೆಚ್ಚಿ

ಅಸಹನೀಯವಾದಾಗ ಭಾರವನ್ನಿಳುಹಲು ಮತ್ತೆ ತನ್ನ ಉಗಮಸ್ಥಾನಕ್ಕೆ ಹೋಗಬಯಸುವುದು ಸ್ವಾಭಾವಿಕವಾಗಿದೆ. ಸಣ್ಣವಸ್ತುವಿನಿಂದ ಉತ್ಪನ್ನವಾದ ವಸ್ತುಗಳು ಕೂಡ ಅವಕಾಶವೊದಗಿದಾಗ ವಿಸ್ತಾರಹೊಂದುತ್ತವೆ. ಆ ವಿಸ್ತಾರವು ಅವುಗಳ ಗಾತ್ರಕ್ಕನುಗುಣವಾಗಿ ಸಾಕಷ್ಟು ಬಲಯುತವಾಗಿರುತ್ತದೆ. ಏಕೆಂದರೆ, ಉತ್ಪನ್ನವಸ್ತುಗಳಲ್ಲಿ ಬಲವಿರುವುದು ಸಹಜ. ಹೀಗಿರುವಾಗ ಅದರ ಸ್ವರೂಪವು ಈಗ ಬೇರೆಯಾಗತೊಡಗುವುದು. ಅದು ತನಗೆ ಸಿಕ್ಕ ಅವಕಾಶವನ್ನೆಲ್ಲ ವ್ಯಾಪಿಸಿ ಭೋಗಕ್ಕಾಗಿ ಮೀಸಲಾದ ಸ್ತರಗಳಲ್ಲಿಯೂ ಪ್ರವೇಶಿಸುವುದು. ಇದರಿಂದ ಕಷ್ಟಾನುಭವ ಪ್ರಾರಂಭವಾಗುವುದು. ಇದರೊಳಗಿನ ಪ್ರತಿಯೊಂದು ಅಂಶವನ್ನು ಸ್ವತಂತ್ರವಾಗಿ ವಿವರಿಸಲು ಸಾಧ್ಯವಿದ್ದರೂ ನಾನು ತೀರ ಸಂಕ್ಷೇಪವಾಗಿ ಇದನ್ನು ಹೇಳಿದ್ದೇನೆ. ಭೋಗಕ್ಕಾಗಿ ಒದಗುವ ಪರಿಸ್ಥಿತಿಗಳು ಆಂತರಿಕ ಕಾರಣಗಳಿಂದಾಗಲಿ ಬಾಹ್ಯಕಾರಣಗಳಿಂದಾಗಲಿ ನಿರ್ಮಾಣವಾಗಬಹುದು. ಪರರಿಂದೊದಗುವ ಕಷ್ಟಗಳೇ ಬಾಹ್ಯಪರಿಸ್ಥಿತಿಗಳು. ಜನರು ತಮ್ಮ ಅಜ್ಞಾನದಿಂದ, ಕಷ್ಟಕೊಟ್ಟ ಪರರ ಬಗೆಗೆ ತಮ್ಮ ಭಾವನೆಗಳನ್ನು ಕಲುಷಿತಗೊಳಿಸಿಕೊಳ್ಳುವರು. ಇದು ಯೋಗ್ಯವಲ್ಲ. ಏಕೆಂದರೆ, ಅವರು ನಮ್ಮ ಭೋಗಕ್ಕೆ ಅವಕಾಶ ಕಲ್ಪಿಸಿಕೊಟ್ಟು ನಿಜವಾಗಿ ನಮ್ಮನ್ನು ಕೃತಾರ್ಥರನ್ನಾಗಿ ಮಾಡುತ್ತಾರೆ. ಈ ಪ್ರಕಾರ ಬಾಹ್ಯ ಪರಿಸ್ಥಿತಿಯಿಂದಾದ ಕಾರ್ಯವು ನಮ್ಮ ನಮ್ಮ ಅಂತಃಕರಣಶುದ್ಧಿಗೆ ಕಾರಣವಾದ ಮಿತ್ರಕಾರ್ಯವೇ ಆಗಿದೆ. ಜನಸಾಮಾನ್ಯರ ಬುದ್ಧಿಗೆ ಈ ತತ್ತ್ವಜ್ಞಾನವು ನಿಲುಕುವುದಿಲ್ಲವಾದ್ದರಿಂದ ಈ ವಿವರಣೆಯು ಹೊಸತೆನಿಸಬಹುದು. ಈ ಕಾರಣದಿಂದಲೇ ಪ್ರತಿಯೊಂದನ್ನೂ ಭಗವಂತನಿಂದ ಬಂದ ವರವೆಂದು ತಿಳಿದು ಯಾರೊಂದಿಗೂ ದ್ವೇಷಭಾವನೆ ಬೆಳೆಸಬಾರದೆಂಬ ಸರ್ವಸಾಮಾನ್ಯ ಉಪದೇಶ ಮಾಡಲಾಯಿತು. ಇದರಿಂದ ಮನುಷ್ಯನ ಸೌಜನ್ಯಕ್ಕೂ ಕುಂದುಬರುವುದಿಲ್ಲ. ನಮ್ಮ ಹಿತಕ್ಕಾಗಿ ಯಾರಿಂದ ಏನೇ ಘಟಿಸಿದರೂ ಅದು ನಮ್ಮಲ್ಲಿ ಸಂತೋಷ ಹಾಗು ಕೃತಜ್ಞತಾಭಾವವನ್ನು ಹುಟ್ಟಿಸಬೇಕು.

## ನಿಯಮ – ೮

**ಊಟಮಾಡುವಾಗ ದೇವರನ್ನು ನೆನೆಯುತ್ತ ದೊರೆತದ್ದನ್ನು ಪ್ರಸನ್ನತೆಯಿಂದ ಸ್ವೀಕರಿಸಿರಿ. ಶುದ್ಧ ಹಾಗು ಪವಿತ್ರ ಗಳಿಕೆಯ ಕಡೆಗೆ ಲಕ್ಷ್ಯವಿರಲಿ.**

ಈ ನಿಯಮದಲ್ಲಿ ಅಡಕವಾದ ತತ್ತ್ವಜ್ಞಾನವು ಭೌತಿಕತೆಯಿಂದ ಆರಂಭವಾಗಿ ನಾವು ಮುಟ್ಟಬೇಕಾದ ಅಂತಿಮಸ್ಥಿತಿಯಲ್ಲಿ ಕೊನೆಗಾಣುವುದು. ಪ್ರಸನ್ನತೆಯ ಸ್ಥಿತಿಯು ಕೆಳಗಿನ ಸ್ತರಗಳ ಮೇಲೆಯೂ ತನ್ನ ಪರಿಣಾಮ ಬೀರಿ ಅವನ್ನೆಲ್ಲ ಶುದ್ಧಗೊಳಿಸುವುದು. ಈ ಸ್ಥಿತಿಯು ದೈವೀಸ್ಥಿತಿಗೆ ಸಮೀಪದ್ದೆಂದು ಹೇಳಿದರೆ ತಪ್ಪಾಗದು. ಈ ಬಗ್ಗೆ ವಿಚಾರಮಾಡುವುದೆಂದರೆ ಗುರಿಯನ್ನು ಲಕ್ಷ್ಯದಲ್ಲಿರಿಸಿಕೊಂಡಂತೆಯೆ. ಅರ್ಥಾತ್ ನಮ್ಮ ಆರಂಭದ ಬಿಂದು ಯಾವುದೆಂದರೆ ಅದರ ನಂತರ ಇರುವುದೇ ತತ್ವದ. ಇದು ನಿಸರ್ಗವೇ ನೆಯ್ದಂಥ ಹಾಸು-ಹೊಕ್ಕಾಗಿದೆ. ನಾವು ಇದನ್ನು ನಿಸರ್ಗದ ಭೌತಿಕ ಅಂಶವೆಂದು ಕರೆಯಬಹುದು. ಭೌತಿಕತೆಯೆಂಬುದು ಹೆಸರಿಗೆ ಮಾತ್ರ. ಅದು ನಮ್ಮ ಶುದ್ಧವಾದ ನಿಜಸ್ವರೂಪವನ್ನೇ ಪ್ರಕಟಗೊಳಿಸುತ್ತದೆ. ಭೌತಿಕತೆಯೆಂಬ ಪದವು ಆದರ ಸಂಕೇತವಾಗಿದೆ. ಏಕೆಂದರೆ, ಮಾನವನ ತರ್ಕಕ್ಕೆ ನಿಲುಕುವುದು ಅದೇ. ಪ್ರಾಯಃ ಜನರು ಅದನ್ನು ಮಾಯೆಯ ಆವರಣವೆಂದು ತಪ್ಪಾಗಿ ಭಾವಿಸಬಹುದು. ಆದರೆ ಅದು ಆ ಸ್ಥಿತಿಯನ್ನು ಸರಿಯಾಗಿ ಸೂಚಿಸಲಾರದು. ನಿಜವಾಗಿ ಈ ಸ್ಥಿತಿಯು ಇಡೀ ಮಾಯಾವರಣವನ್ನು ವ್ಯಾಪಿಸಿಕೊಂಡಿದೆ. ನಾವು ಊಟಮಾಡುವಾಗ ಈ ವಿಚಾರವನ್ನು ಲಕ್ಷ್ಯಕ್ಕೆ ತಂದುಕೊಳ್ಳುವೆವಾದ್ದರಿಂದ ನಮ್ಮ ಮುಂದಿರುವ ಆಹಾರದ ಮೇಲೂ ಅದರ ಪರಿಣಾಮವಾಗುವುದು. ಮುಂದೆ ಅದು ನಮ್ಮ ಶರೀರವನ್ನು ಸೇರಿ ನರಗಳಲ್ಲಿ ವ್ಯಾಪಿಸತೊಡಗುವುದು. ಹೊರಗಿನಿಂದ ತೆಗೆದುಕೊಳ್ಳುವ ಪದಾರ್ಥದ ಉಪಯೋಗವನ್ನು ನಾವು ಅದೆಷ್ಟು ಚೆನ್ನಾಗಿ ಮಾಡಿಕೊಂಡೆವು! ಇದರಿಂದ ನಮ್ಮ ಶರೀರದ

ಪರಮಾಣುಗಳು ಪವಿತ್ರವಾಗುವುವು. ಈ ರೀತಿ ನಮ್ಮ ವಿಚಾರದ ಪ್ರಭಾವವು ಆಹಾರದೊಡನೆ ಬೆರೆತು ನಮ್ಮ ಶಾರೀರಿಕ ಹಾಗು ಆಧ್ಯಾತ್ಮಿಕ ಸ್ವಾಸ್ಥ್ಯವರ್ಧನೆಗೆ ಸಹಾಯಮಾಡುವುದು. ಪ್ರಾಣಶಕ್ತಿಯು ಎಲ್ಲ ಕಡೆಗೂ ವ್ಯಾಪಿಸಿರುವುದರಿಂದ ಯಾವ ವಸ್ತುವೂ ಅದರಿಂದ ಹೊರತಾಗಿಲ್ಲ. ಅದು ಆಹಾರದ ಒಳಗೂ ಹೊರಗೂ ಇರುವುದು. ನಾವು ಅದರ ಮೇಲೆ ನಮ್ಮ ವಿಚಾರಶಕ್ತಿಯ ಆಘಾತವನ್ನುಂಟುಮಾಡಿದಾಗ, ಎರಡು ಕಲ್ಲುಗಳನ್ನು ತಿಕ್ಕಿದಾಗ ಕಿಡಿಗಳು ಹುಟ್ಟುವಂತಹ ಸ್ಥಿತಿಯುಂಟಾಗುವುದಾದರೂ ಅದು ಬೇರೆಯಾಗಿದ್ದು ಶುದ್ಧವಾಗಿರುವುದು. ಸತ್ಯದೊಂದಿಗಿನ ನಮ್ಮ ಸಂಬಂಧದಿಂದ ಯಾವುದು ನಿಷ್ಪನ್ನವಾಗುವುದೋ ಅದೇ ನಮ್ಮನ್ನು ಪರಮಾತ್ಮನವರೆಗೆ ಒಯ್ಯಬಲ್ಲುದು. ಏಕೆಂದರೆ, ಅದಕ್ಕಿಂತ ಕೆಳಗಿನ ಸ್ತರಗಳಲ್ಲಿ ಈ ಸಾಮರ್ಥ್ಯವಿರುವುದಿಲ್ಲ. ಮಾನವಕಲ್ಪನೆಯು ಅಲ್ಲಿಯವರೆಗೆ ಮುಟ್ಟುವುದಿಲ್ಲ. ನಾವು ಅನಂತದವರೆಗೆ ಮುನ್ನಡೆಯಲು ಇದು ದಾರಿ ಮಾಡಿಕೊಡುವುದು. ಈಗ ನಾವು ಆಹಾರದ ಮೇಲೆ ಶುದ್ಧತೆಯ ವಿಚಾರದ ಆಘಾತಕೊಟ್ಟಾಗ, ಆ ಕಿಡಿ ನಮ್ಮನ್ನು ಅಂತಿಮಸ್ಥಿತಿಯ ಸಮೀಪದ ಸ್ತರಕ್ಕೆ ಒಯ್ಯುವುದು. ಈ ಪ್ರಕಾರ ನಾವು ಮಾರ್ಗದ ಬಹುಭಾಗವನ್ನು ಕ್ರಮಿಸುವೆವು.

ನಮ್ಮ ನಿಯಮದಲ್ಲಿ ಭಗವಂತನನ್ನು ಸ್ಮರಿಸುತ್ತ ಊಟ ಮಾಡಬೇಕೆಂದು ವಿಧಿಸಲಾಗಿದೆ. ಅದರಂತೆಯೆ ನಮ್ಮ ಎಲ್ಲ ಕೆಲಸಗಳೂ ನಮ್ಮ ಧ್ಯೇಯಪ್ರಾಪ್ತಿಯಲ್ಲಿ ಸಾಧಕವಾಗಬೇಕು. ಊಟ ಮಾಡುವಾಗ ನಾವು ಅಂತಿಮ ಗುರಿಯಕಡೆಗೆ ಲಕ್ಷ್ಯವನ್ನು ಕೇಂದ್ರೀಕರಿಸುವ ಉದ್ದೇಶವೇನೆಂದರೆ ಅದರ ಪ್ರಭಾವವೂ ನಮ್ಮ ಮೇಲೆ ಆಗಿ ನಮ್ಮಲ್ಲಿ ಹೆಚ್ಚು ಹೆಚ್ಚು ಶುದ್ಧತೆ ಬೆಳೆದು ಗುರಿಯನ್ನು ತೀವ್ರ ಮುಟ್ಟಬೇಕು ಎಂಬುದು. ಪವಿತ್ರತೆಯಿಂದ ನಮ್ಮ ಸೃಷ್ಟಿಯಾಯಿತು. ನಮ್ಮ ಸೃಷ್ಟಿಗೆ ಕಾರಣವಾದ ಶುದ್ಧಧಾರೆಗಳಾದರೂ ಪವಿತ್ರತಮ ಮೂಲದಿಂದ ಹುಟ್ಟಿರುವುವು. ಆದುದರಿಂದಲೇ ನಮ್ಮಲ್ಲಿ ಪಾವಿತ್ರ್ಯವನ್ನು ಕುರಿತ ವಿಚಾರಗಳು ಸುಳಿಯುತ್ತಿರುವುವು. ಆ ಧಾರೆಗಳು ಎಲ್ಲೆಡೆಯಲ್ಲಿಯೂ ಇದ್ದು ಶುದ್ಧಸ್ಥಿತಿಯಲ್ಲಿಯೆ ಇರುವುವು. ಅಶುದ್ಧತೆಯು ಅವುಗಳನ್ನೆಂದಿಗೂ ಸೋಂಕಿಲ್ಲ. ಇಷ್ಟೇ ಅಲ್ಲ, ಕಾಲದ ಪ್ರಭಾವದಿಂದಲೂ

ಅವು ಮಾಸಿಹೋಗಿಲ್ಲ. ಈ ಧಾರೆಗಳು ಅತ್ಯಂತ ಸತ್ತ್ವಶಾಲಿಯಾದ ಉಗಮ-ದಿಂದ ಪ್ರವಹಿಸಿದುವಾದಕಾರಣ ಅವುಗಳಲ್ಲಿ ಪವಿತ್ರತೆ ಸಂಪೂರ್ಣ ಓತಪ್ರೋತವಾಗಿದೆ. ಸೃಷ್ಟಿಗೆ ಕಾರಣವಾದ ಪ್ರಾಥಮಿಕ ಕ್ಷೋಭದ ಪರಿಣಾಮವಾಗಿದ್ದ ಈ ಧಾರೆಗಳು ತೀರ ಪವಿತ್ರವಾಗಿವೆ. ಅಂತೆಯೆ ಇವುಗಳಿಂದ ಹುಟ್ಟಿದ ಪ್ರತಿಯೊಂದು ವಸ್ತುವೂ ತನ್ನ ಮೂಲರೂಪದಲ್ಲಿ ಪವಿತ್ರವೇ ಆಗಿದೆ. ಆದರೆ ಕಾಲದ ಪರಿಣಾಮಗಳಿಂದ ಅವುಗಳ ಶುದ್ಧತೆಯು ಕಲುಷಿತವಾಯಿತು. ನಾಲ್ಕನೆಯ ನಿಯಮದಲ್ಲಿ ವಿವರಿಸಲಾದಂತೆ ಇದೆಲ್ಲ ನಮ್ಮ ಕರ್ಮಗಳ ಪರಿಣಾಮವೇ ಆಗಿದ್ದಿತು.

ನಿಸರ್ಗದಿಂದ ಬಂದ ಪ್ರತಿಯೊಂದು ವಸ್ತುವೂ ಪವಿತ್ರವಾಗಿರುವುದು. ಏಕೆಂದರೆ ಅವುಗಳ ಮೂಲವೇ ಶುದ್ಧತೆಯಿಂದ ತುಂಬಿತುಳುಕುತ್ತದೆ. ಮನುಷ್ಯನು ಶುದ್ಧ ಹಾಗು ಸಾತ್ತ್ವಿಕ ಸಾಧನಗಳಿಂದ ಮಾಡಿದ ಸಂಪಾದನೆ-ಯಾದರೂ ಅದೇ ರೀತಿ ಪವಿತ್ರವಾಗಿರುವುದು. ಅವುಗಳ ಪರಿಣಾಮವು ನಿಕಟವರ್ತಿ ಸ್ತರಗಳ ಮೇಲೆ ಆಗಿ ಮಾನಸ ನಿರ್ಮಿತ ಜಾಲವನ್ನು ಶುದ್ಧ-ಗೊಳಿಸುವುದರಲ್ಲಿ ಸಹಾಯಕವಾಗುವುದು. ಈ ಕಾರಣದಿಂದಲೇ ಮಹಾತ್ಮರು ಪವಿತ್ರ ಗಳಿಕೆಗೆ ಮಹತ್ತ್ವಕೊಟ್ಟಿದ್ದಾರೆ.

# ನಿಯಮ - ೯

**ಜನರಲ್ಲಿ ಪ್ರೇಮ ಹಾಗು ಪವಿತ್ರಭಾವನೆಗಳನ್ನು ಮೂಡಿಸುವ ಹಾಗೆ ನಿಮ್ಮ ಜೀವನ ಮತ್ತು ವ್ಯವಹಾರವನ್ನು ರೂಪಿಸಿಕೊಳ್ಳಿರಿ.**

ನಮ್ಮ ವಿಚಾರಗಳಿಂದ ನಮಗೆ ಬಲ ದೊರೆಯುತ್ತದೆ. ದೇವನಿರ್ಮಿತ ಹಾಗು ಮನುಷ್ಯನಿರ್ಮಿತ ವಸ್ತುಗಳಲ್ಲಿ ಪೂರ್ಣ ಸಾಮರಸ್ಯ ಉಂಟಾದಾಗಲೇ ಇದು ಸಾಧ್ಯವಾಗುವುದು. ವ್ಯವಹಾರವೆಂಬ ಶಬ್ದಕ್ಕೆ ಬಹಳ ವ್ಯಾಪಕವಾದ ಅರ್ಥವಿದೆ. ಕೇಂದ್ರದ ಅನಂತರ ಬರುವ ಮಂಡಲವನ್ನೆಲ್ಲ ಅದು ವ್ಯಾಪಿಸಿದೆ. ಈಶ್ವರನ ವ್ಯವಹಾರದಲ್ಲಿ ಒಂದು ಅರ್ಥದಿಂದ ಸಮಾನತೆಯಿರುವುದು. ಉದಾಹರಣೆಗಾಗಿ, ಆತನು ಎಲ್ಲರಿಗೂ ಸಮಾನವಾಗಿ ಬೆಳಕನ್ನು ಕೊಡುವನು. ಎಲ್ಲರೂ ಉಸಿರಾಡಿಸಲು ಗಾಳಿಯನ್ನು ನಿರ್ಮಿಸಿರುವನು. ಇದೇ ರೀತಿ ನಮ್ಮ ಜೀವನವನ್ನು ಸ್ಥಿರಗೊಳಿಸಿ ಪೋಷಿಸಲು ಅನೇಕ ವಸ್ತುಗಳನ್ನು ಸೃಷ್ಟಿಸಿರು-ವನು. ಇದನ್ನೇ ವ್ಯವಹಾರ ಸಮಾನತೆಯೆಂದು ಹೇಳುವುದು.

ಇನ್ನೂ ಹಲವು ವಸ್ತುಗಳಿವೆ. ಅವು ಬೇರೆ ರೂಪದಲ್ಲಿ ಪ್ರಕಟವಾಗಿ ಬೇರೆ ವ್ಯವಹಾರವನ್ನು ಹೊಂದುವುವು. ಮಣ್ಣಿನ ಒಂದು ಮುದ್ದೆಯನ್ನೂ ಅದರಿಂದ ಮಾಡಿದ ಒಂದು ಆಟಿಕೆಯ ವಸ್ತುವನ್ನೂ ನಾವು ಎಷ್ಟೋ ವ್ಯತ್ಯಾಸದ ದೃಷ್ಟಿಯಿಂದ ನೋಡುತ್ತೇವೆ. ಮಣ್ಣಿನ ಮುದ್ದೆಗಿಂತಲೂ ಅದರಿಂದ ಮಾಡಿದ ಆಟಿಕೆಯನ್ನು ಹೆಚ್ಚು ಮೆಚ್ಚುವೆವು. ಅದರಂತೆಯೆ ಮನುಷ್ಯನು ತನ್ನನ್ನು ಸರಿಯಾಗಿ ರೂಪಿಸಿಕೊಂಡು ಭಗವಂತನ ಮುಂದೆ ಹೋದರೆ ಭಗವಂತನು ಬೇರೆ ಬೇರೆ ದೃಷ್ಟಿಯಿಂದ ಆತನನ್ನು ನೋಡುವನು. ಆದುದರಿಂದ ನಾವು ಭಗವಂತನ ದೃಷ್ಟಿಯನ್ನು ಆಕರ್ಷಿಸುವಂತೆ ನಮ್ಮನ್ನು ರೂಪಿಸಿಕೊಳ್ಳಬೇಕು. ಈ ದೈವೀ ವ್ಯವಹಾರದ ಅನುಕರಣೆಮಾಡಿ ನಮ್ಮ ನಿತ್ಯ ಜೀವನದಲ್ಲಿ ಆಚರಿಸಬೇಕು.

ದೈವೀ ವ್ಯವಹಾರಗಳೂ ವಿವಿಧರೀತಿಯಲ್ಲಿ ಪ್ರಕಟವಾಗುತ್ತವೆ. ಪದಾರ್ಥಗಳಲ್ಲಿ ಕಾಣುವ ಬೇರೆ ಬೇರೆ ಬಣ್ಣಗಳು ಇದಕ್ಕೆ ಒಂದು ಉದಾಹರಣೆ. ತೋಟದಲ್ಲಿ ಒಂದೇ ಕಡೆಗೆ ಅರಳುವ ಹೂಗಳಲ್ಲಿ ಒಂದು ಕೆಂಪಾಗಿದ್ದರೆ ಇನ್ನೊಂದು ಹಳದಿಯಾಗಿರುವುದು. ನಿಸರ್ಗದ ನಾನಾ ವರ್ಣಗಳ ವಸ್ತುಗಳಲ್ಲಿ ಪ್ರತಿಯೊಂದು ವಸ್ತುವೂ ಅದರದರ ಯೋಗ್ಯತೆಗೆ ತಕ್ಕಂತೆ ಪಾಲುಗೊಳ್ಳು-ತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಒಂದೊಂದು ವಸ್ತುವಿನ ವಿಷಯದಲ್ಲಿ ಅದರ ವ್ಯವಹಾರವು ಬೇರೆ ಬೇರೆಯಾಗಿರುತ್ತದೆ. ಇದನ್ನನುಲಕ್ಷಿಸಿ ನಾವಾದರೂ ನಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು. ಪ್ರತಿಯೊಬ್ಬರ ಹಕ್ಕು ಬಾಧ್ಯತೆಗಳನ್ನೂ ಅವಶ್ಯಕತೆಗಳನ್ನೂ ಗಮನಕ್ಕೆ ತಂದುಕೊಂಡು ಅವರೊಂದಿಗೆ ವ್ಯವಹರಿಸುತ್ತ ದೈವೀ ವ್ಯವಹಾರಕ್ಕೆ ಸಮೀಪವಾಗುತ್ತ ಹೋಗಬೇಕು. ಇದರಿಂದ ನಮ್ಮ ಜೀವನದಲ್ಲಿ ಒಂದು ಪ್ರಭಾವವುಂಟಾಗಿ ಅದು ಸಹಜವಾಗಿಯೆ ಜನರನ್ನು ಆಕರ್ಷಿಸುವುದು. ಅವರ ಹೃದಯಂಗಳಲ್ಲಿ ಪ್ರೇಮಭಾವನೆ ಮೂಡಿ ನಮ್ಮೊಡನೆ ಯೋಗ್ಯರೀತಿಯಿಂದ ವ್ಯವಹರಿಸ-ತೊಡಗುವರು.

# ನಿಯಮ - ೧೦

**ಮಲಗುವಾಗ ದೇವರು ಎದುರಿನಲ್ಲಿರುವನೆಂದು ತಿಳಿದು, ಮಾಡಿದ ಅಪರಾಧಗಳಿಗಾಗಿ ಪಶ್ಚಾತ್ತಾಪ ಪಡುತ್ತ ದೈನ್ಯದಿಂದ ಕ್ಷಮೆ ಬೇಡಿರಿ. ಮುಂದೆ ಎಂದಿಗೂ ಅಂಥ ಅಪರಾಧ ಮಾಡದಂತೆ ನಿರ್ಧರಿಸಿ ಪ್ರಾರ್ಥನೆಮಾಡಿರಿ.**

ದೇವರನ್ನು ಒಡೆಯನೆಂದೂ ತನ್ನನ್ನು ಅತನ ಸೇವಕನೆಂದೂ ಭಾವಿಸಿ ಯಾವಾಗಲೂ ಆತನ ಸೇವೆಮಾಡುತ್ತಿರುವುದರಲ್ಲಿಯೆ ಮಾನವನ ಸೌಜನ್ಯವಿದೆ. ಹೀಗೆ ಮಾಡುವುದರಿಂದ ಮನುಷ್ಯನಲ್ಲಿ ಲಯಾವಸ್ಥೆಯುಂಟಾಗಿ ಆತನ ಕಡೆಗೆ ಭಗವಂತನ ಲಕ್ಷ್ಯವು ನೇರವಾಗಿ ಹರಿಯುವುದು. ಇಬ್ಬರಲ್ಲಿಯೂ ಸಂಬಂಧವು ಸ್ಥಾಪಿತವಾಗುವುದು. ಹೀಗಿರುವಾಗ ಈ ಸಂಬಂಧಕ್ಕೆ ಚ್ಯುತಿ ಬಾರದಂತೆ ನಡೆದುಕೊಳ್ಳುವುದು ಸೇವಕನ ಕರ್ತವ್ಯವಾಗಿಬಿಡುತ್ತದೆ. ಇದರಿಂದ ಒಡೆಯನ ಮಹಿಮೆಯು ಆತನ ಹೃದಯದಲ್ಲಿ ಬಿಂಬಿಸಿ ಭಗವಂತನ ನೇರವಾದ ಕೃಪಾದೃಷ್ಟಿಗೆ ಅತನು ಪಾತ್ರನಾಗುವನು.

ಒಡೆಯನ ದೃಷಿ ಯಾವಾಗಲೂ ತನ್ನ ಕಡೆಗೆ ಇದ್ದು ತಾನು ಆತನ ಸಾಮೀಪ್ಯ ಹೊಂದಬೇಕೆಂಬುದೇ ಭಕ್ತನ ಏಕಮಾತ್ರ ಉದ್ದೇಶ. ಸಜ್ಜನಿಕೆಯು ಈಗ ಬೇರೆ ರೂಪ ತಾಳುವುದು. ನಾವು ಭಗವಂತನನ್ನು ನಮ್ಮ ಸ್ವಾಮಿಯೆಂದು ತಿಳಿದಮೇಲೆ, ಅರಿತಾಗಲಿ ಅರಿಯದೆ ಆಗಲಿ ನಾವು ಮಾಡಿದ ತಪ್ಪುಗಳನ್ನು ಅಪರಾಧಿಯಂತೆ ಆತನೆದುರಿಗೆ ಇಡತಕ್ಕದ್ದು. ಇದರಿಂದ ನಮ್ಮ ದೈನ್ಯವು ಸೂಚಿತವಾಗುವುದು. ಒಡೆಯನ ಮನಸ್ಸಿನಲ್ಲಿಯೂ ಭಕ್ತನ ಅಪರಾಧವು ಕ್ಷಮ್ಯವೆಂಬ ಭಾವನೆ ಬರುವುದು. ಏಕೆಂದರೆ, ಭಕ್ತನು ತಾನು ದೀನನೆಂದು ಭಾವಿಸಿ ತಾನೆ ಅದನ್ನು ಒಡೆಯನ ಮುಂದೆ ಇಟ್ಟುದು! ಇದರಲ್ಲಿರುವ ಮಾರ್ದವತೆಯನ್ನು ಶಬ್ದಗಳಿಂದ ವರ್ಣಿಸಲು ಸಾಧ್ಯವಿಲ್ಲ. ಎಂತಲೇ ಭಕ್ತನ ಅಸಹಾಯಸ್ಥಿತಿಯ ಬಗ್ಗೆ ಭಗವಂತನಿಗೆ ವಿಶ್ವಾಸ ಹುಟ್ಟುತ್ತದೆ. ಭಕ್ತನು

ತನ್ನಲ್ಲಿರುವ ಅಡ್ಡಿ-ಆತಂಕಗಳನ್ನು ದೂರ ಮಾಡಿ ಭಾರವನ್ನು ಇಳಿಸಿ ಬಿಟ್ಟಿರುವನೆಂದು ಇದರರ್ಥ. ಈಗ ಆತನು ಮಲ, ವಿಕ್ಷೇಪ, ಆವರಣ ರಹಿತನಾಗಿ ನಿಸರ್ಗದ ಧಾರೆಗಳಂತೆ ಪವಿತ್ರ ರೂಪದಲ್ಲಿರುವನು. ಭಕ್ತಿಯ ಒಂದು ಸಂಬಂಧದಿಂದಲೇ ಇಷ್ಟೆಲ್ಲ ಪವಿತ್ರತೆ ಬಂದಿತು. ಇದರಿಂದ ನಿಸರ್ಗದ ಜೀವಾಳವಾದ ಸರಳತೆಯ ಭಾವನೆಯೂ ಬರುವುದು. ಬರಬರುತ್ತ ನಾವು ಅದರಲ್ಲಿ ಸಂಪೂರ್ಣ ಆವೃತರಾಗಿ ಲಯ ಹೊಂದತೊಡಗುವೆವು. ಯಾವ ಅಪರಾಧಗಳಿಂದ ಭಕ್ತನು ಎಂದಿಗೂ ಮುಕ್ತನಾಗಲಾರನೋ ಅಂಥ ಅಪರಾಧಗಳು ಸಹ ಈ ಅವಸ್ಥೆಯಲ್ಲಿ ನಿಸ್ಸತ್ತ್ವವಾಗುವುವು. ಈ ಸಂಬಂಧವು ಸ್ಥಾಪಿತವಾಗುವುದಕ್ಕಿಂತ ಮುಂಚೆ ಭಕ್ತನು ದೊಡ್ಡ ದೊಡ್ಡ ತಪ್ಪುಗಳನ್ನು ಮಾಡಿರುವ ಸಂಭವವುಂಟು. ಆದರೆ ಇನ್ನುಮೇಲೆ ಕ್ರಮೇಣ ಅವು ಕಡಿಮೆಯಾಗುತ್ತಹೋಗಿ ಕೊನೆಗೆ ಅವುಗಳ ಅಸ್ತಿತ್ವವೇ ಇಲ್ಲದಂತಾಗುವುದು. ಆತನ ಇಚ್ಛಾಶಕ್ತಿಯ ಆಘಾತದಿಂದಾಗಿ ಅವು ಪಶ್ಚಾತ್ತಾಪದ ರೂಪ ತಾಳಿವೆ. ಪಶ್ಚಾತ್ತಾಪವೆಂದರೆ ಮತ್ತೇನೂ ಅಲ್ಲ – ತನ್ನಲ್ಲಿಯ ವಿಚಾರತರಂಗಗಳನ್ನು ಆಘಾತದಿಂದ ಸ್ವಚ್ಛಗೊಳಿಸಿ ನಿರ್ವಾತಪ್ರದೇಶವನ್ನು ನಿರ್ಮಿಸಿಕೊಳ್ಳುವುದು. ಆಗ ಮೇಲಿನಿಂದ ಇಳಿದು ಬರುವ ಪ್ರವಾಹವು ಆ ಕಡೆಗೆ ತಿರುಗಿ ನಿಸರ್ಗದ ಸಮಾನತೆಯನ್ನು ಕಾಪಾಡುವುದು. ಇದರಿಂದ ಪೂರ್ವಸಂಸ್ಕಾರವೆಲ್ಲ ತೊಳೆದುಹೋಗುವುದು. ಇದೇ ಪಶ್ಚಾತ್ತಾಪದ ನಿಜಸ್ವರೂಪ.

ಯಾವುದನ್ನು ನಾನು ಅಸಹಾಯಸ್ಥಿತಿಯೆಂದು ಕರೆದಿರುವೆನೋ ಅದನ್ನುಂಟುಮಾಡಿಕೊಳ್ಳುವುದು ದೀನತೆಯ ಸ್ಥಿತಿಯೆನಿಸುವುದು. ಇದನ್ನು ಹೊಂದಿದವನು ಸರ್ವಸ್ವವನ್ನೂ ಹೊಂದಿದಂತೆಯೆ. ಹೊರಗೆ ಹಾಗೆ ಕಾಣದಿದ್ದರೂ ಈ ಸ್ಥಿತಿಯು ಪಾಪರಹಿತವೂ ಮುಗ್ಧವೂ ಆಗಿದೆ. ಇಷ್ಟಾದರೆ ಆ ಅಪರಾಧವು ನಿಜಕ್ಕೂ ಅಪರಾಧವಾಗಿ ಉಳಿಯುವುದಿಲ್ಲ. ಏಕೆಂದರೆ, ಅವನು ಅದನ್ನು ಸಂಪೂರ್ಣವಾಗಿ ತೊಳೆದುಬಿಟ್ಟಿದ್ದಾನೆ.

ಭಕ್ತಿಯ ಮುಂದಿನ ಘಟ್ಟವೆಂದರೆ, ಒಮ್ಮೆ ಮಾಡಿದ ತಪ್ಪನ್ನು ತಿರುಗಿ ಮಾಡದಂತೆ ನೋಡಿಕೊಳ್ಳುವುದು. ಇದಕ್ಕಾಗಿ ಭಗವಂತನ ಸಂಮುಖದಲ್ಲಿ ದೈನ್ಯಭಾವದಿಂದ ಅಪರಾಧದ ಪುನರಾವೃತ್ತಿಯಾಗದ ಹಾಗೆ ಸ್ಥೈರ್ಯವನ್ನು

ದಯಪಾಲಿಸುವಂತೆ ಪ್ರಾರ್ಥಿಸಬೇಕು. ನಾವು ಯಾಚಕರ ಸ್ಥಿತಿಯಲ್ಲಿ ಈ ವಲಯವನ್ನು ಪ್ರವೇಶಿಸುವೆವಾದ ಕಾರಣ ಪ್ರಕೃತಿನಿಯಮಗಳ ವಿರುದ್ಧ ಏನನ್ನೂ 'ಮಾಡದಂತೆ ಜಾಗ್ರತೆ ವಹಿಸುತ್ತ ನಮ್ಮ ಕರ್ತವ್ಯಪಾಲನೆ ಮಾಡಬೇಕು. ಒಡೆಯ ಹಾಗು ಸೇವಕ ಇವರಿಬ್ಬರ ನಡುವಿನ ಅಂತರವನ್ನು ಕಡಿಮೆಮಾಡುತ್ತ ಹೋಗುವುದರಿಂದ ಇದು ಸುಲಭಸಾಧ್ಯವಾಗುವುದು. ನಮ್ಮ ಮನಸ್ಸಿನಲ್ಲಿ ಆತನ ಸಾನ್ನಿಧ್ಯಭಾವನೆಯನ್ನು ಯಾವಾಗಲೂ ತಂದುಕೊಳ್ಳುವುದೇ ಇದನ್ನು ಸಾಧಿಸುವ ಉತ್ತಮ ಉಪಾಯ.

ಮಲಗುವಾಗ ಹೀಗೆ ಮಾಡುವುದು ಒಳ್ಳೆಯದೆಂದು ಭಾವಿಸಲಾದ ಕಾರಣವೇನೆಂದರೆ ನಾವು ಆ ವೇಳೆಯಲ್ಲಿ ನಮ್ಮ ಎಲ್ಲ ಜಂಜಾಟಗಳಿಂದ ಬಿಡುಗಡೆ ಹೊಂದಿರುವೆವು. ವಿಶ್ರಾಂತಿ ಪಡೆಯುವುದರ ಹೊರತು ಮತ್ತೇನೂ ಮಾಡಬೇಕಾಗಿರುವುದಿಲ್ಲ. ನಾವು ಎಲ್ಲ ರೀತಿಯಿಂದಲೂ ಸ್ವತಂತ್ರರಾಗಿರುವೆವು. ಈ ಸ್ವಾತಂತ್ರ್ಯವು ಸ್ಥೈರ್ಯದ ಸ್ಥಿತಿಯೆಂದು ಹೇಳಬಹುದು. ಈ ಪ್ರಕಾರ ನಾವು ಪ್ರಕೃತಿಯ ಒಂದು ಭಾಗದೊಂದಿಗೆ ಸಾಮರಸ್ಯಹೊಂದುವೆವು. ಆದುದರಿಂದಲೇ ಆ ಸಮಯದಲ್ಲಿ ಮಾಡಲಾದ ಪ್ರಾರ್ಥನೆಗೂ ಇತರ ಕಾರ್ಯಗಳಿಗೂ ಹೆಚ್ಚಿನ ಬಲ ಬರುವುದು. ಆ ವೇಳೆಯ ಲಾಭವನ್ನು ನಾವು ಸಾಧ್ಯವಾದಷ್ಟು ಹೆಚ್ಚಿನ ಪ್ರಮಾಣದಲ್ಲಿ ಪಡೆಯಬೇಕಲ್ಲದೆ ಈ ಸಮಯದಲ್ಲಿ ನಿಯಂತವಾದ ಕಾರ್ಯಗಳನ್ನು ಅಗತ್ಯವಾಗಿ ಮಾಡಬೇಕು.

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

# Shri RamChandra Mission
# Publications

| | | | Rs. P. |
|---|---|---|---|
| 1. | Reality at Dawn | Shri RamChandraji | 20-00 |
| 2. | Efficacy of Rajayoga | " | 10-00 |
| 3. | Sahaj Marg Philosophy | " | 8-00 |
| 4. | Voice Real | " | 35-00 |
| 5. | Anant ki O'r (Hindi) | " | 6-00 |
| 6. | Towards Infinity | " | 7-00 |
| 7. | Commentary on Ten Commandments of Sahaj Marg | Traslation by: Shri Raghavendra Rao | 8-00 |
| 8. | A Peep into Sahaj Marg | Shri Ishwar Sahai | 15-00 |
| 9. | Thus Speaks Shri RamChandraji | | 2-50 |
| 10. | Lectures on Sahaj Marg | Dr. K. C. Varadachari | 10-00 |
| 11. | Talks on Efficacy of Rajayoga | " | 1-50 |
| 12. | Sahaj Marg and Personality Problems | " | 8-00 |
| 13. | Sahaj Marg-Shri RamChandra's New Darsana | " | 12-00 |
| 14. | Satyodayam (Tamil) | Shri A. Balasubrahmaniam | |
| 15. | Satyodayamu (Telugu) | Shri N. Kumarswami | |
| 16. | Satyaka Udaya (Hindi) | Shri Sureshchandra | |
| 17. | Sahaj Marg ke Das Usoolonki Sharah (Out of stock) | | |
| 18. | A Panaromic View of Sahaj Marg | Shri Raghavendra Rao | 15-00 |
| 19. | Autobiography of Shri RamChandra | Part - I | 18-00 |
| | | Part II - Vol I | 20-00 |
| | | Part II - Vol II | 30-00 |
| | | Part II - Vol III | 60-00 |

# ಶ್ರೀ ರಾಮಚಂದ್ರ ಮಿಷನ್ನಿನ

## ಕನ್ನಡ ಪ್ರಕಟನೆಗಳು

| | | | |
|---|---|---|---|
| ೧ | ಸತ್ಯೋದಯ | ಶ್ರೀ ಶ್ರೀ. ಆ. ಸರ್ನಾಡ | ೧೫-೦೦ |
| ೨ | ಸಹಜಮಾರ್ಗಾನುಸಾರ ರಾಜಯೋಗದ ಪ್ರಭಾವ | " | ೧೫-೦೦ |
| ೩ | ಸಹಜಮಾರ್ಗದ ಹತ್ತು ನಿಯಮಗಳ ವ್ಯಾಖ್ಯಾನ | " | ೧೫-೦೦ |
| ೪ | ಅನಂತದೆಡೆಗೆ | " | ೧೦-೦೦ |
| ೫ | ಸಹಜಮಾರ್ಗದ ರೂಪರೇಷೆ | " | ೩-೦೦ |
| ೬ | ಋತವಾಣಿ (ಅನುವಾದ) | " | ೩೦-೦೦ |
| ೭ | ಶ್ರೀ ರಾಮಚಂದ್ರಜಿಯವರ ನುಡಿಮುತ್ತುಗಳು | " | ೨-೫೦ |
| ೮ | ಸಹಜ ಮಾರ್ಗದರ್ಶನ (ಅನುವಾದ) | ಶ್ರೀ ತ. ಶ್ರೀಕಂಠಯ್ಯ | ೮ ೦೦ |
| ೯ | ಸಹಜಮಾರ್ಗ ಸಮೀಕ್ಷೆ | ಶ್ರೀ ರಾಘವೇಂದ್ರರಾವ (ಅನುವಾದ) ಶ್ರೀ ಶ್ರೀ. ಆ. ಸರ್ನಾಡ | ೧೫-೦೦ |
| ೧೦ | ರಾಜಯೋಗದ ಪ್ರಭಾವ | ಶ್ರೀ ರಾಮಚಂದ್ರಜಿ (ಅನುವಾದ) ಶ್ರೀ ಶ್ರೀ. ಆ. ಸರ್ನಾಡ | ೨೦-೦೦ |

ಪುಸ್ತಕಗಳು ದೊರೆಯುವ ವಿಳಾಸ :

"ಯೋಗಾಶ್ರಮ"

ಬನಶಂಕರೀನಗರ,

ಕೆಲಗೇರಿ ರಸ್ತೆ, ಧಾರವಾಡ-೮

SAMARTH GURU SHRI RAMCHANDRAJI MAHARAJ OF FATEHGARH (U.P.)

SHRI RAM CHANDRA MISSION SHAHJAHANPUR